ಸೋಮವಾರ, ಫೆಬ್ರುವರಿ 27, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 58 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸಿವಿಲ್ ಜಡ್ಜ್ ಪರೀಕ್ಷೆಗೆ ತಯಾರಿ ಹೇಗೆ? ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವಿ ನಂತರ ಮುಂದೇನು?..



ಈರುಳ್ಳಿ ರಫ್ತು ನಿಷೇಧಿಸಿಲ್ಲ: ಗೋಯಲ್ 10
ಜರ್ಮನಿ: ಭಾರತದ ಐಟಿ ನೌಕರರಿಗೆ ವೀಸಾ ಸರಾಗ 10
ಪ್ರಜಾವಾಣಿ@75 ಕನ್ನಡನಾಡಿನ ಕ್ರೀಡಾ ಕಲ್ಪವೃಕ್ಷ
ಉಗ್ರರ ಗುಂಡಿಗೆ ಕಾಶ್ಮೀರಿ ಪಂಡಿತ ಬಲಿ 11

ಮಹಾಧಿವೇಶನ ಸಮಾರೋಪ: ಐದು ಅಂಶಗಳ ಘೋಷಣೆ ಅಂಗೀಕಾರ

ವಿಪಕ್ಷ ಒಗ್ಗಟ್ಟು: 'ಕೈ' ಸಂಕಲ್ಪ

ಪ್ರಜಾವಾಣಿ ವಾರ್ತೆ

ರಾಯಪುರ: ಬಿಜೆಪಿಯ 'ಸರ್ವಾಧಿಕಾರಿ, ಕೋಮುವಾದಿ ಮತ್ತು ಸ್ವಜನ ಪಕ್ಷಪಾತ'ದ ವಿರುದ್ಧ ಸಮಾನಮನಸ್ಕ ಪಕ್ಷಗಳೆಲ್ಲವೂ 'ಸಾಮಾನ್ಯ, ರಚನಾತ್ಮಕ ಕಾರ್ಯಕ್ರಮ'ದ ಮೂಲಕ ಒಂದಾಗಬೇಕು ಎಂಬ ಪ್ರಸ್ತಾವವನ್ನು ಕಾಂಗ್ರೆಸ್ ಪಕ್ಷವು ಭಾನುವಾರ ಮುಂದಿಟ್ಟಿದೆ. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವ ಈ ಸಂದರ್ಭದಲ್ಲಿ ಪಕ್ಷದ ನಾಯಕರು 'ಶಿಸ್ತು ಮತ್ತು ಪೂರ್ಣ ಒಗ್ಗಟ್ಟಿನಿಂದ ಇರಬೇಕು ಎಂದೂ ಕರೆ ಕೊಡಲಾಗಿದೆ.

ಕಾಂಗ್ರೆಸ್ ಮಹಾಧಿವೇಶನದ ಕೊನೆಯ ದಿನವಾದ ಭಾನುವಾರ ಅಂಗೀಕರಿಸಲಾದ ಐದು ಅಂಶಗಳ 'ರಾಯಪುರ ಘೋಷಣೆ'ಯು ಈ ವಿಚಾರಗಳನ್ನು ಒಳಗೊಂಡಿದೆ. ಈ ಹಿಂದೆ ಜಾರಿ ಮಾಡಲಾಗಿದ್ದ ಉದಾರೀಕರಣ ನೀತಿಯು ದೇಶದ ಆಡಳಿತಕ್ಕೆ ನೀಲನಕ್ಷೆಯನ್ನು ಒದಗಿಸಿತ್ತು. ಈಗ ಅದರ ಅವಧಿಯು ಮುಗಿದಿದೆ. ದೇಶದ ತಯಾರಿಕಾ ವಲಯವನ್ನು ಸಶಕ್ತಗೊಳಿಸಿ ಅರ್ಥ ವ್ಯವಸ್ಥೆಗೆ ಪುನಶ್ಚೇತನ ನೀಡಲು ಹೊಸ ಮುನ್ನೋಟವೊಂದನ್ನು ರೂಪಿಸಲು ಕಾಲ ಪಕ್ವವಾಗಿದೆ ಎಂಬುದನ್ನೂ 'ಘೋಷಣೆ'ಯು ಸೂಕ್ಷ್ಮವಾಗಿ ಹೇಳಿದೆ.



ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಪ್ರತಿನಿಧಿಗಳತ್ತ ಕೈಬೀಸಿದರು

ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿಗೂ ಒತ್ತು ನೀಡಬೇಕಾಗಿದೆ. ಸಾಮಾಜಿಕ ನ್ಯಾಯದ ತಳಹದಿಯನ್ನು ಬಲಪಡಿಸಲು ಜಾತಿ ಸಮೀಕ್ಷೆಯನ್ನು ತಕ್ಷಣವೇ ಮಾಡಬೇಕಾದುದು ಅತ್ಯಗತ್ಯವಾಗಿದೆ. ಮಹಿಳಾ ಕೇಂದ್ರಿತ 'ನ್ಯಾಯ್' (ಕನಿಷ್ಠ ಆದಾಯ ಖಾತರಿ ಯೋಜನೆ, ಲೋಕಸಭೆಗೆ 2019ರಲ್ಲಿ ನಡೆದ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಈ ಭರವಸೆ ಇತ್ತು) ಮೂಲಕ ಸಂಪೂರ್ಣ ಸಾಮಾಜಿಕ ಸುರಕ್ಷೆಯನ್ನು ಖಾತರಿಪಡಿಸಬೇಕಿದೆ. ಸಾರ್ವತ್ರಿಕ ಆರೋಗ್ಯ ಹಕ್ಕು ಕಾಯ್ದೆಯನ್ನೂ ಜಾರಿಗೆ ತರಬೇಕಾಗಿದೆ ಎಂದು ಘೋಷಣೆಗಳಲ್ಲಿ ಹೇಳಲಾಗಿದೆ.

ಪಕ್ಷವನ್ನು ಬಲಪಡಿಸಬೇಕಾದ ಅಗತ್ಯ ಇದೆ ಮತ್ತು ಬಿಜೆಪಿ ವಿರೋಧಿ ಪಕ್ಷಗಳು ಒಗ್ಗಟ್ಟಾಗುವ ಮೂಲಕ ಲೋಕಸಭಾ ಚುನಾವಣೆಯನ್ನು ಎದುರಿಸಬೇಕಿದೆ ಎಂದು ಹೇಳಲಾಗಿದೆ. ಪಕ್ಷದಲ್ಲಿ ಗುಂಪುಗಾರಿಕೆ ಇದೆ ಎಂಬುದನ್ನು ಸೂಕ್ಷ್ಮವಾಗಿ ಒಪ್ಪಿಕೊಳ್ಳಲಾಗಿದ್ದು, ಅದು ಚುನಾವಣಾ ಗೆಲುವಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂಬ ಕಳವಳ ವ್ಯಕ್ತಪಡಿಸಲಾಗಿದೆ.

6ನೇ ಪುಟ ನೋಡಿ

ಆಡಳಿತದ ಕುರಿತು...

ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಕ್ಷೇತ್ರವು ಪುನಶ್ಚೇತನಗೊಳ್ಳುವ ಅಗತ್ಯ ಇದೆ. ಆ ಮೂಲಕ ಆರ್ಥಿಕತೆಯು ತ್ವರಿತವಾಗಿ ಬೆಳೆಯುವಂತೆ ಮಾಡಿ, ಉದ್ಯೋಗ ಸೃಷ್ಟಿಸಬೇಕಿದೆ. ಯುವ ಜನರಿಗೆ ಕ್ಲಸ್ಟರ್ ಆಧಾರಿತ ಕೌಶಲ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕಿದೆ. ಹೆಚ್ಚು ಕಾರ್ಮಿಕರ ಅಗತ್ಯ ಇರುವ ತಯಾರಿಕಾ ವಲಯಕ್ಕೆ ಸೀಮಿತವಾದ ಹಣಕಾಸು ನೆರವು ಮತ್ತು ತಾಂತ್ರಿಕ ಬೆಂಬಲ ರೂಪಿಸಬೇಕಿದೆ ಎಂದು ಘೋಷಣೆಯಲ್ಲಿ ವಿವರಿಸಲಾಗಿದೆ.

6ನೇ ಪುಟ ನೋಡಿ

ಇಂದು ರಾಜ್ಯಕ್ಕೆ ಪ್ರಧಾನಿ ಮೋದಿ

ಶಿವಮೊಗ್ಗ/ಬೆಳಗಾವಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ (ಫೆ.27) ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

ಶಿವಮೊಗ್ಗ– ಭದ್ರಾವತಿ ನಗರಗಳ ಮಧ್ಯೆ ಇರುವ ಸೋಗಾನೆ ಬಳಿ ನಿರ್ಮಾಣಗೊಂಡಿರುವ ವಿಮಾನ ನಿಲ್ದಾಣವನ್ನು ಉದ್ಘಾಟಿಸುವರು. ಇದೇ ವೇಳೆ ಶಿವಮೊಗ್ಗ– ಶಿಕಾರಿಪುರ–ರಾಣೆಬೆನ್ನೂರು ನಡುವೆ ನೂತನ ರೈಲು ಮಾರ್ಗ ನಿರ್ಮಾಣ ಕಾಮಗಾರಿಗೂ ಚಾಲನೆ ನೀಡಲಿದ್ದಾರೆ.

ಬೆಳಗಾವಿಗೆ ಮಧ್ಯಾಹ್ನ 2 ಗಂಟೆಗೆ ಭೇಟಿ ನೀಡುವ ಮೋದಿ, ಇಲ್ಲಿನ ರಾಣಿ ಚನ್ನಮ್ಮ ವೃತ್ತದಿಂದ ರೋಡ್ ಶೋ ನಡೆಸಲಿದ್ದಾರೆ. ನಂತರ ಮಾಲಿನಿ ಸಿಟಿ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಒಂದು ಲಕ್ಷ ಕುರ್ಚಿಗಳನ್ನು ಹಾಕಲಾಗಿದೆ. ಲಕ್ಷ ಜನರಿಗೆ ಊಟ, ನೀರಿನ ವ್ಯವಸ್ಥೆ ಇರಲಿದೆ ಎಂದು ಮೂಲಗಳು ತಿಳಿಸಿವೆ.

ಇನ್ನಷ್ಟು ಸುದ್ದಿಗಳು 4

ದೆಹಲಿ: ಅಬಕಾರಿ ನೀತಿ ಜಾರಿ ಹಗರಣ

ಸಿಸೋಡಿಯಾ ಬಂಧನ

ನವದೆಹಲಿ (ಪಿಟಿಐ): ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಸಿಬಿಐ ಭಾನುವಾರ ಬಂಧಿಸಿದೆ. ಅಬಕಾರಿ ನೀತಿ ಜಾರಿ ಪ್ರಕರಣದಲ್ಲಿ ಸಿಸೋಡಿಯಾ ಅವರನ್ನು ಎಂಟು ತಾಸು ವಿಚಾರಣೆಗೆ ಒಳಪಡಿಸಿದ ಸಿಬಿಐ ಅಧಿಕಾರಿಗಳು, ಬಳಿಕ ಅವರನ್ನು ಬಂಧಿಸಿದರು.

ವಿಚಾರಣೆ ವೇಳೆ ಸಿಸೋಡಿಯಾ ಅವರು ನೀಡಿದ ಉತ್ತರಗಳು ತೃಪ್ತಿಕರವಾಗಿ ಇರಲಿಲ್ಲ, ಈ ಕಾರಣಕ್ಕೆ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸುವ ಅಗತ್ಯ ಉಂಟಾಯಿತು ಎಂದು ಸಿಬಿಐ ತಿಳಿಸಿದೆ.

ಸಿಸೋಡಿಯಾ ವಿಚಾರಣೆಗೆ ಸಹಕರಿಸುತ್ತಿಲ್ಲ ಹಾಗೂ ಹಗರಣ ಕುರಿತ ಪ್ರಮುಖ ವಿಚಾರಗಳಲ್ಲಿ ಸ್ಪಷ್ಟ ಉತ್ತರ ನೀಡಲು ಹಿಂದೇಟು ಹಾಕಿದರು ಎಂದು ಅಧಿಕಾರಿಗಳು ಹೇಳಿದರು. ಎಫ್ಐಆರ್‌ನಲ್ಲಿ ಹೆಸರು ಉಲ್ಲೇಖವಾಗಿರುವ ದಿನೇಶ್ ಅರೋರಾ ಹಾಗೂ ಇತರರ ಜೊತೆಗಿನ ನಂಟಿನ ಕುರಿತು ಕೇಳಿದ ಪ್ರಶ್ನೆಗಳಿಗೆ ಅವರು ಸಮರ್ಪಕ ಉತ್ತರ ನೀಡಲಿಲ್ಲ ಎಂದು ಹೇಳಿದರು.

ಸಿಬಿಐ ವಿಚಾರಣೆಗೆ ತೆರೆದ ಕಾರಿನಲ್ಲಿ ಭಾನುವಾರ ಬೆಳಿಗ್ಗೆ ಮೆರವಣಿಗೆಯಲ್ಲಿ ಹೊರಟ ಅವರು, ತಾವು ಬಂಧನಕ್ಕೆ ಒಳಗಾಗಬಹುದು ಎಂದು ಹೇಳಿದರು. 'ಒಂದು ವೇಳೆ ನಾನು ಜೈಲಿಗೆ ಹೋದರೆ ಕಾರ್ಯಕರ್ತರು ನನ್ನ ಕುಟುಂಬದ ಯೋಗಕ್ಷೇಮ ನೋಡಿಕೊಳ್ಳಲಿದ್ದಾರೆ' ಎಂದರು.



ಸಿಬಿಐ ಕಚೇರಿಗೆ ಭಾನುವಾರ ವಿಚಾರಣೆಗೆ ಹೋಗುವ ಮಾರ್ಗದಲ್ಲಿ ರೋಡ್‌ಷೋ ನಡೆಸಿದ ಮನೀಷ್ ಸಿಸೋಡಿಯಾ ಬೆಂಬಲಿಗರತ್ತ ಕೈಬೀಸಿದರು—ಪಿಟಿಐ ಚಿತ್ರ

ಸಿಸೋಡಿಯಾ ಅವರು ಸಿಬಿಐ ಕಚೇರಿಗೆ ಹೋಗುವ ಮುನ್ನ ಬೆಂಬಲಿಗರೊಂದಿಗೆ ರಾಜಘಾಟ್‌ಗೆ ಭೇಟಿ ನೀಡಿದರು. ಜೆಎಲ್‌ಎನ್ ಮೈದಾನ ರಸ್ತೆಯಲ್ಲಿ, ಸಿಬಿಐ ಕಚೇರಿಗೆ 500 ಮೀಟರ್ ದೂರದಿಂದಲೇ ಪೊಲೀಸರು ಬ್ಯಾರಿಕೇಡ್ ಹಾಕಿದ್ದರು. ಕಚೇರಿಯತ್ತ ಪ್ರತಿಭಟನಕಾರರು ನುಗ್ಗುವುದನ್ನು ತಡೆಯಲು ಭದ್ರತೆ ಕಲ್ಪಿಸಲಾಗಿತ್ತು.

ಇನ್ನೊಂದು ಸುದ್ದಿ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶ್ರೀಮಂತರ ಪಟ್ಟಿ: 30ನೇ ಸ್ಥಾನಕ್ಕೆ ಕುಸಿದ ಅದಾನಿ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಅವರು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ಮೂರನೇ ಸ್ಥಾನದಿಂದ 30ನೇ ಸ್ಥಾನಕ್ಕೆ ಕುಸಿದಿದ್ದಾರೆ.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿ ಬಿಡುಗಡೆ ಆದ ಬಳಿಕ ಅದಾನಿ ಸಂಪತ್ತು ₹ 6.64 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ವರದಿ ಬಿಡುಗಡೆಗೂ ಮೊದಲು ಅವರ ಸಂಪತ್ತು ಮೌಲ್ಯವು ₹9.96 ಲಕ್ಷ ಕೋಟಿಯಷ್ಟು ಇತ್ತು. ಆದರೆ ಇದೀಗ ಅವರ ಸಂಪತ್ತು ಮೌಲ್ಯ ₹3.32 ಲಕ್ಷ ಕೋಟಿಗೆ ಇಳಿಕೆ ಆಗಿದ್ದು, ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ 30ನೇ ಸ್ಥಾನಕ್ಕೆ ಕುಸಿಯುವಂತಾಗಿದೆ.

ಕಳೆದ ವರ್ಷ ಮುಕೇಶ್ ಅಂಬಾನಿ ಅವರನ್ನು ಹಿಂದಿಕ್ಕುವ ಮೂಲಕ ಅದಾನಿ ಅವರು ಏಷ್ಯಾದ ಸಿರಿವಂತರ ಪಟ್ಟಿಯಲ್ಲಿ ಮೊದಲ ಮತ್ತು ವಿಶ್ವದ ಮೂರನೇ ಸಿರಿವಂತ ಉದ್ಯಮಿ ಸ್ಥಾನಕ್ಕೆ ಏರಿದ್ದರು. ಮುಕೇಶ್ ಅಂಬಾನಿ ಅವರು ವಿಶ್ವದ ಸಿರಿವಂತರ ಪಟ್ಟಿಯಲ್ಲಿ ಸದ್ಯ 10ನೇ ಸ್ಥಾನದಲ್ಲಿ ಇದ್ದಾರೆ. ಅವರ ಒಟ್ಟು ಸಂಪತ್ತು ಮೌಲ್ಯ ₹ 6.78 ಲಕ್ಷ ಕೋಟಿ ಇದೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ

ನಾಳೆಯಿಂದ ಹೆದ್ದಾರಿ ಟೋಲ್ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯ ಮೊದಲ ಹಂತದ ಟೋಲ್ ಕೇಂದ್ರಗಳು ಮಂಗಳವಾರದಿಂದ (ಫೆ.28) ಕಾರ್ಯಾರಂಭ ಮಾಡಲಿವೆ.

117 ಕಿ.ಮೀ ಉದ್ದದ ಹೆದ್ದಾರಿಯ ಬೆಂಗಳೂರು–ನಿಡಘಟ್ಟ (56 ಕಿ.ಮೀ) ವರೆಗಿನ ಮೊದಲ ಹಂತದ ಕಾಮಗಾರಿ ಮುಕ್ತಾಯಗೊಂಡಿದ್ದು, ಈ ತಿಂಗಳಾಂತ್ಯದಿಂದಲೇ ಟೋಲ್ ಸಂಗ್ರಹಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಮಾರ್ಚ್ 11ರಂದು ಪ್ರಧಾನಿ ನರೇಂದ್ರ ಮೋದಿ ಹೆದ್ದಾರಿ ಉದ್ಘಾಟಿಸಲಿದ್ದಾರೆ.

ಆರು ಪಥಗಳ ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸುವವರಿಗೆ ಈ ಟೋಲ್ ಅನ್ವಯ ಆಗಲಿದೆ. ತಲಾ ಎರಡು ಪಥಗಳ ಸರ್ವೀಸ್ ರಸ್ತೆಯಲ್ಲಿನ ಸಂಚಾರಕ್ಕೆ ಯಾವುದೇ ಟೋಲ್ ಇರುವುದಿಲ್ಲ.

ವಿವಿಧ ಮಾದರಿಯ ವಾಹನಗಳಿಗೆ ಪ್ರತ್ಯೇಕ ದರ ನಿಗದಿ ಮಾಡಲಾಗಿದ್ದು, ಕನಿಷ್ಠ ₹135 ರಿಂದ ಟೋಲ್ ಆರಂಭವಾಗುತ್ತವೆ. ಸ್ಥಳೀಯ ವಾಹನಗಳಿಗೆ ₹70 ನಿಗದಿಪಡಿಸಲಾಗಿದೆ. ನಿಯಮಿತವಾಗಿ ಪ್ರಯಾಣಿಸುವವರಿಗೆ ತಿಂಗಳ ಪಾಸ್ ಸೌಲಭ್ಯವೂ ಇದೆ. ₹4,425ರಿಂದ ಆರಂಭವಾಗಿ ₹29,255 ಮೊತ್ತದವರೆಗೂ ವಿವಿಧ ರೀತಿಯ ಪಾಸ್ ಲಭ್ಯ ಇವೆ. ಬೆಂಗಳೂರು ನಗರ ಜಿಲ್ಲೆಯ ಕಣಮಿಣಕಿ ಗ್ರಾಮದ ಬಳಿ ಟೋಲ್ ನಿರ್ಮಿಸಲಾಗಿದ್ದು, ಬೆಂಗಳೂರಿನಿಂದ ಮೈಸೂರು ಕಡೆಗೆ ಪ್ರಯಾಣಿಸುವವರು ಇಲ್ಲಿ ಟೋಲ್ ನೀಡಬೇಕು.



ಕಣಮಿಣಕಿ ಗ್ರಾಮದ ಬಳಿಯ ಟೋಲ್ ಸಂಗ್ರಹ ಕೇಂದ್ರ

ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿ ಬಳಿ ಇರುವ ಟೋಲ್‌ನಲ್ಲಿ ಮೈಸೂರು ಕಡೆಯಿಂದ ಪ್ರಯಾಣಿಸುವವರು ಟೋಲ್ ಕಟ್ಟಿ ಬೆಂಗಳೂರಿನತ್ತ ಬರಬೇಕು. ಈ ಕೇಂದ್ರಗಳು ತಲಾ 11 ಗೇಟು ಹೊಂದಿದ್ದು, ಫಾಸ್ಟ್ಯಾಗ್ ಸಹಿತ ವಿವಿಧ ಸೌಲಭ್ಯ ಒಳಗೊಳ್ಳಲಿವೆ.

ದಶಪಥ ಅಪೂರ್ಣ; ಉದ್ಘಾಟನೆಗೆ ದಿನ ನಿಗದಿ! 6

ಯಾವುದಕ್ಕೆ ಎಷ್ಟು ಶುಲ್ಕ? (ಮೊತ್ತ–ರೂಪಾಯಿಗಳಲ್ಲಿ)

ವಾಹನ ಮಾದರಿ	ಏಕಮುಖ ಸಂಚಾರ	ರಿಟರ್ನ್ ಜರ್ನಿ (24 ಗಂಟೆ ಒಳಗೆ)	ಸ್ಥಳೀಯ ವಾಹನಗಳಿಗೆ	ತಿಂಗಳ ಪಾಸ್
ಕಾರು/ಜೀಪ್/ವ್ಯಾನ್	135	205	70	4,525
ಎಲ್‌ಜಿವಿ, ಎಲ್‌ಸಿವಿ, ಮಿನಿ ಬಸ್	220	330	110	7,315
ಟ್ರಕ್/ಬಸ್	460	690	230	15,325
3 ಆಕ್ಸೆಲ್ ವಾಣಿಜ್ಯ ವಾಹನ	500	750	250	16,715
ಭಾರಿ ನಿರ್ಮಾಣ ಯಂತ್ರ/ ಬಹು ಆಕ್ಸೆಲ್ ವಾಹನಗಳು (4-6 ಆಕ್ಸೆಲ್)	720	1,080	360	24,030
ಅತಿ ಭಾರದ ವಾಹನಗಳು (7ಕ್ಕಿಂತ ಹೆಚ್ಚು ಆಕ್ಸೆಲ್)	880	1,315	440	29,255

ಮಾರ್ಗ ಮಧ್ಯದ ನಗರಗಳ ಪಾಡೇನು?

ಬೆಂಗಳೂರು–ನಿಡಘಟ್ಟ ಮಾರ್ಗ ಮಧ್ಯದಲ್ಲಿ ಬಿಡದಿ, ರಾಮನಗರ, ಚನ್ನಪಟ್ಟಣ ಬರುತ್ತವೆ. ಈ ನಗರಗಳಿಗೆ ಪ್ರಯಾಣಿಸುವವರು ಪೂರ್ಣ ಪ್ರಮಾಣದಲ್ಲಿ ಟೋಲ್ ಕಟ್ಟಬೇಕೆ ಅಥವಾ ಕಡ್ಡಾಯವಾಗಿ ಸರ್ವೀಸ್ ರಸ್ತೆಯಲ್ಲಿಯೇ ಪ್ರಯಾಣಿಸಬೇಕೆ ಎಂಬುದನ್ನು ಪ್ರಾಧಿಕಾರವು ಇನ್ನೂ ಸ್ಪಷ್ಟಪಡಿಸಿಲ್ಲ. ಹೆದ್ದಾರಿ ಮಾರ್ಗ ಮಧ್ಯದ ಪ್ರಮುಖ ನಗರಗಳಿಗೆ ನೈಸ್ ರಸ್ತೆ ಮಾದರಿಯಲ್ಲಿ ಪ್ರವೇಶ ಮತ್ತು ನಿರ್ಗಮನ ಟೋಲ್ ತೆರೆಯಲು ಪ್ರಾಧಿಕಾರ ಯೋಜಿಸಿದ್ದು, ಇದರ ಕಾಮಗಾರಿ ಇನ್ನಷ್ಟೇ ಆರಂಭ ಆಗಬೇಕಿದೆ. ಈ ಬಗ್ಗೆ ಪ್ರತಿಕ್ರಿಯೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ತಮಿಳುನಾಡಿನ ಪ್ರಸ್ತಾವಕ್ಕೆ ತಾತ್ವಿಕ ಒಪ್ಪಿಗೆ ನೀಡಿದ ಕೇಂದ್ರ

ಹೊಸೂರಿಗೆ ಮೆಟ್ರೊ: ಶೀಘ್ರವೇ ಕಾರ್ಯಸಾಧ್ಯತಾ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ 2ನೇ ಹಂತದ ಆರ್‌.ವಿ.ರಸ್ತೆ–ಬೊಮ್ಮಸಂದ್ರ(ರೀಚ್‌- 5) ಮಾರ್ಗವನ್ನು ಹೊಸೂರು ತನಕ ವಿಸ್ತರಿಸುವ ಪ್ರಸ್ತಾವ ಮತ್ತೊಂದು ಹೆಜ್ಜೆ ಮುಂದೆ ಹೋಗಿದೆ. ಕಾರ್ಯಸಾಧ್ಯತಾ ಅಧ್ಯಯನಕ್ಕೆ ಕೇಂದ್ರ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದ್ದು, ಶೀಘ್ರದಲ್ಲೇ ತಮಿಳುನಾಡು ಸರ್ಕಾರ ಅಧ್ಯಯನ ಆರಂಭಿಸಲಿದೆ.

ಹೊಸೂರು ರಸ್ತೆಯಲ್ಲಿ ಆರ್‌.ವಿ.ರಸ್ತೆಯಿಂದ ಬೊಮ್ಮಸಂದ್ರ ತನಕದ ಮೆಟ್ರೊ ರೈಲು ಮಾರ್ಗದ(ಹಳದಿ ಮಾರ್ಗ) ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. 2023ರಲ್ಲಿ ಕಾರ್ಯಾರಂಭ ಆಗಲಿರುವ ಮೆಟ್ರೊ ರೈಲು ಮಾರ್ಗಗಳಲ್ಲಿ ಇದೂ ಒಂದು. ಈ ಮಾರ್ಗವನ್ನು ಹೊಸೂರು ತನಕ ವಿಸ್ತರಣೆ ಮಾಡಬೇಕು ಎಂಬ ತಮಿಳುನಾಡು ಸರ್ಕಾರದ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ 2022ರ ಜೂನ್‌ನಲ್ಲಿ ಒಪ್ಪಿಗೆ ಸೂಚಿಸಿತ್ತು. 'ಬೊಮ್ಮಸಂದ್ರದಿಂದ ಹೊಸೂರು ನಡುವಿನ ಮೆಟ್ರೊ ರೈಲು ಮಾರ್ಗ ವಿಸ್ತರಿಸುವ ಸಂಬಂಧ ತಮಿಳುನಾಡು ಸರ್ಕಾರ ಅಧ್ಯಯನ ನಡೆಸಬಹುದು' ಎಂದು ರಾಜ್ಯ ಸರ್ಕಾರ ತಿಳಿಸಿತ್ತು.


ಮೆಟ್ರೊ ರೈಲು

ಕರ್ನಾಟಕ ಸರ್ಕಾರದಿಂದ ತಾತ್ವಿಕ ಒಪ್ಪಿಗೆ ದೊರೆತ ಬೆನ್ನಲ್ಲೇ ತಮಿಳುನಾಡು ಸರ್ಕಾರ ಚೆನ್ನೈ ಮೆಟ್ರೊ ರೈಲು ನಿಗಮದ ಮೂಲಕ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಅದಕ್ಕೆ ಕೇಂದ್ರದಿಂದ ಈಗ ಹಸಿರು ನಿಶಾನೆ ದೊರೆತಿದೆ.

'ಫೆ.21ರಂದು ಒಪ್ಪಿಗೆ ದೊರೆತಿದ್ದು, ಅಧ್ಯಯನಕ್ಕೆ ತಮಿಳುನಾಡು ಸರ್ಕಾರ ₹75 ಲಕ್ಷ ಅನುದಾನವನ್ನೂ ಒದಗಿಸಿದೆ' ಎಂದು ತಮಿಳುನಾಡಿನ ಕೃಷ್ಣಗಿರಿ ಸಂಸದ ಡಾ. ಎ. ಚೆಲ್ಲಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಯೋಜನೆಗೆ ತಗಲುವ ವೆಚ್ಚವನ್ನು ಎರಡೂ ಸರ್ಕಾರಗಳು ಹಂಚಿಕೆ ಮಾಡಿಕೊಳ್ಳಬೇಕಾಗುತ್ತದೆ. ಕಾರ್ಯಾಚರಣೆ ಸಂದರ್ಭದಲ್ಲೂ ಸಮನ್ವಯದ ಅಗತ್ಯವಿದೆ. ಹೊಸೂರು ತನಕ ಮೆಟ್ರೊ ರೈಲು ವಿಸ್ತರಣೆಯಾದರೆ ಎರಡೂ ರಾಜ್ಯಗಳ ಜನರಿಗೆ ಪರಸ್ಪರ ಅನುಕೂಲವಾಗಲಿದೆ' ಎಂದು ಅವರು ಹೇಳಿದರು.

ಬೊಮ್ಮಸಂದ್ರದಿಂದ ಹೊಸೂರಿಗೆ 20.5 ಕಿಲೋ ಮೀಟರ್ ಮೆಟ್ರೊ ರೈಲು ಮಾರ್ಗ ನಿರ್ಮಾಣ ಆಗಬೇಕಿದೆ. ಈ ಪೈಕಿ ಕರ್ನಾಟಕದ ವ್ಯಾಪ್ತಿಯಲ್ಲಿ 11.7 ಕಿಲೋ ಮೀಟರ್ ಇದೆ. ಉಳಿದ 8.8 ಕಿಲೋ ಮೀಟರ್ ಮಾರ್ಗ ರಾಜ್ಯದ ಗಡಿ ದಾಟಿ ನಿರ್ಮಾಣ ಆಗಬೇಕಿದೆ. ಈ ಯೋಜನೆ ಕಾರ್ಯಸಾಧುವಾದರೆ ದಕ್ಷಿಣ ಭಾರತದ ಮೊದಲನೇ ಅಂತರರಾಜ್ಯ ಮೆಟ್ರೊ ರೈಲು ಮಾರ್ಗ ಇದಾಗಲಿದೆ.

ಆದರೆ, ಈ ಯೋಜನೆ ಪ್ರಸ್ತಾಪವಾದಾಗ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿತ್ತು. ಹೊಸೂರಿಗೆ ಮೆಟ್ರೊ ಸಂಪರ್ಕ ಕಲ್ಪಿಸಿದರೆ ರಾಜ್ಯಕ್ಕೆ ದಕ್ಕಬೇಕಾದ ಕೈಗಾರಿಕೆಗಳು, ಉದ್ದಿಮೆಗಳು ಹೊಸೂರಿಗೆ ಸ್ಥಳಾಂತರಗೊಳ್ಳಲಿವೆ ಎಂದು ಆತಂಕ ವ್ಯಕ್ತವಾಗಿತ್ತು. ಹೊಸೂರಿನ ಬದಲಿಗೆ ಹೊಸಕೋಟೆ, ದಾಬಸ್‌ಪೇಟೆ, ಚಿಕ್ಕಬಳ್ಳಾಪುರಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸಬೇಕು ಎಂದು ನೆಟ್ಟಿಗರು ಒತ್ತಾಯಿಸಿದ್ದರು.

ಮತ್ತೊಂದು ಡಬಲ್ ಡೆಕ್ಕರ್ ಮಾರ್ಗ

3ನೇ ಹಂತದ ಮೆಟ್ರೊ ರೈಲು ಮಾರ್ಗದಲ್ಲಿ ನಗರದ ಎರಡನೇ ಡಬಲ್ ಡೆಕ್ಕರ್ ಮಾರ್ಗ ನಿರ್ಮಾಣವಾಗಲಿದೆ.

ನಿರ್ಮಾಣ ಹಂತದಲ್ಲಿರುವ ಹಳದಿ ಮಾರ್ಗದಲ್ಲಿ ಈಗಾಗಲೇ ಡಬಲ್ ಡೆಕ್ಕರ್ ಮಾರ್ಗ ನಿರ್ಮಾಣವಾಗಿದೆ. ಈ ವರ್ಷದ ಅಂತ್ಯಕ್ಕೆ ಕಾರ್ಯಾರಂಭವಾಗುವ ಸಾಧ್ಯತೆ ಇದೆ.

'ಜೆ.ಪಿ. ನಗರ ನಾಲ್ಕನೇ ಹಂತದಿಂದ ಹೆಬ್ಬಾಳ ಸಂಪರ್ಕಿಸುವ 31 ಕಿ.ಮೀ ಮಾರ್ಗ ಬಹುತೇಕ ಹೊರ ವರ್ತುಲ ರಸ್ತೆಯಲ್ಲಿ ಸಾಗಲಿದೆ. ಇಲ್ಲಿಯೂ ಕೆಲವೆಡೆ ಡಬಲ್ ಡೆಕ್ಕರ್ ಮಾರ್ಗ ನಿರ್ಮಿಸುವ ಉದ್ದೇಶ ಇದೆ. ಡಾಲ್ಮಿಯಾ ವೃತ್ತದಲ್ಲಿರುವ ರಸ್ತೆ ಮೇಲ್ಸೇತುವೆ ಉರುಳಿಸಲಾಗುತ್ತದೆ ಎಂಬುದು ಸುಳ್ಳು. ಈ ಯೋಜನೆ ಇನ್ನೂ ಪ್ರಸ್ತಾವ ಹಂತದಲ್ಲಿದ್ದು, ಕೇಂದ್ರ ಸರ್ಕಾರ ಒಪ್ಪಿಗೆ ದೊರಕಿದ ಬಳಿಕವೇ ಎಲ್ಲವೂ ಅಂತಿಮವಾಗಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

ಬೆಂಗಳೂರು–ಮೈಸೂರು ಎಲೆಕ್ಟ್ರಿಕ್ ಬಸ್‌ಗೆ ಉತ್ತಮ ಪ್ರತಿಕ್ರಿಯೆ

ಒಂದೂವರೆ ತಿಂಗಳಲ್ಲಿ ₹9.13 ಲಕ್ಷ ವರಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು–ಬೆಂಗಳೂರು ನಡುವೆ ಕಾರ್ಯಾಚರಣೆ ಮಾಡುತ್ತಿರುವ ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್‌ಗೆ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಒಂದೂವರೆ ತಿಂಗಳಲ್ಲಿ ₹9.13 ಲಕ್ಷ ವರಮಾನ ಸಂಗ್ರಹಿಸಿದೆ.

ಕೆಎಸ್‌ಆರ್‌ಟಿಸಿಗೆ ಬಂದಿರುವ ಮೊದಲ ಎಲೆಕ್ಟ್ರಿಕ್ ಬಸ್ 'ಪವರ್ ಪ್ಲಸ್' ಜ.16ರಿಂದ ಕಾರ್ಯಾಚರಣೆ ಆರಂಭಿಸಿತ್ತು. ಜನವರಿ ಅಂತ್ಯದೊಳಗೆ ₹3.77 ಲಕ್ಷ ವರಮಾನ ಸಂಗ್ರಹಿಸಿದ್ದು, ಫೆಬ್ರುವರಿಯಲ್ಲಿ ₹5.36 ಲಕ್ಷ ವರಮಾನ ಸಂಗ್ರಹಿಸಿದೆ.

ಪ್ರತಿ ಕಿಲೋ ಮೀಟರ್‌ಗೆ ₹68 ವೆಚ್ಚವಾಗುತ್ತಿದ್ದು, ಸರಾಸರಿ ₹83.77 ವರಮಾನ ಸಂಗ್ರಹವಾಗಿದೆ. ಇದು ಕೆಎಸ್‌ಆರ್‌ಟಿಸಿ ಅಧಿಕಾರಿಗಳಲ್ಲಿ ಹೊಸ ಹುರುಪು ತಂದಿದ್ದು, ಶೀಘ್ರದಲ್ಲೇ ಇನ್ನಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ರಸ್ತೆಗಿಳಿಸಲು ಸಜ್ಜಾಗುತ್ತಿದ್ದಾರೆ.



ಎಲೆಕ್ಟ್ರಿಕ್ ಬಸ್

'ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮೈಸೂರಿಗೆ ಒಂದೇ ಒಂದು ಬಸ್ ಹೋಗಿ ಬರುತ್ತಿದ್ದು, ಆನ್‌ಲೈನ್ ಬುಕಿಂಗ್‌ಗೆ ಇನ್ನೂ ಅವಕಾಶ ನೀಡಿಲ್ಲ. 50 ಬಸ್‌ಗಳು ರಸ್ತೆಗೆ ಇಳಿದ ಬಳಿಕ ಆನ್‌ಲೈನ್‌ನಲ್ಲಿ ಆಸನ ಕಾಯ್ದಿರಿಸಲು ಅವಕಾಶ ನೀಡಲಾಗುವುದು' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ತಿಳಿಸಿದರು.

ಇನ್ನು 10 ದಿನಗಳಲ್ಲಿ 25 ಎಲೆಕ್ಟ್ರಿಕ್ ಬಸ್‌ಗಳು ಕೆಎಸ್‌ಆರ್‌ಟಿಗೆ ಸೇರ್ಪಡೆಯಾಗಲಿವೆ. ಮಾರ್ಚ್ 15ರ ಒಳಗೆ ಎಲ್ಲ 50 ಬಸ್‌ಗಳು ರಸ್ತೆಗೆ ಇಳಿಯಲಿವೆ ಎಂದು ವಿವರಿಸಿದರು.

ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ನಲ್ಲಿ ಮೈಸೂರಿಗೆ ಹೋಗಲು ಪ್ರಯಾಣ ದರ ₹300 ಮಾತ್ರ ಇದ್ದು, ಜನ ಉತ್ಸಾಹದಿಂದ ಬಸ್ ಹತ್ತುತ್ತಿದ್ದಾರೆ. ಬೇಸಿಗೆ ಇರುವುದರಿಂದ ಮುಂದಿನ ದಿನಗಳಲ್ಲಿ ಎಲ್ಲ ಎಲೆಕ್ಟ್ರಿಕ್ ಬಸ್‌ಗಳಿಗೂ ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಲಿದೆ ಎಂದು ಅನ್ಬುಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಮಡಿಕೇರಿ, ವಿರಾಜಪೇಟೆ, ಶಿವಮೊಗ್ಗ, ದಾವಣಗೆರೆ ಮತ್ತು ಚಿಕ್ಕಮಗಳೂರಿಗೆ ಎಲೆಕ್ಟ್ರಿಕ್ ಬಸ್‌ಗಳು ಕಾರ್ಯಾಚರಣೆ ಮಾಡಲು ಕೆಎಸ್‌ಆರ್‌ಟಿಸಿ ಉದ್ದೇಶಿಸಿದೆ.

ಅಂಬಾರಿ ಉತ್ಸವ ಕಾರ್ಯಾಚರಣೆ ಆರಂಭ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಉದ್ಘಾಟನೆ ಮಾಡಿದ ಕೆಎಸ್‌ಆರ್‌ಟಿಸಿಯಲ್ಲೇ ಐಶಾರಾಮಿ ಬಸ್ 'ಅಂಬಾರಿ ಉತ್ಸವ' ಭಾನುವಾರದಿಂದ ಕಾರ್ಯಾಚರಣೆ ಆರಂಭಿಸಿವೆ.

ಮೊದಲ ಬಸ್ ಮಂಗಳೂರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿತು. ಬಸ್‌ಗೆ ಹತ್ತಿದ ಪ್ರಯಾಣಿಕರಿಗೆ ಅಧಿಕಾರಿಗಳು ಗುಲಾಬಿ ಹೂ ನೀಡಿ ಸ್ವಾಗತಿಸಿದರು. ಮೊದಲ ಬಸ್‌ನಲ್ಲಿ ಎಲ್ಲಾ ಸೀಟುಗಳು ಭರ್ತಿಯಾಗಿದ್ದವು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

'ಬಿಐಸಿ ಹಬ್ಬ'ಕ್ಕೆ ಸಂಭ್ರಮದ ತೆರೆ • ಹೂವಿನ ಕತೆ, ಮಡಿವಾಳರ ವ್ಯಥೆ ಬಿಚ್ಚಿಟ್ಟ ಕಿರುಚಿತ್ರಗಳು • ಲಾಲ್‌ಬಾಗ್ ಇತಿಹಾಸದ ಮೆಲುಕು

ವಿಚಾರಗಳ ಮಂಥನ: ಸಂಗೀತದ ಅನುರಣನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತದ ಹೊನಲು, ಗೋಷ್ಠಿಗಳಲ್ಲಿ ವಿಚಾರಗಳ ಮಂಥನ, ಮಕ್ಕಳಿಗೆ ಕಾರ್ಯಾಗಾರ ಹಾಗೂ ಕಿರುಚಿತ್ರ ಪ್ರದರ್ಶನಗಳು 'ಬಿಐಸಿ ಹಬ್ಬ'ದ ಎರಡನೇ ದಿನವನ್ನು ಚೆಂದಗಾಣಿಸಿಕೊಟ್ಟಿತು. ಸಾಹಿತ್ಯಾಸಕ್ತರು, ಚಿಣ್ಣರು, ಯುವಕ–ಯುವತಿಯರು ಕಾರ್ಯಕ್ರಮಗಳಲ್ಲಿ ಮಿಂದೇಳುವುದರೊಂದಿಗೆ ಹಬ್ಬವು ಭಾನುವಾರ ಸಡಗರದಿಂದ ತೆರೆ ಕಂಡಿತು.

ದೊಮ್ಮಲೂರಿನಲ್ಲಿರುವ 'ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ)'ದಲ್ಲಿ ನಡೆದ ಐದನೇ ಆವೃತ್ತಿಯ ಹಬ್ಬದಲ್ಲಿ ಹಲವು ವೈಚಾರಿಕ ವಿಚಾರಗಳು ಹೊರಹೊಮ್ಮಿದವು.

ದೆಹಲಿಯ ಶಾಶ್ವತಿ ಮಂಡಲ್ ಅವರ ಹಿಂದೂಸ್ತಾನಿ ಸಂಗೀತ ಕಛೇರಿಗೆ ಸಂಗೀತಾಸಕ್ತರು ತಲೆದೂಗಿದರು.

ಬೆಂಗಳೂರು ಕುರಿತು ಆರು ಕಿರುಚಿತ್ರಗಳು ಪ್ರದರ್ಶನಗೊಂಡವು. ರೆಹಾನ್ ಡಿಯಾಜ್ ಅವರು ಬೆಂಗಳೂರಿನ ರುದ್ರಭೂಮಿ ಹಾಗೂ ಧೋಬಿ ಘಾಟ್ ಸ್ಥಳ ಆಧರಿಸಿ, ನಿರ್ಮಿಸಿದ ಕಿರುಚಿತ್ರಗಳು ಗಮನ ಸೆಳೆದವು.

ರುದ್ರಭೂಮಿ ಕುರಿತ ಚಿತ್ರದ ಕೊನೆಯಲ್ಲಿ 'ಸಾವಿನ ಸ್ಥಳವಲ್ಲ. ನಿಶ್ಚಲ ನೆಲೆಗಳ ಬೀಡು...' ಎಂದು ಬರೆದ ಸಾಲು ಪ್ರೇಕ್ಷಕರನ್ನು ಚಿಂತನೆಗೆ ಹಚ್ಚುವಂತೆ ಮಾಡಿತು.

'ಬೇರೆ ನಗರಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿರುವ ರುದ್ರಭೂಮಿಗಳು ವಿಶಾಲವಾಗಿವೆ. ಈ ಸ್ಥಳಗಳ ಮಹತ್ವ ತಿಳಿಸುವ ಉದ್ದೇಶದಿಂದ ಈ ವಿಷಯ ಆಯ್ಕೆ ಮಾಡಿಕೊಂಡಿದ್ದೇನೆ' ಎಂದು ರೆಹಾನ್ ಸಂವಾದದಲ್ಲಿ ಹೇಳಿದರು.

ಧೋಬಿ ಘಾಟ್ ಕಿರುಚಿತ್ರದಲ್ಲಿ ಮಡಿವಾಳರ ಸಮಸ್ಯೆಗಳು ತೆರೆದುಕೊಂಡವು. ಅಶೋಕ ನಗರದ ಧೋಬಿ ಘಾಟ್‌ನಲ್ಲಿನ ನೀರು, ವಿದ್ಯುತ್ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿತು. ಮಲ್ಲೇಶ್ವರ ಸೇರಿದಂತೆ ನಗರದ ಕೆಲವು ಧೋಬಿ ಘಾಟ್‌ಗಳು ಆಧುನೀಕರಣಗೊಂಡಿವೆ. ಆದರೆ, ಅಶೋಕನಗರದ ಮಡಿವಾಳ ಸಮುದಾಯದವರು ಇನ್ನೂ ಸಮಸ್ಯೆಗಳ ಸುಳಿಯಲ್ಲಿದ್ದಾರೆ. ಆಸುಪಾಸಿನಲ್ಲಿ ಪ್ರತಿಷ್ಠಿತ ಹೋಟೆಲ್‌ಗಳು, ವಸತಿ ಸಮುಚ್ಚಯಗಳಿದ್ದರೂ ಈ ಸ್ಥಳ ಮಾತ್ರ ಆಧುನೀಕರಣಕ್ಕೆ ತೆರೆದುಕೊಂಡಿಲ್ಲ ಎಂಬುದನ್ನು ಹೇಳುವ ಮೂಲಕ ಬಟ್ಟೆ ತೊಳೆಯುವ ಕೈಗಳ ಸಂಕಟಗಳನ್ನು ಕಟ್ಟಿಕೊಟ್ಟಿತು.



'ನೇಕಾರ ಪರಂಪರೆ ಮತ್ತು ಕರ್ನಾಟಕ' ಗೋಷ್ಠಿಯಲ್ಲಿ ವಸ್ತ್ರ ವಿನ್ಯಾಸಗಾರ ಪ್ರಸಾದ್ ಬಿದ್ದಪ್ಪ ಸೀರೆ ಉಡುವ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು.



'ಬೆಂಗಳೂರು ಸಿನಿಮಾ ಗೋಷ್ಠಿ'ಯಲ್ಲಿ ರೆಹಾನ್ ಡಿಯಾಜ್ (ಎಡದಿಂದ ಮೂರನೆಯವರು) ಮಾತನಾಡಿದರು. ಸ್ನೇಹಾ ಜೋಶಿ, ಅನುಷ್ಕಾ ಎ. ಥಾಮಸ್, ಜಯಶ್ರೀ ಶ್ರೀಧರ್ ಮತ್ತು ಆತೀವಾ ರೆಜಿಕುಮಾರ್ ಇದ್ದರು.

'ನಗರವು ವಿಶ್ವ ಪ್ರಸಿದ್ಧಿಯಾಗಿದ್ದರೂ ಈ ಪ್ರದೇಶದ ಮಡಿವಾಳರಿಗೆ ಸೌಲಭ್ಯಗಳು ಸಿಕ್ಕಿಲ್ಲ ಎಂಬುದೇ ನನಗೆ ಚಿತ್ರೀಕರಣದ ವೇಳೆ ಅಚ್ಚರಿ ಮೂಡಿಸಿತು' ಎಂದು ರೆಹಾನ್ ಹೇಳಿದರು.

ಕೆ.ಆರ್.ಮಾರುಕಟ್ಟೆಗೆ ಬರುವ ಬಗೆಬಗೆಯ ಹೂವುಗಳು, ಗ್ರಾಹಕರನ್ನು ವ್ಯಾಪಾರಿಗಳು ಸೆಳೆಯುವ ತಂತ್ರ, ಹೂವುಗಳ ಜೋಡಣೆ, ಕೊನೆಯಲ್ಲಿ ಉಳಿದ ಹೂವುಗಳು ಬಾಡಿ ತ್ಯಾಜ್ಯವಾಗುವ ಬಗೆಯನ್ನು ಅನುಷ್ಕಾ ಅವರು ಕಿರುಚಿತ್ರದ ಮೂಲಕ ಕಟ್ಟಿಕೊಟ್ಟರು.

ಮುನೀರಾ ಸೇನ್ ಅವರು, ತಮ್ಮ ಅಭಿನಯದ ಮೂಲಕವೇ ಲಾಲ್‌ಬಾಗ್‌ನಲ್ಲಿರುವ ಪಾರಂಪರಿಕ ಕಟ್ಟಡ ಕ್ರುಂಬಿಗಲ್ ಹಾಲ್‌ನ ಚಿತ್ರಣ ಕಟ್ಟಿಕೊಟ್ಟರು. ಜೊತೆಗೆ ಲಾಲ್‌ಬಾಗ್ ಇತಿಹಾಸ ಮೆಲುಕು ಹಾಕಿದರು. ತೋಟಗಾರಿಕೆ ಕ್ಷೇತ್ರಕ್ಕೆ ಕ್ರುಂಬಿಗಲ್ ಸಲ್ಲಿಸಿದ ಕೊಡುಗೆ, ಬೆಂಗಳೂರು ಉದ್ಯಾನಕ್ಕಾಗಿ ಅವರು ಹಾಕಿದ ಶ್ರಮ, ಅವರ ಜನ್ಮಶತಮಾನೋತ್ಸವ ಆಚರಣೆ... ಹೀಗೆ ಅನೇಕ ಸಂಗತಿಗಳು ಈ ಗೋಷ್ಠಿಯಲ್ಲಿ ಪ್ರಸ್ತಾಪವಾದವು.

'ಹೂವು ಹಬ್ಬ ಗೋಷ್ಠಿ'ಯಲ್ಲಿ ಪರಿಸರ ಪ್ರೇಮಿ ಪ್ರಿಯಾ ಚೆಟ್ಟಿ, ನಗರದ ಕಬ್ಬನ್ ಉದ್ಯಾನ, ಲಾಲ್‌ಬಾಗ್‌ನಲ್ಲಿ ಚಿತ್ತಾಕರ್ಷಕವಾಗಿ ಅರಳುವ ಗುಲ್‌ಮೊಹರ್ ಸೌಂದರ್ಯ ವರ್ಣಿಸಿದರು. ಅಲ್ಲದೆ, ಹೂವುಗಳು ಸಿಲಿಕಾನ್ ಸಿಟಿಗೆ ರಂಗು ತುಂಬಿದ ರೀತಿ ವಿವರಿಸಿ, ಉದ್ಯಾನಗಳ ರಕ್ಷಣೆಗೆ ಹೋರಾಡಿದವರನ್ನು ಸ್ಮರಿಸಿದರು. ಈ ಗೋಷ್ಠಿಯಲ್ಲಿ ಮಾತನಾಡಿದ ಸುರೇಶ್ ಜಯರಾಂ, 'ನಗರದ ಭವಿಷ್ಯಕ್ಕೆ ಉದ್ಯಾನ ಹಾಗೂ ಮರಗಳ ರಕ್ಷಣೆ ಅಗತ್ಯ. ಪರಿಸರ ಬಗ್ಗೆ ಕುತೂಹಲ ಇರಬೇಕು. ಮೊಬೈಲ್ ಬಿಟ್ಟು ಉದ್ಯಾನದಲ್ಲಿ ಮೌನವಾಗಿ ಸುತ್ತಾಡಿ. ಆಗ ಪರಿಸರದ ಮಹತ್ವ ಅರಿವಿಗೆ ಬರಲಿದೆ' ಎಂದು ಪ್ರತಿಪಾದಿಸಿದರು.

ರಸ್ತೆ ವಿಸ್ತರಣೆ ಹೆಸರಿನಲ್ಲಿ ಬಿಬಿಎಂಪಿಯು ಸಾವಿರಾರು ಮರಗಳನ್ನು ತೆರವುಗೊಳಿಸುತ್ತಿದೆ. ಇದರ ವಿರುದ್ಧ ಕಾನೂನು ಹೋರಾಟ ಅಗತ್ಯ ಎಂಬ ಅಭಿಪ್ರಾಯವೂ ಸಂವಾದದಲ್ಲಿ ಕೇಳಿಬಂತು. ಬಳಿಕ ನೆಲದ ಕವಿತೆ, ಹರಟೆಕಟ್ಟೆ ಗೋಷ್ಠಿಗಳು ನಡೆದವು.

ಮಳಿಗೆಗಳಲ್ಲಿ ಪುಸ್ತಕ, ಕರಕುಶಲ ವಸ್ತುಗಳು, ರಾಗಿ ಹಾಗೂ ಕೊಬ್ಬರಿಯ ಮೌಲ್ಯವರ್ಧನೆ ಪದಾರ್ಥಗಳು ಇದ್ದವು. ಬಳ್ಳಾರಿಯ ಲಂಬಾಣಿ ಸಮುದಾಯದ ಮಹಿಳೆಯರು ಸ್ಥಳದಲ್ಲೇ ಬ್ಯಾಗ್ ತಯಾರಿಸಿ, ನೋಡುಗರ ಮೆಚ್ಚುಗೆಗೆ ಪಾತ್ರರಾದರು.

ಸೀರೆ ಉಡುವುದೂ ಕಲೆ

'ನೇಕಾರ ಪರಂಪರೆ ಗೋಷ್ಠಿ'ಯಲ್ಲಿ ಶುಭ ಸಮಾರಂಭಕ್ಕೆ ಸೀರೆ ಉಡುವ ಕಲೆಯ ಬಗ್ಗೆ ವಸ್ತ್ರ ವಿನ್ಯಾಸಗಾರ ಪ್ರಸಾದ್ ಬಿದ್ದಪ್ಪ ವಿವರಿಸಿದರು.

ಕೊಡವ ಶೈಲಿ, ಸೀದಾ ಪಲ್ಲು, ಉಲ್ಟಾ ಪಲ್ಲು ಶೈಲಿಯಲ್ಲಿ ಸೀರೆ ಧರಿಸುವುದನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

'ಭಾರತೀಯ ಮಹಿಳೆಯರು ಸೀರೆ ಧರಿಸುವುದರ ಮೂಲಕ ಸಂಸ್ಕೃತಿ ಉಳಿಸುತ್ತಿದ್ದಾರೆ. ಕೈಮಗ್ಗ ಉತ್ಪನ್ನಗಳ ರಫ್ತಿನಿಂದ ಭಾರತದ ಆರ್ಥಿಕತೆಯೂ ಬೆಳೆದಿದೆ' ಎಂದು ಪ್ರಸಾದ್ ಬಿದ್ದಪ್ಪ ಹೇಳಿದರು. ಮೈಸೂರು, ಮೊಳಕಾಲ್ಮುರು, ಇಳಕಲ್ ಹಾಗೂ ಧಾರವಾಡದ ಸೀರೆಗಳು ಕರ್ನಾಟಕ ರಾಜ್ಯದ ಹೆಮ್ಮೆಯ ಸಂಕೇತ. ಗುಜರಾತ್, ತಮಿಳುನಾಡು, ರಾಜಸ್ಥಾನ, ಒಡಿಶಾ ರಾಜ್ಯಗಳು ವಿವಿಧ ಮಾದರಿಯ ಕೈಮಗ್ಗ ಉಡುಪುಗಳ ತಯಾರಿಕೆಗೆ ಪ್ರಸಿದ್ಧಿ ಪಡೆದಿವೆ ಎಂದು ವಿವರಿಸಿದರು.

ಚಿಣ್ಣರ ಕಲರವ

ಭಾನುವಾರ ಮಕ್ಕಳ ಕಲರವ ಆವರಣದ ತುಂಬೆಲ್ಲ ಹರಡಿತ್ತು. ಬೊಂಬೆ ತಯಾರಿಕೆ, ಕಥೆ ಹೇಳುವ ಕಲೆ, ಸ್ವಯಂ ರಕ್ಷಣೆ, ಎಲೆಗಳಿಂದ ಕಲಾಕೃತಿ ರಚನೆ, ಪೇಂಟಿಂಗ್ ಬಗ್ಗೆ ಮಕ್ಕಳಿಗೆ ತರಬೇತಿ ನೀಡಲಾಯಿತು. ಟೆರ್ರಾಕೋಟಾ ಕಲೆಯ ಬಗ್ಗೆ ತಿಳಿಸಲಾಯಿತು. ಈ ಎಲ್ಲ ಚಟುವಟಿಕೆಗಳಲ್ಲೂ ಮಕ್ಕಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಬಿಲ್ಡಿಂಗ್ ಬ್ಲಾಕ್ಸ್‌ಗಳಿಂದ ತಮಗೆ ಇಷ್ಟಬಂದ ಕಲಾಕೃತಿ ರಚಿಸಿ ಸಂಭ್ರಮಿಸಿದರು.

'ಇದು ನನಗೆ ಹೊಸ ಅನುಭವ ನೀಡಿತು. ಹಬ್ಬಕ್ಕೆ ಬಂದು ಹೊಸ ಕಲೆಗಳನ್ನು ಕಲಿತೆ' ಎಂದು ಸೇನಾ ಶಾಲೆಯ 5ನೇ ತರಗತಿ ವಿದ್ಯಾರ್ಥಿನಿ ಸಹನಾ ಪ್ರತಿಕ್ರಿಯಿಸಿದಳು.

ಇಂಡಿಗೋ, ಗೋಫಸ್ಟ್: ಕೆಟ್ಟುನಿಂತ ವಿಮಾನಗಳು

ನವದೆಹಲಿ/ಮುಂಬೈ (ಪಿಟಿಐ): ಇಂಡಿಗೋ ಹಾಗೂ ಗೋಫಸ್ಟ್ ವಿಮಾನಯಾನ ಸಂಸ್ಥೆಗಳ 50ಕ್ಕೂ ಹೆಚ್ಚು ವಿಮಾನಗಳು ಎಂಜಿನ್ ಸಮಸ್ಯೆಗಳಿಂದ ಕೆಟ್ಟುನಿಂತಿವೆ. ಎಂಜಿನ್ ದುರಸ್ತಿಗೆ ಬೇಕಿರುವ ಬಿಡಿ ಭಾಗಗಳ ಪೂರೈಕೆ ವ್ಯವಸ್ಥೆಗೆ ರಷ್ಯಾ–ಉಕ್ರೇನ್ ಯುದ್ಧವು ಹೊಡೆತ ನೀಡಿದೆ.

'ಪೂರೈಕೆ ವ್ಯವಸ್ಥೆಯಲ್ಲಿ ತೊಡಕಾಗಿರುವುದರಿಂದ ವಿಮಾನಯಾನಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲು ವಿಮಾನಯಾನ ಸಂಸ್ಥೆಗಳು ಹಲವು ಮಾರ್ಗಗಳನ್ನು ಚಿಂತಿಸುತ್ತಿವೆ ಎಂದು ಅಧಿಕಾರಿಗಳು ಹೇಳಿದರು.

ಬೆಂಗಳೂರಿನಲ್ಲಿ ನಡೆದ ಮಕ್ಕಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ

ಪ್ರಶಸ್ತಿ ಬಾಚಿದ 'ದಿ ಗಾರ್ಡ್' ಸಿನಿಮಾ

ಪ್ರಜಾವಾಣಿ ವಾರ್ತೆ



ಬೆಂಗಳೂರು ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವದಲ್ಲಿ ವಿಜೇತರೊಂದಿಗೆ ನಿರ್ದೇಶಕ ಹರಿ ಸಂತೋಷ್, ನಟ ಸುಂದರರಾಜ್, ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಎಸ್. ನಾರಾಯಣ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾ.ಮ. ಹರೀಶ್, ಚಿತ್ರಸಾಹಿತಿ ವಿ. ನಾಗೇಂದ್ರಪ್ರಸಾದ್ ಇದ್ದಾರೆ

ಬೆಂಗಳೂರು: 'ದಿ ಗಾರ್ಡ್' ಚಿತ್ರ ನಗರದಲ್ಲಿ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ ('ಅಪ್ಪು' ಮಕ್ಕಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ)ದಲ್ಲಿ ಮೊದಲ ಬಹುಮಾನ ಬಾಚಿಕೊಂಡಿತು.

ಉಲ್ಲಾಸ್ ಸ್ಕೂಲ್ ಆಫ್ ಸಿನಿಮಾಸ್ ಮತ್ತು ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಚಿತ್ರೋತ್ಸವದ ಸಮಾರೋಪ ಭಾನುವಾರ ಜಿ.ಟಿ. ವರ್ಲ್ಡ್ ಮಾಲ್‌ನಲ್ಲಿ ನಡೆಯಿತು.

'ದಿ ಗಾರ್ಡ್' ಚಿತ್ರವನ್ನು ಉಮೇಶ್ ಗೌಡ ನಿರ್ದೇಶಿಸಿದ್ದಾರೆ. ಇದು ಸಂಭಾಷಣೆಗಳಿಲ್ಲದ ಚಿತ್ರ. ವಿಟಿ ಸಿನಿಮಾಸ್ ಲಾಂಛನದ ಅಡಿಯಲ್ಲಿ ಶಿಲ್ಪಾ ಡಿ., ಆನಂದ ಕೊಳಕಿ, ಉಜ್ವಲಾ ಶೇಠ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಪರಿಣಿತಾ ಮತ್ತು ಸಿಂಚನಾ ಅಭಿನಯಿಸಿದ್ದಾರೆ. ಈ ಚಿತ್ರದ ಚಿತ್ರಕತೆಗೂ ಉಮೇಶ್ ಬಡಿಗೇರ್ ಅವರಿಗೆ ಪ್ರಶಸ್ತಿ ಲಭಿಸಿದೆ.

ಬಹುಮಾನಗಳ ವಿವರ: ಗಾಂಧಿ ಮತ್ತು ನೋಟು (2ನೇ ಬಹುಮಾನ. ನಿರ್ಮಾಪಕರು: ಸುಧಾರಾಣಿ, ಎಚ್.ಕೆ. ವೀಣಾ ಪದ್ಮನಾಭ, ಮಂಜುನಾಥ, ನಿರ್ದೇಶನ: ವಿ.ಎಲ್. ಆಶ್ರಿತ್ ಮತ್ತು ತಂಡ), ದಿ ಕೇಕ್ (3ನೇ ಬಹುಮಾನ. ನಿರ್ದೇಶನ: ಕಿಶೋರ್ ಮೂಡಬಿದ್ರೆ) ಉತ್ತಮ ಬಾಲನಟ: ಮಾ. ತರುಣ್ (ಚಿತ್ರ: ಮಸಣದ ಹೂವು), ಉತ್ತಮ ಬಾಲನಟಿ: ದಿವಿಜಾ ನಾಗೇಂದ್ರಪ್ರಸಾದ್ (ಚಿತ್ರ: ಗಾಂಧಿ ಮತ್ತು ನೋಟು), ಉತ್ತಮ ಬಾಲನಟ ವಿಮರ್ಶಕರ ಪ್ರಶಸ್ತಿ: ಮಹೇಂದ್ರ (ಚಿತ್ರ: ನನ್ನ ಹೆಸರು ಕಿಶೋರ) ಉತ್ತಮ ಬಾಲನಟಿ ವಿಮರ್ಶಕರ ಪ್ರಶಸ್ತಿ: ದೀಕ್ಷಾ ಡಿ. ರೈ (ಚಿತ್ರ: ಪೆನ್ಸಿಲ್ ಬಾಕ್ಸ್), ಉತ್ತಮ ಪೋಷಕ ನಟಿ: ಅರುಣಾ ಬಾಲರಾಜ್ (ಚಿತ್ರ: ನಹಿ ಜ್ಞಾನೇನ ಸದೃಶಂ), ಉತ್ತಮ ಪೋಷಕ ನಟ: ಕಾರ್ತಿಕ್ (ಚಿತ್ರ: ಮೂಕ ಜೀವ), ಉತ್ತಮ ನಿರ್ಮಾಣ ಸಂಸ್ಥೆ: ಡ್ರೀಂ ಸ್ಕೋಪ್ ಥಿಯೇಟರ್ ಸ್ಟುಡಿಯೋ (ಪೂಜಾ ಗೋಯೆಲ್, ಚಿತ್ರ: ನಮ್ಮ ಅರಣ್ಯ ಪ್ರದೇಶ), ಅತ್ಯುತ್ತಮ ನಿರ್ದೇಶಕಿ: ಆಶಾ ದೇವಿ ಡಿ. (ಚಿತ್ರ: ಓ ನನ್ನ ಚೇತನ), ಅತ್ಯುತ್ತಮ ಸಂಕಲನಕಾರ: ವಸಂತ್ ಕುಮಾರ್ (ಚಿತ್ರ: ಗಾಂಧಿ ಮತ್ತು ನೋಟು), ಅತ್ಯುತ್ತಮ ಛಾಯಾಗ್ರಾಹಕ: ರಾಜು ಎನ್.ಎಂ. (ಚಿತ್ರ: ಮನ್ 3) ಅತ್ಯುತ್ತಮ ಸಂಗೀತ ನಿರ್ದೇಶಕಿ: ವಾಣಿ ಹರಿಕೃಷ್ಣ (ಗಾಂಧಿ ಮತ್ತು ನೋಟು)

ಚಿತ್ರೋತ್ಸವಕ್ಕೆ ಒಟ್ಟು 60 ಪ್ರವೇಶಗಳು ಬಂದಿದ್ದವು. ಅವುಗಳಲ್ಲಿ 12 ಚಿತ್ರಗಳು ಅಂತಿಮ ಸುತ್ತಿಗೆ ಆಯ್ಕೆಯಾದವು. ಎಲ್ಲವೂ ಉತ್ತಮ ಚಿತ್ರಗಳೇ ಆಗಿದ್ದವು. ಎಲ್ಲ ಚಿತ್ರಗಳಿಗೂ ಪೂರ್ಣ ಪ್ರಮಾಣದಲ್ಲಿ ಪ್ರೇಕ್ಷಕರು ಬಂದಿದ್ದರು ಎಂದು ಚಿತ್ರೋತ್ಸವದ ಸಂಯೋಜಕ, ನಿರ್ದೇಶಕ ನಂದಳಿಕೆ ನಿತ್ಯಾನಂದ ಪ್ರಭು ಮಾಹಿತಿ ನೀಡಿದರು.

'ಇಂಥ ಚಿತ್ರೋತ್ಸವಕ್ಕೂ ಮುನ್ನ ಮಕ್ಕಳ ಚಿತ್ರ ನಿರ್ಮಾಪಕರಿಗೆ

ಈ ಮಾದರಿಯ ವಿಶ್ವದ ಶ್ರೇಷ್ಠ ಚಿತ್ರಗಳನ್ನು ತೋರಿಸಬೇಕು. ಅವರು ಅಂಥದ್ದೇ ಮಾದರಿಗಳಲ್ಲಿ ಉತ್ತಮ ಚಿತ್ರಗಳನ್ನು ಮಾಡಲು ಸಹಕಾರಿ' ಎಂದು ನಿರ್ದೇಶಕ ಗಿರೀಶ್ ಕಾಸರವಳ್ಳಿ ಸಲಹೆ ನೀಡಿದರು.

ನಿರ್ದೇಶಕರಾದ ಎಸ್. ನಾರಾಯಣ್, ಗಿರೀಶ್ ಕಾಸರವಳ್ಳಿ, ನಟ ಸುಂದರರಾಜ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾ.ಮ.ಹರೀಶ್, ಸಂಘಟಕ ಉಲ್ಲಾಸ್, ಚಿತ್ರಸಾಹಿತಿ ವಿ. ನಾಗೇಂದ್ರ ಪ್ರಸಾದ್, ನಿರ್ದೇಶಕ ಹರೀಶ್ ಸಂತೋಷ್ ಸಮಾರೋಪದಲ್ಲಿ ಭಾಗವಹಿಸಿದ್ದರು.

ಮುಖ್ಯಾಂಶಗಳು

- ಮಾ. ತರುಣ್ ಉತ್ತಮ ಬಾಲನಟ, ದಿವಿಜಾ ಉತ್ತಮ ಬಾಲನಟಿ
- ಉಮೇಶ್ ಗೌಡ ನಿರ್ದೇಶನದ 'ದಿ ಗಾರ್ಡ್' ಚಿತ್ರ

'ಸುಳ್ಳನ್ನೇ ಸತ್ಯ ಎಂದು ಭಾವಿಸುವ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸುಳ್ಳನ್ನು ಸಾವಿರ ಸಲ ಹೇಳಿದರೆ ಸತ್ಯವಾಗುತ್ತದೆ ಎಂದು ಸಿದ್ದರಾಮಯ್ಯ ಭಾವಿಸಿದ್ದಾರೆ. ಮುಂದೊಂದು ದಿನ ಅವರು ಸುಳ್ಳಿನ ಸುಳಿಯಲ್ಲಿ ಸಿಲುಕಲಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ನಿರತವಾಗಿದೆ ಎಂದು ಸಿದ್ದರಾಮಯ್ಯ ಪದೇ ಪದೆ ಆರೋಪ ಮಾಡುತ್ತ, ತಾವೇ ಸುಳ್ಳಿನ ಸುಳಿಯಲ್ಲಿ ಸಿಲುಕುತ್ತಿದ್ದಾರೆ. ಅವರು ಹೇಳಿರುವ ಸುಳ್ಳು ಒಂದೊಂದಾಗಿ ಹೊರಗೆ ಬರುತ್ತಿವೆ. ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಭರವಸೆ ಕುರಿತು ಈಗಾಗಲೇ ಅಧಿವೇಶನದಲ್ಲಿಯೇ ಹೇಳಿದ್ದೇನೆ. ಸಾವಿರ ಬಾರಿ ಸುಳ್ಳು ಹೇಳಿದರೆ, ಅದು ಸತ್ಯವಾಗುತ್ತದೆ ಎನ್ನುವ ಭ್ರಮೆಯಲ್ಲಿ ಅವರು ಇದ್ದಾರೆ' ಎಂದು ಕಿಡಿಕಾರಿದರು.

ಮಾ. 11ಕ್ಕೆ ಮೋದಿ ಧಾರವಾಡಕ್ಕೆ: 'ಮಾ. 11ಕ್ಕೆ ಬೆಂಗಳೂರು–ಮೈಸೂರು ಹೆದ್ದಾರಿ ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿದ್ದು, ಅದೇ ದಿನ ಧಾರವಾಡಕ್ಕೆ ಬಂದು ಐಐಟಿ ಉದ್ಘಾಟಿಸಲಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿ 2 ನಿಮಿಷ

'ತಪ್ಪಿತಸ್ಥರ ವಿರುದ್ಧ ಕ್ರಮ, ಪ್ರಕರಣ ತಾರ್ಕಿಕ ಅಂತ್ಯ ಖಚಿತ'

ಹುಬ್ಬಳ್ಳಿ/ಬಾಗಲಕೋಟೆ: 'ಅರ್ಕಾವತಿ ಡಿನೋಟಿಫಿಕೇಶನ್ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಜಿಲ್ಲೆಯ ರಬಕವಿ ಬನಹಟ್ಟಿ ತಾಲ್ಲೂಕಿನ ಬಂಡಿಗಣಿ ಗ್ರಾಮದದಲ್ಲಿ ಭಾನುವಾರ ಬಂಡಿಗಣಿ ಮಠದ ಶಂಕುಸ್ಥಾಪನೆ ನೆರವೇರಿಸಿದ ನಂತರ ಅರ್ಕಾವತಿ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಪ್ರಕರಣದ ಸಂಪೂರ್ಣ ವರದಿಯನ್ನು ನೋಡಿದ್ದೇನೆ. ಕಾನೂನು ನಿಷ್ಠುರವಾಗಿ ತನ್ನ ಕೆಲಸವನ್ನು ಮಾಡಿಯೇ ಮಾಡುತ್ತದೆ. ಸಿದ್ದರಾಮಯ್ಯ ಜೈಲಿಗೆ ಹೋಗುವುದನ್ನು ನ್ಯಾಯಾಂಗ ತೀರ್ಮಾನ ಮಾಡುತ್ತದೆ' ಎಂದರು.

'ಸಿದ್ದರಾಮಯ್ಯ ಜೈಲಿಗೆ ಹೋಗುತ್ತಾರೆ ಎಂದು ನಳಿನ್ ಕುಮಾರ್ ಕಟೀಲ ಹೇಳಿದ್ದಾರಲ್ಲ' ಎಂಬ ಪ್ರಶ್ನೆಗೆ, 'ನಾನು ಜವಾಬ್ದಾರಿಯುತ ಸ್ಥಾನದಲ್ಲಿದ್ದೇನೆ. ನೀವು ಬಯಸಿದ್ದನ್ನು ಹೇಳಲಿಕ್ಕೆ ತಯಾರಿಲ್ಲ. ನ್ಯಾಯಾಂಗದಲ್ಲಿ ತೀರ್ಮಾನ ಆಗುತ್ತದೆ' ಎಂದರು.

ಇದಕ್ಕೂ ಮುನ್ನ ಭಾನುವಾರ ಬೆಳಿಗ್ಗೆ ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, 'ಅರ್ಕಾವತಿ ಹಗರಣ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವುದು ನಮ್ಮ ಮುಂದಿಲ್ಲ. ಸಚಿವ ಸಂಪುಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

500 ರಿಯಾಲ್ಸ್ ಹಂಚಿದ ಜಮೀರ್!




ಬೆಂಗಳೂರು: ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆ ವಿವಿಧ ಕ್ಷೇತ್ರಗಳಲ್ಲಿ ಮತದಾರರನ್ನು ಸೆಳೆಯಲು ಟಿವಿ, ಸೀರೆ, ಕುಕ್ಕರ್ ಮತ್ತಿತರ ವಸ್ತುಗಳನ್ನು ಹಂಚುತ್ತಿದ್ದರೆ, ಇತ್ತ ಚಾಮರಾಜಪೇಟೆಯ ಕಾಂಗ್ರೆಸ್ ಶಾಸಕ ಜಮೀರ್ ಅಹ್ಮದ್ ಅವರು ಉಮ್ರಾ ಯಾತ್ರಾರ್ಥಿಗಳಿಗೆ ತುಮಕೂರು ಮತ್ತು ಚಾಮರಾಜಪೇಟೆಯಲ್ಲಿ ವಿದೇಶಿ ಕರೆನ್ಸಿ ಹಂಚುತ್ತಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಗೋರಿಪಾಳ್ಯದ ಅಂಚೆ ಕಚೇರಿ ಆವರಣದಲ್ಲಿ ಉಮ್ರಾ ಯಾತ್ರೆಗೆ ಹೊರಟ ಬಿಬಿಎಂಪಿ ಆಶಾ ಕಾರ್ಯಕರ್ತೆಯರಿಗೆ ಸೌದಿ ಅರೇಬಿಯಾದ 500 ರಿಯಾಲ್ಸ್ ಮುಖಬೆಲೆ ನೋಟುಗಳನ್ನು ಜಮೀರ್ ಹಂಚಿದ್ದಾರೆ. 500 ರಿಯಾಲ್ಸ್‌ಗೆ ಭಾರತದಲ್ಲಿ ₹ 11,034 ಮೌಲ್ಯ ಇದೆ. ಹಣದ ಜೊತೆ ನ್ಯಾಷನಲ್ ಟ್ರಾವೆಲ್ಸ್ ಕಿಟ್ ಕೂಡಾ ಅವರು ನೀಡಿದ್ದಾರೆ.

'ಚಾಮರಾಜಪೇಟೆ ಕ್ಷೇತ್ರದ ಜೆಜೆಆರ್ ನಗರ ವಾರ್ಡ್ ಕಚೇರಿಯಲ್ಲಿ 16 ಯಾತ್ರಾರ್ಥಿಗಳಿಗೆ ಸೌದಿ ರಿಯಾಲ್ 500 ಜೊತೆಗೆ ಇಹ್ರಾಮ್ ಮತ್ತು ಉಮ್ರಾ ಅಗತ್ಯ ವಸ್ತುಗಳನ್ನು ವಿತರಿಸಿ ಉಮ್ರಾ ಯಾತ್ರೆಗೆ ಆಶಾ ಕಾರ್ಯಕರ್ತರನ್ನು ಕಳುಹಿಸಲಾಯಿತು. ಈ ವೇಳೆ ಚಾಮರಾಜಪೇಟೆಯ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು' ಎಂದು ಟ್ವೀಟ್ ಮಾಡಿದ್ದಾರೆ.

ಪಾದರಾಯನಪುರ ವಾರ್ಡ್ ನಂ.135, ಜೆಜೆಆರ್ ನಗರ ವಾರ್ಡ್ ನಂ.136, ರಾಯಪುರಂ ವಾರ್ಡ್ ನಂ. 167ರ ಆಶಾ ಕಾರ್ಯಕರ್ತೆಯರಿಗೆ ಅವರು ವಿದೇಶಿ ಹಣ ಹಂಚಿಕೆ ಮಾಡಿದ್ದಾರೆ. ಈ ಬಗ್ಗೆ ತಮ್ಮ ಫೇಸ್‌ಬುಕ್‌ನಲ್ಲೂ ಅವರು ಬರೆದುಕೊಂಡಿದ್ದಾರೆ.



ನಗರದ ಮಲ್ಲೇಶ್ವರದಲ್ಲಿ ವೇಣುಗೋಪಾಲಕೃಷ್ಣ ಸ್ವಾಮಿ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ಜರುಗಿತು

ಮೃತ ಶಿಕ್ಷಕರ ಕುಟುಂಬಕ್ಕೆ ತಲಾ ₹ 50 ಲಕ್ಷ ಪರಿಹಾರಕ್ಕೆ ಆಗ್ರಹ

ಬೆಂಗಳೂರು: 'ಪಿಂಚಣಿಗೆ ಆಗ್ರಹಿಸಿ ನಡೆದ ಹೋರಾಟದಲ್ಲಿ ಐವರು ಶಿಕ್ಷಕರು ಮೃತಪಟ್ಟಿದ್ದು, ಮೃತರ ಕುಟುಂಬಗಳಿಗೆ ತಲಾ ₹ 50 ಲಕ್ಷ ಪರಿಹಾರ ನೀಡಬೇಕು. ಅಲ್ಲದೆ, ₹ 25 ಲಕ್ಷ ನಿವೃತ್ತ ಉಪಧನ, ಕುಟುಂಬ ಪಿಂಚಣಿ ನೀಡಬೇಕು' ಎಂದು ರಾಜ್ಯ ಸರ್ಕಾರವನ್ನು ಕರ್ನಾಟಕ ರಾಜ್ಯ ಶಿಕ್ಷಕರ, ಉಪನ್ಯಾಸಕರ ಕ್ರಿಯಾ ಸಮಿತಿಯ ರಾಜ್ಯ ಅಧ್ಯಕ್ಷ ಬಸವರಾಜ ಗುರಿಕಾರ ಮತ್ತು ಕಾರ್ಯಾಧ್ಯಕ್ಷ ತಿಮ್ಮಯ್ಯ ಪುರ್ಲೆ ಆಗ್ರಹಿಸಿದ್ದಾರೆ.

'ಪಿಂಚಣಿಗೆ ಆಗ್ರಹಿಸಿ 140ಕ್ಕೂ ಹೆಚ್ಚು ದಿನಗಳಿಂದ ಅಹೋರಾತ್ರಿ ಶಿಕ್ಷಕರು ಹೋರಾಟ ನಡೆಸಿದ್ದಾರೆ. ಅವರ ಬೇಡಿಕೆಗಳ ಕಡೆಗೆ ಗಮನಹರಿಸದಿರುವ ಸರ್ಕಾರದ ನಡೆ ಖಂಡನೀಯ. ಹೋರಾಟ ನಿರತ ಶಿಕ್ಷಕರನ್ನು ಸರ್ಕಾರದ ಪ್ರತಿನಿಧಿಗಳು ಯಾರೂ ಭೇಟಿ ಮಾಡಲಿಲ್ಲ. ವಿದ್ಯಾದಾನ ಮಾಡುವ ಶಿಕ್ಷಕರು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿಗೆ ಸರ್ಕಾರ ತಂದಿರುವುದು ಗೌರವ ತರುವ ವಿಚಾರವಲ್ಲ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಇಂದು

ಪುಸ್ತಕ ಮೇಳಕ್ಕೆ ಚಾಲನೆ: ಜಯಕರ್ ಎಸ್.ಎಂ., ಮುಖ್ಯ ಅತಿಥಿಗಳು: ಮಹೇಶ್ ಬಾಬು ಎನ್., ಪ್ರೊ. ಶ್ರೀನಿವಾಸ್ ಸಿ., ಅಜಿತ್ ಕುಮಾರ್ ಹೆಗ್ಡೆ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಳಿಗ್ಗೆ 11

ಪ್ರವಚನ ವಾಹಿನಿ ಕಾರ್ಯಕ್ರಮ: 'ಶ್ರೀ ರಾಮ ಗುಣ ವರ್ಣನಂ' ಕುರಿತು ಉಪನ್ಯಾಸ: ದಿಲೀಪ್ ಬೆಳ್ಳಾವೆ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ನಿರ್ವಾಣಿ ಭಗವತಿ ದೇವಿಯ ಮೆರವಣಿಗೆ, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ಸಂಜೆ 7



ಎಸ್. ವಿಷ್ಣುರಾಜ

ನಾದಜ್ಯೋತಿ ಸಂಗೀತ ಸಂಭ್ರಮ: ಗಾಯನ: ಸಂಪಗೋಡು ಎಸ್. ವಿಷ್ಣುರಾಜ, ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಮೃದಂಗ: ಸಿ. ಚೆಲುವರಾಜ್, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಡಿಎಸ್‌ಎಂಎಂ ರಾಷ್ಟ್ರೀಯ ಉಪಾಧ್ಯಕ್ಷೆ ಸುಭಾಷಿಣಿ ಅಲಿ ಹೇಳಿಕೆ

‘ಮನುವಾದ: ಮಾ.14ಕ್ಕೆ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ವಿಧಾನಸಭೆ ಚುನಾವಣೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಮನುವಾದಿ ಸಿದ್ಧಾಂತದ ಪ್ರತಿಪಾದಕ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ದಲಿತ, ಅಲ್ಪಸಂಖ್ಯಾತ ಸಂಘಟನೆಗಳು ಒಂದಾಗಬೇಕು. ಈ ಉದ್ದೇಶದಿಂದ ಒಗ್ಗೂಡಲು ಮಾರ್ಚ್ 14ರಂದು ನಗರದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ’ ಎಂದು ದಲಿತ ಶೋಷಣೆ ಮುಕ್ತಿ ಮಂಚ್ (ಡಿಎಸ್‌ಎಂಎಂ) ರಾಷ್ಟ್ರೀಯ ಉಪಾಧ್ಯಕ್ಷೆ ಸುಭಾಷಿಣಿ ಅಲಿ ತಿಳಿಸಿದರು.

ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ ಮತ್ತು ಅವರ ಹಕ್ಕುಗಳಿಗಾಗಿ ಒತ್ತಾಯಿಸಿ ದಲಿತ ಹಕ್ಕುಗಳ ಸಮಿತಿ ಮತ್ತು ಇತರ ಸಂಘಟನೆಗಳ ವತಿಯಿಂದ ಗಾಂಧಿ ಭವನದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಅಂಬೇಡ್ಕರ್ ರೂಪಿಸಿದ ಸಂವಿಧಾನವನ್ನು ಬಿಜೆಪಿ, ಆರೆಸ್ಸೆಸ್, ಸಂಘ ಪರಿವಾರ ಯಾವತ್ತಿಗೂ ಒಪ್ಪಿಕೊಂಡಿಲ್ಲ. ಅಂಬೇಡ್ಕರ್ ಸಂವಿಧಾನದ ಜಾಗದಲ್ಲಿ, ಮನುಸ್ಮೃತಿ ತರುವುದು ಈ ಸಂಘಟನೆಗಳ ಗುರಿ. ನರೇಂದ್ರ ಮೋದಿ ದೇಶದ ಚುಕ್ಕಾಣಿ ಹಿಡಿದ ಬಳಿಕ ಈ ಪ್ರಕ್ರಿಯೆ ತೀವ್ರಗೊಂಡಿದೆ’ ಎಂದರು.



ಸುಭಾಷಿಣಿ ಅಲಿ, ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಬಾಲಸುಂದರಂ, ದಲಿತ ಸಂಘರ್ಷ ಸಮಿತಿ (ಭೀಮವಾದ) ರಾಜ್ಯ ಸಂಚಾಲಕ ಮೋಹನ್‌ರಾಜ್ ಇದ್ದರು —ಪ್ರಜಾವಾಣಿ ಚಿತ್ರ

‘ದೇಶದಲ್ಲಿ ಬೇರು ಬಿಟ್ಟಿರುವ ಮನುವಾದವನ್ನು ಹೋಗಲಾಡಿಸಲು ದಲಿತ, ಕಾರ್ಮಿಕ, ಮಹಿಳಾ ಸಂಘಟನೆಗಳು ಒಗ್ಗೂಡಿ ಐಕ್ಯ ಹೋರಾಟ ರೂಪಿಸಬೇಕಾದ ಅಗತ್ಯವಿದೆ. ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ ಅದೆಲ್ಲವನ್ನೂ ಬದಿಗೊತ್ತಿ ಮನುವಾದವನ್ನು ಸೋಲಿಸುವ ನಿಟ್ಟಿನಲ್ಲಿ ಜೊತೆಯಾಗಿ ಸಾಗಬೇಕಾಗಿದೆ. ಬಿಜೆಪಿಯನ್ನು ಸೋಲಿಸುವ ನಿಟ್ಟಿನಲ್ಲಿ ಎಲ್ಲ ಜನಪರ ಸಂಘಟನೆಗಳು ಒಟ್ಟಾಗಿ ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು’ ಎಂದು ಮನವಿ ಮಾಡಿದರು.

ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ ಮಾತನಾಡಿ, ‘ಮೋದಿ ಆಡಳಿತದಲ್ಲಿ ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ವ್ಯಾಪಕವಾಗಿ ಹೆಚ್ಚಾಗುತ್ತಿದೆ. ಅದರಲ್ಲೂ, ಸಮಾಜ ಕಲ್ಯಾಣ ಇಲಾಖೆಯ ಮಾಹಿತಿಯ ಪ್ರಕಾರ ಕರ್ನಾಟಕದಲ್ಲಿ 2018ರಲ್ಲಿ 1,834, 2019ರಲ್ಲಿ 1,915, 2020ರಲ್ಲಿ 1,839, 2021ರಲ್ಲಿ 2,127, 2022ರಲ್ಲಿ 1,871 ದಲಿತರ ಮೇಲಿನ ದೌರ್ಜನ್ಯಗಳು ದಾಖಲಾಗಿವೆ. ಅದರಲ್ಲಿ ಶೇ 98 ಪ್ರಕರಣಗಳು ಪೊಲೀಸ್ ಠಾಣೆಗಳಲ್ಲಿ ಇತ್ಯರ್ಥಗೊಂಡಿದ್ದು, ಆರೋಪಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ’ ಎಂದು ಅಭಿಪ್ರಾಯಪಟ್ಟರು.

ಅಖಿಲ ಭಾರತ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ರಾಷ್ಟ್ರೀಯ ಉಪಾಧ್ಯಕ್ಷ ಬಾಲಸುಂದರಂ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿತ್ಯಾನಂದ ಸ್ವಾಮಿ, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮೋಹನ್‌ರಾಜ್, ಎಸ್‌ಸಿ, ಎಸ್‌ಟಿ ನೌಕರರ ಸಂಘದ ರಾಜ್ಯ ಅಧ್ಯಕ್ಷ ಡಿ. ಶಿವಶಂಕರ್, ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನದ ಗುರುವಯ್ಯ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಎಸ್.ವೈ. ಗುರುಶಾಂತ್, ದಲಿತ ಹಕ್ಕುಗಳ ಸಮಿತಿಯ ನಾಗರಾಜ್, ಪ್ರಾಂತ ಕೃಷಿ ಕೂಲಿಕಾರರ ರಾಜ್ಯ ಅಧ್ಯಕ್ಷ ಎಂ.ಪುಟ್ಟಮಾದು, ನಾಗರಾಜ ಪೂಜಾರ, ದಸಂಸ ರಾಜ್ಯ ನಾಯಕಿ ಸ್ವಪ್ನ, ಜವರಯ್ಯ, ಎನ್. ರಾಜಣ್ಣ ಇದ್ದರು.

ರಾಜ್ಯದಾದ್ಯಂತ ಡಿ.6ರಂದು ‘ಹೊಸತನದ ಮಮಕಾರ ಟಿ.ಎನ್. ಸೀತಾರಾಂ ಉತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧಾರಾವಾಹಿ– ಸಿನಿಮಾ ನಿರ್ದೇಶಕ ಟಿ.ಎನ್. ಸೀತಾರಾಂ ಅವರ 75ನೇ ಜನ್ಮದಿನದ ಅಂಗವಾಗಿ ಡಿ.6ರಂದು ರಾಜ್ಯದಾದ್ಯಂತ ‘ಹೊಸತನದ ಮಮಕಾರ ಟಿ.ಎನ್. ಸೀತಾರಾಂ ಉತ್ಸವ’ ಆಯೋಜಿಸಲಾಗುತ್ತದೆ ಎಂದು ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಹೇಳಿದರು.

ರಂಗಮಂಡಲ ಸಾಂಸ್ಕೃತಿಕ ಸಂಘ ಮತ್ತು ಸಿವಗಂಗ ಟ್ರಸ್ಟ್‌ನಿಂದ ‘ಕಾವ್ಯ ಬದುಕಿನ ಉತ್ಸವ ಶ್ರೀನಿವಾಸ ಜಿ. ಕಪ್ಪಣ್ಣ–75 ಸಾಂಸ್ಕೃತಿಕ ಸಂಭ್ರಮ’ ಕಾರ್ಯಕ್ರಮದಲ್ಲಿ ಅವರು ಭಾನುವಾರ ಮಾತನಾಡಿದರು.

‘ಸೀತಾರಾಂ ಅವರ ಜನ್ಮದಿನ ಆಚರಣೆ ನಡೆಯುವುದಿಲ್ಲ. ಅವರ ನಾಟಕ, ಸಿನಿಮಾ, ಧಾರಾವಾಹಿ, ಉತ್ಸವ, ವಿಚಾರ ಸಂಕಿರಣ ಎಲ್ಲೆಡೆ ಆಯೋಜಿಸಲಾಗುತ್ತದೆ. ಜಿಲ್ಲೆ, ತಾಲ್ಲೂಕುಗಳಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಗಳಿಂದ ಅಬ್ಬರವಿಲ್ಲದೆ ಅರ್ಥಪೂರ್ಣವಾಗಿ ಶಾಲೆ, ಸಮುದಾಯ ಭವನ, ಮನೆಅಂಗಳದಲ್ಲಿ ಕಾರ್ಯಕ್ರಮ ಮಾಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.



‘ಕಾವ್ಯ ಬದುಕಿನ ಉತ್ಸವ ಶ್ರೀನಿವಾಸ ಜಿ. ಕಪ್ಪಣ್ಣ–75 ಸಾಂಸ್ಕೃತಿಕ ಸಂಭ್ರಮ’ ಕಾರ್ಯಕ್ರಮದಲ್ಲಿ ಸಾಹಿತಿ ಎಚ್‌.ಎಸ್‌.ವೆಂಕಟೇಶಮೂರ್ತಿ ಮಾತನಾಡಿದರು. (ಎಡದಿಂದ) ಶ್ರೀನಿವಾಸ್ ಜಿ. ಕಪ್ಪಣ್ಣ, ಟಿ.ಎನ್‌.ಸೀತಾರಾಂ, ವಲ್ಲೀಶ ಶಾಸ್ತ್ರಿ, ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಇದ್ದರು.

‘ಸೀತಾರಾಂ ಕುರಿತಂತೆ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತದೆ. ಕೆಲವು ಕಾರ್ಯಕ್ರಮಗಳಲ್ಲಿ ಸೀತಾರಾಂ ಕೂಡ ಭಾಗವಹಿಸಲಿದ್ದಾರೆ. ಎಲ್ಲವುಗಳ ನೇತೃತ್ವವನ್ನು ನಾನೇ ವಹಿಸಲಿದ್ದೇನೆ. ಅಮೆರಿಕದಲ್ಲೂ ಈ ಉತ್ಸವ ನಡೆಸುವ ಬಗ್ಗೆ ಅಲ್ಲಿನ ನಿವಾಸಿ ವಲ್ಲೀಶ್ ಶಾಸ್ತ್ರಿ ಭರವಸೆ ನೀಡಿದ್ದಾರೆ’ ಎಂದು ಕಪ್ಪಣ್ಣ ಹೇಳಿದರು.

‘ಕಾವ್ಯ ಬದುಕಿನ ಉತ್ಸವ ಶ್ರೀನಿವಾಸ ಜಿ. ಕಪ್ಪಣ್ಣ–75 ಸಾಂಸ್ಕೃತಿಕ ಸಂಭ್ರಮ’ ಕಾರ್ಯಕ್ರಮದಲ್ಲಿ ಉದ್ಘಾಟಿಸಿದ ಟಿ.ಎನ್. ಸೀತಾರಾಂ ಅವರು, ಕಪ್ಪಣ್ಣ ಅವರೊಂದಿಗಿನ ವಿದ್ಯಾರ್ಥಿ ಜೀವನದ ಅನುಭವಗಳನ್ನು ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಎಚ್. ಎಸ್. ವೆಂಕಟೇಶಮೂರ್ತಿ, ‘ಎಲ್ಲ ಕಲಾವಿದರು, ಸಾಹಿತಿಗಳು ಸಾಕಷ್ಟು ದುಃಖ ಅನುಭವಿಸಿದ್ದಾರೆ. ಎಲ್ಲ ರೀತಿಯ ದುಃಖ, ಕಣ್ಣೀರನ್ನು ನಿವಾರಿಸುವ ಶಕ್ತಿ ಕವಿಯ ಕವಿತ್ವಕ್ಕಿದೆ’ ಎಂದರು. ಸೀತಾರಾಂ, ಕಪ್ಪಣ್ಣ, ವಲ್ಲೀಶ್ ಶಾಸ್ತ್ರಿ ಅವರ ಜತೆಗಿನ ಅಮೆರಿಕ ಪ್ರವಾಸವನ್ನು ಮೆಲುಕು ಹಾಕಿದರು.

ಸಿವಗಂಗ ಟ್ರಸ್ಟ್‌ನ ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಗುಂಡಣ್ಣ, ವಿಶ್ವೇಶ್ವರಯ್ಯ ಒಂದನೇ ಬ್ಲಾಕ್ ನಿವಾಸಿಗಳ ಸಂಘದ ಅಧ್ಯಕ್ಷ ರಮೇಶ್, ಗಿರಿಯಾಚಾರ್ ಇದ್ದರು.

ಐದು ಕಾವ್ಯಗಾಯನ, ಐದು ಕವಿಗೋಷ್ಠಿಗಳು ನಡೆದವು. ಸಾಹಿತಿ ಚಂದ್ರಶೇಖರ ಕಂಬಾರ ಸರ್ವಾಧ್ಯಕ್ಷತೆ ವಹಿಸಿದ್ದರು. ‘ಒಡನಾಡಿಗಳು ಕಂಡಂತೆ ಕಪ್ಪಣ್ಣ’ ಕಾರ್ಯಕ್ರಮದಲ್ಲಿ ಅವರ ಆಪ್ತೇಷ್ಟರು ಅನುಭವಗಳನ್ನು ಮೆಲುಕು ಹಾಕಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



‘ಪಾದಚಾರಿ ಮಾರ್ಗದಲ್ಲಿ ಹುಲ್ಲಿನ ರಾಶಿ’

ಎನ್.ಆರ್. ರಸ್ತೆಯ (ಬಾಲಗಂಗಾಧರಸ್ವಾಮಿ ಮೇಲ್ಸೇತುವೆ ಬಳಿ) ಪಾದಚಾರಿ ಮಾರ್ಗದಲ್ಲಿ ಹುಲ್ಲಿನ ರಾಶಿ, ಬ್ಲಾಕ್‌ಗಳು, ಜಲ್ಲಿಕಲ್ಲು ಸೇರಿ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ವಿವಿಧ ಸಾಮಗ್ರಿಗಳನ್ನು ಹಾಗೇ ಇರಿಸಲಾಗಿದೆ. ಇದರಿಂದ ಪಾದಚಾರಿ ಮಾರ್ಗ ಜನರಿಗೆ ನಿರುಪಯುಕ್ತವಾಗಿದ್ದು, ರಸ್ತೆಯಲ್ಲಿಯೇ ಸಾಗಬೇಕಾದ ಸ್ಥಿತಿಯಿದೆ. ಪರಿಣಾಮ ರಸ್ತೆ ಅಪಘಾತವಾಗುವ ಸಾಧ್ಯತೆಯಿದೆ. ಆದ್ದರಿಂದ ಆದಷ್ಟು ಬೇಗ ತೆರವು ಮಾಡಿಸಿ, ಪಾದಚಾರಿಗಳು ಸಾಗಲು ಅವಕಾಶ ಮಾಡಿಕೊಡಬೇಕು.


ರಾಜೇಶ್, ವ್ಯಾಪಾರಿ



‘ಚರಂಡಿ ಸಮಸ್ಯೆ ನಿವಾರಿಸಿ’

ಮಹದೇವಪುರ ವಿಧಾನಸಭೆ ಕ್ಷೇತ್ರದ ಹೂಡಿ ವಾರ್ಡ್‌ನ ಬಿಳೀಶಿವಾಲೆ ಗ್ರಾಮದಲ್ಲಿನ ರಸ್ತೆಗಳು ಹದಗೆಟ್ಟಿವೆ. ಚರಂಡಿಯ ನಿರ್ವಹಣೆ ಇಲ್ಲದೆ, ಕೊಳಚೆ ನೀರು ರಸ್ತೆಗೆ ಬರುತ್ತಿದೆ. ಇದನ್ನು ಸರಿಪಡಿಸುವಂತೆ ಹಲವು ಬಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇದರಿಂದ ಜನರ ಓಡಾಟಕ್ಕೂ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಚರಂಡಿಯನ್ನು ದುರಸ್ತಿಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಮಾದೇಶ್, ಸ್ಥಳೀಯ ನಿವಾಸಿ



‘ಮರ ಸ್ಥಳಾಂತರಿಸಿ’

ಬಸವನಗುಡಿಯ ಕೃಷ್ಣರಾವ್ ಪಾರ್ಕ್ ಮುಂಭಾಗದ (ಕನಕಪುರ ರಸ್ತೆಯ ಎಡ ಭಾಗ) ರಸ್ತೆಯಲ್ಲಿಯೇ ಮರವಿದ್ದು, ಅದಕ್ಕೆ ಕಟ್ಟೆ ಕಟ್ಟಲಾಗಿದೆ. ಇನ್ನೊಂದೆಡೆ ರಸ್ತೆ ವಿಭಜಕ ಇರುವುದರಿಂದ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಇದರಿಂದ ರಸ್ತೆ ಅಪಘಾತ ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ರಸ್ತೆಯ ನಡುವೆ ಇರುವ ಮರವನ್ನು ಪಕ್ಕದಲ್ಲಿಯೇ ಇರುವ ಕೃಷ್ಣರಾವ್ ಪಾರ್ಕ್‌ಗೆ ಸ್ಥಳಾಂತರ ಮಾಡಿದಲ್ಲಿ ಸುಗಮ ಸಂಚಾರ ಸಾಧ್ಯವಾಗುತ್ತದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಕ್ರಮಕೈಗೊಳ್ಳಬೇಕು.

ಪಿ.ಎನ್.ಎಂ. ಗುಪ್ತ, ಸ್ಥಳೀಯ ನಿವಾಸಿ



‘ಪಾದಚಾರಿ ಮೇಲ್ಸೇತುವೆ ನವೀಕರಿಸಿ’

ಬಿಬಿಎಂಪಿ ಅಧಿಕಾರಿಗಳ ಅಸಡ್ಡೆಯಿಂದಾಗಿ ಕೆಂಪೇಗೌಡ ರಸ್ತೆಯಲ್ಲಿರುವ ಪಾದಚಾರಿ ಮೇಲ್ಸೇತುವೆ ಅವಸಾನಕ್ಕೆ ತುತ್ತಾಗುವ ಸ್ಥಿತಿಗೆ ತಲುಪಿದೆ. ರಾಜ್ಯದ ಪ್ರಥಮ ಪಾದಚಾರಿ ಮೇಲ್ಸೇತುವೆ ಎಂಬ ಹಿರಿಮೆಯೂ ಇದಕ್ಕಿದೆ. ಈ ಪಾದಚಾರಿ ಮೇಲ್ಸೇತುವೆ ದಿನೇ ದಿನೇ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಈಗಲಾದರೂ ಪಾಲಿಕೆ ಅಧಿಕಾರಿಗಳು ಅಥವಾ ಆಯುಕ್ತರು ಈ ಮೇಲ್ಸೇತುವೆಯನ್ನು ದುರಸ್ತಿ ಮಾಡಬೇಕು. ಅದಕ್ಕೆ ಲಿಫ್ಟ್ ಅಳವಡಿಸಿ, ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಅನುವು ಮಾಡಿಕೊಡಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

‘ವಾಲಿದ ವಿದ್ಯುತ್ ಕಂಬ’

ನಗರದ ಲಾಲ್‌ಬಾಗ್ ರಸ್ತೆಯ ಶ್ರೀನಿವಾಸ ಕಾಲೊನಿಯಲ್ಲಿರುವ ಮಣಿ ಡ್ರೈವಿಂಗ್ ತರಬೇತಿ ಶಾಲೆಯ ಬಳಿ ಇರುವ ವಿದ್ಯುತ್ ಕಂಬವೊಂದು ವಾಲಿದೆ. ನಿತ್ಯವೂ ಈ ರಸ್ತೆಯಲ್ಲಿ ನೂರಾರು ವಾಹನಗಳು ಓಡಾಡುತ್ತವೆ. ಅಷ್ಟೇ ಅಲ್ಲ, ಕಂಬದ ಎದುರಿಗೆ ಐಡಿಬಿಐ ಬ್ಯಾಂಕಿನ ಬೃಹತ್ ಟ್ರಾನ್ಸ್‌ಫಾರ್ಮರ್ ಕೂಡಾ ಇದೆ. ಟ್ರಾನ್ಸ್‌ಫಾರ್ಮರ್ ಬಳಿಯಲ್ಲಿನ ಮರದಲ್ಲಿ ತಂತಿಯೊಂದು ನೇತಾಡುತ್ತಿದೆ. ಈ ಬಗ್ಗೆ ಬೆಸ್ಕಾಂ ಅಧಿಕಾರಿಗಳು ಗಮನ ಹರಿಸಿಲ್ಲ. ವಿದ್ಯುತ್ ಕಂಬಕ್ಕೆ ಅಳವಡಿಸಿರುವ ವಿದ್ಯುತ್ ತಂತಿಗಳು ತೆರೆದ ಸ್ಥಿತಿಯಲ್ಲಿವೆ. ಈ ತಂತಿಗಳಿಂದ ವಿದ್ಯುತ್ ಪ್ರವಹಿಸದಂತೆ ರಬ್ಬರ್ ಸುತ್ತುವಳಿಯನ್ನಾಗಲೀ ಅಳವಡಿಸಿಲ್ಲ. ಅವಘಡ ಸಂಭವಿಸುವ ಮುನ್ನ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕು. **ಆಶಿಕಾ,** ಶ್ರೀನಿವಾಸ ಕಾಲೊನಿ

‘ಔಷಧ ಗುಣಮಟ್ಟ: ನಿಯಂತ್ರಕ ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತದಲ್ಲಿ ತಯಾರಿಸಲಾಗುವ ಔಷಧಗಳು ಉತ್ಕೃಷ್ಟ ಗುಣಮಟ್ಟದಿಂದ ಕೂಡಿರಬೇಕು. ಈ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯಗಳಲ್ಲಿನ ಔಷಧ ನಿಯಂತ್ರಕ ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡಬೇಕು’ ಎಂದು ಕೇಂದ್ರ ಆರೋಗ್ಯ ಮತ್ತು ಔಷಧೀಯ ಸಚಿವ ಮನ್ಸುಖ್ ಮಾಂಡವೀಯಾ ಹೇಳಿದ್ದಾರೆ.

ಭಾರತದಲ್ಲಿ ತಯಾರಾಗಿದ್ದ ಔಷಧಗಳ ಗುಣಮಟ್ಟದ ಬಗ್ಗೆ ಜಾಗತಿಕ ಮಟ್ಟದಲ್ಲಿ ಅಪಸ್ವರ ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಅವರು ಕೇಂದ್ರ ಹಾಗೂ ರಾಜ್ಯಗಳ ಔಷಧ ನಿಯಂತ್ರಕ ಸಂಸ್ಥೆಗಳು, ಆರೋಗ್ಯ ಅಧಿಕಾರಿಗಳು ಮತ್ತು ಔಷಧ ತಯಾರಿಕಾ ಕಂಪನಿಗಳ ಪ್ರತಿನಿಧಿಗಳೊಂದಿಗೆ ಹೈದರಾಬಾದ್‌ನಲ್ಲಿ ಭಾನುವಾರ ಮಹತ್ವದ ಸಭೆ ನಡೆಸಿ ಚರ್ಚಿಸಿದ್ದಾರೆ.

ಬಳಿಕ ಮಾತನಾಡಿ, ‘ಕೇಂದ್ರ ಹಾಗೂ ರಾಜ್ಯಗಳಲ್ಲಿನ ಔಷಧ ನಿಯಂತ್ರಕ ಸಂಸ್ಥೆಗಳು ಜೊತೆಯಾಗಿ ಕೆಲಸ ಮಾಡಿದರೆ ಔಷಧ ನಿಯಂತ್ರಕ ವ್ಯವಸ್ಥೆಯೊಳಗಿನ ಲೋಪದೋಷಗಳನ್ನು ಸರಿಪಡಿಸಬಹುದು’ ಎಂದು ತಿಳಿಸಿದ್ದಾರೆ.



ಭಾರತದ ಔಷಧಿ ತಯಾರಿಕಾ ಕಂಪನಿ ಮ್ಯಾರಿಯೊನ್ ಬಯೋಟೆಕ್‌ನ ಕೆಮ್ಮಿನ ಔಷಧ ‘ಡಾಕ್‌-1-ಮ್ಯಾಕ್ಸ್’ ಸೇವಿಸಿ 18 ಮಕ್ಕಳು ಮೃತಪಟ್ಟಿದ್ದಾಗಿ ಉಜ್ಬೇಕಿಸ್ತಾನವು 2022ರ ಡಿಸೆಂಬರ್‌ನಲ್ಲಿ ಆರೋಪಿಸಿತ್ತು. ಭಾರತದ ಮೈಡೇನ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್ ಕಂಪನಿ ತಯಾರಿಸಿದ್ದ ಕೆಮ್ಮಿನ ಔಷಧಿಯನ್ನು ಸೇವಿಸಿ ಗ್ಯಾಂಬಿಯಾದಲ್ಲಿ 2022ರ ಅಕ್ಟೋಬರ್‌ನಲ್ಲಿ 70 ಮಕ್ಕಳು ಅಸುನೀಗಿದ್ದರು. ಔಷಧಿ ತಯಾರಿಕಾ ಮಾನದಂಡಗಳನ್ನು ಉಲ್ಲಂಘಿಸಿದ್ದರಿಂದ ಈ ಕಂಪನಿಯ ಹರಿಯಾಣ ಘಟಕವನ್ನು ಮುಚ್ಚಲಾಗಿತ್ತು.

ಭಾರತದಲ್ಲಿ ತಯಾರಾಗಿದ್ದ ‘ಐ ಡ್ರಾಪ್’ನಿಂದ ಕಣ್ಣಿನ ಸೋಂಕುಗಳು, ಶಾಶ್ವತ ದೃಷ್ಟಿ ಹಾನಿ ಮತ್ತು ರಕ್ತಸ್ರಾವದಂತಹ ಸೋಂಕಿನಿಂದ ಸಂಭವಿಸಿದ ಸಾವು, ಆರೋಗ್ಯದ ಮೇಲಿನ ಪ್ರತಿಕೂಲ ಪರಿಣಾಮ ಸೇರಿ 55 ಪ್ರಕರಣಗಳು ವರದಿಯಾಗಿದ್ದಾಗಿ ಅಮೆರಿಕದ ಆರೋಗ್ಯ ನಿಯಂತ್ರಕವು ಹೇಳಿಕೆ ಬಿಡುಗಡೆ ಮಾಡಿತ್ತು.

ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಬೇಸರ

‘ಮಾಸ್ತಿ ಸಾಹಿತ್ಯ ವಿಮರ್ಶೆ ನಡೆದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಸ್ತಿ ಕನ್ನಡದ ಆಸ್ತಿಯಷ್ಟೇ ಅಲ್ಲ, ಅವರು ಶತಮಾನದ ಸಂತ ಕೂಡ ಹೌದು. ಅವರ ಸಾಹಿತ್ಯದ ವಿಮರ್ಶೆ ಸಮರ್ಪಕವಾಗಿ ನಡೆದಿಲ್ಲ’ ಎಂದು ಬಹುಭಾಷಾ ವಿದ್ವಾಂಸ ಮಲ್ಲೇಪುರಂ ಜಿ. ವೆಂಕಟೇಶ್ ಬೇಸರ ವ್ಯಕ್ತಪಡಿಸಿದರು.

ವಿಕ್ರಂ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಿ.ಎನ್.ಕೃಷ್ಣಮೂರ್ತಿ ಅವರ ‘ಮಾಸ್ತಿ ಸಾಹಿತ್ಯ ಪರಿಚಯ’ ಹಾಗೂ ಶೈಲಜಾ ಹಾಸನ ಅವರ ‘ನಿಲ್ಲು ನಿಲ್ಲೆ ಪತಂಗ’ ಕಥಾ ಸಂಕಲನ ಬಿಡುಗಡೆ ಮಾಡಿದರು. ಇದೇ ವೇಳೆ ಕೆ.ಎಂ. ರಶ್ಮಿ ಅವರಿಗೆ ‘ಎಂ.ಎಲ್.ಆರ್. ಮಧುರ ಸಾಹಿತ್ಯ ಪ್ರಶಸ್ತಿ’ ಹಾಗೂ ಶೈಲಜಾ ಹಾಸನ ಅವರಿಗೆ ‘ಸಂಜೆ ಸಾಹಿತ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

‘ಕನ್ನಡ ಸಾಹಿತ್ಯ ಲೋಕಕ್ಕೆ ಮಾಸ್ತಿ ಅವರು ಹಲವು ಅತ್ಯುತ್ತಮ ಕೃತಿಗಳನ್ನು ನೀಡಿದ್ದಾರೆ. ಅವರು ಎಲ್ಲ ಮಾದರಿಯಲ್ಲಿ ಸಾಹಿತ್ಯ ರಚಿಸಿದ್ದಾರೆ. ಆದರೆ, ಕನ್ನಡ ವಿಮರ್ಶಕರು ಅವರ ಕಥೆಗಳನ್ನು ಹೊರತು ಪಡಿಸಿದರೆ ಬೇರೆ ಕೃತಿಗಳನ್ನು ವಿಮರ್ಶೆಗೆ ಒಳಪಡಿಸಲಿಲ್ಲ. ಕನ್ನಡ ಸಾಹಿತ್ಯ ಲೋಕ ಮಾಸ್ತಿ ಅವರ ಸಾಂಸ್ಕೃತಿಕ ಪರಂಪರೆಯನ್ನು ಮುಂದುರಿಸಬೇಕು’ ಎಂದು ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಕಾದಂಬರಿಕಾರ ಸಂತೋಷ್ ಕುಮಾರ್ ಮೆಹಂದಳೆ, ‘ಕಥೆ, ಕಾದಂಬರಿಗಳನ್ನು ಬರೆಯುವಾಗ ನಮಗೆ ಭೂತಕಾಲದ ಅರಿವಿರಬೇಕು. ಓದುಗರಿಗಾಗಿ ಬರೆಯುತ್ತೇನೆ ಎಂಬ ಕಲ್ಪನೆ ಮನದಲ್ಲಿರಬೇಕು. ಇಲ್ಲವಾದಲ್ಲಿ ಅದು ಅವಸರದ ಸಾಹಿತ್ಯವಾಗಿ ಉಳಿದು ಬಿಡುವ ಸಾಧ್ಯತೆ ಇದೆ. ಈ ಬಗ್ಗೆ ಯುವ ಲೇಖಕರು ಎಚ್ಚರ ವಹಿಸಬೇಕು’ ಎಂದು ಅವರು ತಿಳಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕರ್ಮವೀರ ಸಂಪಾದಕ ಅನಿಲ್ ಕುಮಾರ್, ವಿಕ್ರಂ ಪ್ರಕಾಶನದ ಹರಿಪ್ರಸಾದ್ ಇದ್ದರು.



ನಗರದ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಅನಿತಾ ಶೆಟ್ಟಿ (ಎಂ.ಎಲ್‌ಆರ್ ಮಧುರ ಸಾಹಿತ್ಯ ಪ್ರಶಸ್ತಿಯ ತೃತೀಯ ಬಹುಮಾನ), ಶೈಲಜಾ ಹಾಸನ ಅವರ (‘ನಿಲ್ಲು ನಿಲ್ಲೆ ಪತಂಗ’ ಕಥಾ ಸಂಕಲನಕ್ಕೆ ಸಂಜೆ ಸಾಹಿತ್ಯ ಪ್ರಶಸ್ತಿಯ ಮೊದಲ ಬಹುಮಾನ), ವಿಜಯ ಕೋಟೆಮನೆ (ಎಂ.ಎಲ್‌ಆರ್‌ಮಧುರ ಸಾಹಿತ್ಯ ಪ್ರಶಸ್ತಿಯ ದ್ವಿತೀಯ ಬಹುಮಾನ), ಡಾ. ರಶ್ಮಿ ಕೆ.ಎಂ. (ಎಂ.ಎಲ್‌ಆರ್ ಮಧುರ ಸಾಹಿತ್ಯ ಪ್ರಶಸ್ತಿಯ ಪ್ರಥಮ ಬಹುಮಾನ), ಗೌರಿ ಚಂದ್ರ ಕೇಸರಿ (ಎಂ.ಎಲ್‌ಆರ್ ಮಧುರ ಸಾಹಿತ್ಯ ಪ್ರಶಸ್ತಿಯ ಸಮಾಧಾನಕರ ಬಹುಮಾನ) ನೀಡಲಾಯಿತು – ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಕಪ್ಪತ್ತಗುಡ್ಡ: ಗಣಿಗಾರಿಕೆಗೆ ಅನುಮತಿ ಆತಂಕ–ಪ್ರಧಾನಿಗೆ ಸ್ವಾಮೀಜಿ ಪತ್ರ

ಡಂಬಳ (ಗದಗ ಜಿಲ್ಲೆ): ಉತ್ತರ ಕರ್ನಾಟಕದ ಹಸಿರು ಸಹ್ಯಾದ್ರಿ ಖ್ಯಾತಿಯ ಗದಗ ಜಿಲ್ಲೆಯ ಕಪ್ಪತ್ತಗುಡ್ಡ ಉಳಿಸುವಂತೆ ಡಂಬಳ ಹೋಬಳಿಯ ಕಪ್ಪತ್ತಗುಡ್ಡದ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

‘ಅಪಾರ ಆಯುರ್ವೇದಿಕ ಗಿಡಮೂಲಿಕೆ, ಖನಿಜ ಸಂಪತ್ತನ್ನು ಒಳಗೊಂಡಿರುವ ಕಪ್ಪತ್ತಗುಡ್ಡಕ್ಕೆ ಗಣಿಉದ್ಯಮಿಗಳಿಂದ ಕಂಟಕ ಎದುರಾಗಿದ್ದು, ಸಸ್ಯಕಾಶಿ, ಪರಿಸರ ಇಲ್ಲಿನ ವನ್ಯಜೀವಿ ಉಳಿಸಬೇಕು. ಇದಕ್ಕೆ ಪೂರಕ ಅಗತ್ಯ ಕ್ರಮ ತೆಗೆದುಕೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

‘2019ರಿಂದಲೂ ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆ ನಡೆಸಲು ಹಲವು ಕಂಪನಿಗಳು ಹೊಂಚು ಹಾಕುತ್ತಾ ಬಂದಿವೆ. ಆದರೆ ವಿವಿಧ ಮಠಾಧೀಶರು, ಪರಿಸರವಾದಿಗಳು ಹೋರಾಟ ನಡೆಸಿದ ಫಲವಾಗಿ ಗಣಿಗಾರಿಕೆಗೆ ಅವಕಾಶ ಕೊಡಲು ಹೊರಟಿದ್ದ ಸರ್ಕಾರ ಕಪ್ಪತ್ತಗುಡ್ಡ ವನ್ಯಜೀವಿಧಾಮ ಎಂದು ಘೋಷಣೆ ಮಾಡಿದೆ. ಇಷ್ಟಾದರೂ ಕೆಲವು ಗಣಿಗಾರಿಕೆ ಹಾಗೂ ಕಲ್ಲು ಗಣಿಗಾರಿಕೆಯವರು ಸರ್ಕಾರ ಹಾಗೂ ಅರಣ್ಯ ಇಲಾಖೆಯ ಬೆನ್ನು ಬಿದ್ದಿದ್ದಾರೆ’ ಎಂದು ಸ್ವಾಮೀಜಿ ಪತ್ರದಲ್ಲಿ ಆರೋಪಿಸಿದ್ದಾರೆ.

‘ಅರಣ್ಯ ಇಲಾಖೆಯು ಅರ್ಜಿ ತಿರಸ್ಕರಿಸಿದರೂ, ಹೇಗಾದರೂ ಮಾಡಿ ಸಹ್ಯಾದ್ರಿಯನ್ನು ಕಿತ್ತು ತಿನ್ನಬೇಕೆಂಬ ಒಳಸಂಚು ನಡಿಸಿದ್ದಾರೆ ಶತಾಯಗತಾಯ ಗಣಿಗಾರಿಕೆ ನಡೆಸಲು ಪ್ರಯತ್ನ ನಡೆಸಲಾಗುತ್ತಿದೆ’ ಎಂದಿದ್ದಾರೆ.

ಶ್ರೀನಿವಾಸ ಕಲ್ಯಾಣೋತ್ಸವ ವೈಭವ



ಆನೇಕಲ್: ಕೆ.ಶಿವರಾಮು ಅಭಿಮಾನಿಗಳ ಬಳಗ ತಾಲ್ಲೂಕಿನ ಚಂದಾಪುರದ ಸೂರ್ಯಸಿಟಿಯಲ್ಲಿ ಆಯೋಜಿಸಿದ್ದ ಶ್ರೀನಿವಾಸ ಕಲ್ಯಾಣೋತ್ಸವ ಭಾರಿ ವೈಭವದಿಂದ ನಡೆಯಿತು.

ವೈಭವದ ಕಲ್ಯಾಣೋತ್ಸವದ ಅಲಂಕಾರ ಎಲ್ಲರ ಆಕರ್ಷಣೆಯಾಗಿತ್ತು. ತಿರುಪತಿ ದೇವಾಲಯ ಮಾದರಿಯ ಮಂಟಪ ಕಣ್ಮನ ಸೆಳೆಯಿತು. ಹತ್ತು ಸಾವಿರಕ್ಕೂ ಹೆಚ್ಚು ಜನರು ಕಲ್ಯಾಣೋತ್ಸವ ಕಣ್ತುಂಬಿಕೊಂಡರು.

ನೂರಾರು ಮಹಿಳೆಯರು ಮಂಗಳ ಕಲಶಗಳೊಂದಿಗೆ ಸೂರ್ಯಸಿಟಿಯ ಪ್ರವೇಶದ್ವಾರದಿಂದ ಮೈದಾನದವರೆಗೆ ಮೆರವಣಿಗೆ ನಡೆಸಿದರು. ವಿವಿಧ ಧಾರ್ಮಿಕ ಕಾರ್ಯಗಳು ನಡೆದವು. ಶನಿವಾರ ಸಂಜೆ 6ರಿಂದಲೂ ಜನರು ದರ್ಶನ ಪಡೆದರು.

‘ಧಾರ್ಮಿಕ ಕಾರ್ಯಕ್ರಮಗಳಿಂದ ಧಾರ್ಮಿಕ ಮತ್ತು ಸಾಮಾಜಿಕ ಪ್ರಜ್ಞೆ ಹೆಚ್ಚಾಗುತ್ತದೆ. ತಾಲ್ಲೂಕಿನ ಜನತೆಗೆ ತಿರುಪತಿ ಶ್ರೀನಿವಾಸನ ದರ್ಶನ ಕಲ್ಪಿಸುವ ನಿಟ್ಟಿನಲ್ಲಿ ಕಲ್ಯಾಣೋತ್ಸವ ಆಯೋಜಿಸಲಾಗಿದೆ’ ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಮು ಹೇಳಿದರು. ಚಂದಾಪುರ ರಾಮಕೃಷ್ಣ ಆಶ್ರಮದ ಯತೀಶ್ವರಿ ರಾಮಪ್ರಿಯಾಂಭ ಇದ್ದರು.



ಜೆ.ಪಿ ನಗರ 8ನೇ ಬಡಾವಣೆಯ ಪುಟ್ಟೇನಹಳ್ಳಿಯಲ್ಲಿ ಸಂತ ಸೇವಾಲಾಲರ 284ನೇ ಜಯಂತಿಯನ್ನು ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ ಉದ್ಘಾಟಿಸಿದರು. ಬರಹಗಾರ ಎ.ಆರ್ ಗೋವಿಂದಸ್ವಾಮಿ, ರಾಜ ನಾಯ್ಕ, ವೆಂಕಟೇಶ್ ನಾಯ್ಕ ಶ್ರೀನಿವಾಸ್, ನರಸಿಂಹ ನಾಯ್ಕ, ಮುತ್ತು ನಾಯ್ಕ, ಶಿವಾಜಿ ನಾಯ್ಕ, ಸಿದ್ದನಾಯ್ಕ, ಮಹಾದೇವ ಇದ್ದರು

‘ಸೇವಾ ಕ್ಷೇತ್ರದಲ್ಲಿ ಶೇ 56ರಷ್ಟು ಮಹಿಳೆಯರು ದುಡಿಮೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಡಿಮೆ ವೇತನ ಸಿಗುವ ಸೇವಾ ಕ್ಷೇತ್ರದಲ್ಲಿ ಶೇ 56ರಷ್ಟು ಮಹಿಳೆಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಅದೇ ನಿರ್ಧಾರ ತೆಗೆದುಕೊಳ್ಳುವ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ಶೇ 14ರಷ್ಟು ಮಹಿಳೆಯರು ಮಾತ್ರ ಕೆಲಸ ಮಾಡುತ್ತಿದ್ದಾರೆ’ ಎಂದು ಲೇಖಕಿ ಎಚ್.ಎಸ್. ಅನುಪಮಾ ಹೇಳಿದರು.

ನಗರದಲ್ಲಿ ಮುನ್ನಡೆ, ಸಾಧನಾ, ಸಮೃದ್ಧಿ ಮತ್ತು ಗಾರ್ಮೆಂಟ್ ಲೇಬರ್ ಯೂನಿಯನ್ ಸಂಸ್ಥೆ ಭಾನುವಾರ ಆಯೋಜಿಸಿದ್ದ ‘ದುಡಿಯುವ ಮಾನಿನಿಯರ ಮಹಾಸಂಗಮ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಹಿಂದೆ ಮಹಿಳೆಯರನ್ನು ನಾಲ್ಕು ಗೋಡೆಯ ಅಡುಗೆ ಮನೆಯಲ್ಲಿ ಬಂಧಿಸಿ ಇಡಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಮಹಿಳೆಯೂ ಕೂಡ ಮನೆಯಿಂದ ಹೊರಗೆ ಹೋಗಿ ದುಡಿಯುತ್ತಿದ್ದಾಳೆ’ ಎಂದು ಹೇಳಿದರು.

‘ಯುವತಿಯರು ಮದುವೆಗೂ ಮುನ್ನ ತನ್ನ ಭಾವಿ ಸಂಗಾತಿಗೆ ಅಡುಗೆಯ ಕೆಲಸ ಬರುತ್ತದೆಯೇ ಎಂಬುದನ್ನು ಖಚಿತ ಪಡಿಸಿಕೊಂಡ ನಂತರವೇ ಮದುವೆಗೆ ಒಪ್ಪಿಗೆ ಸೂಚಿಸಿ’ ಎಂದು ಕರೆ ನೀಡಿದರು.



ನಗರದಲ್ಲಿ ‘ದುಡಿಯುವ ಮಾನಿನಿಯರ ಮಹಾಸಂಗಮ’ ಕಾರ್ಯಕ್ರಮಕ್ಕೆ ರಾಜ್ಯ ಸ್ಕೌಟ್ಸ್ ಆಂಡ್ ಗೈಡ್ಸ್ ಪ್ರಧಾನ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ ಚಾಲನೆ ನೀಡಿದರು.

‘ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಯುವಕರು, ಮಹಿಳಾ ಸಮಾನತೆ ಕುರಿತು ಅರ್ಥೈಸಿಕೊಂಡು ಸ್ಪಂದಿಸಬೇಕಿದೆ’ ಎಂದು ಹೇಳಿದರು.

ರಾಜ್ಯ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ರಾಜ್ಯ ಪ್ರಧಾನ ಆಯುಕ್ತ ಪಿ.ಜಿ. ಆರ್. ಸಿಂಧ್ಯಾ ಅವರು ‘ದುಡಿಯುವ ಕಾರ್ಮಿಕರಿಗೆ ಕೇವಲ ಹೊಟ್ಟೆ ತುಂಬಿಸಿಕೊಳ್ಳುವುದೇ ಉದ್ದೇಶ ಆಗಬಾರದು. ದುಡಿಯುವುದರ ಜೊತೆಗೆ ವರ್ತಮಾನದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು’ ಎಂದರು.

ಜನವಾದಿ ಮಹಿಳಾ ಸಂಘಟನೆ ವಿಮಲಾ ಮಾತನಾಡಿ, ‘ಇತ್ತೀಚೆಗೆ ವಿಧಾನಸಭೆ ಅಧಿವೇಶನದಲ್ಲಿ ದಿನದ 12 ಗಂಟೆ ಕೆಲಸ ಮಾಡುವ ಹೊಸ ಕಾರ್ಮಿಕ ನೀತಿ ಅನುಮೋದನೆ ನೀಡಲಾಗಿದೆ. ಇದನ್ನು ಎಲ್ಲ ಮಹಿಳೆಯರು ವಿರೋಧಿಸಬೇಕಿದೆ’ ಎಂದು ಕರೆ ನೀಡಿದರು.

ಗಾರ್ಮೆಂಟ್ಸ್ ಲೇಬರ್ ಯೂನಿಯನ್ ಮುಖ್ಯಸ್ಥರಾದ ರುಕ್ಮಿಣಿ ಅಧ್ಯಕ್ಷತೆ ವಹಿಸಿದ್ದರು.

ಮುನ್ನಡೆ ಸಂಸ್ಥೆಯ ಯಶೋಧಾ, ಸಮೃದ್ಧಿ ಸಂಸ್ಥೆಯ ಶಿವರಾಜೇಗೌಡ, ಸಾಧನಾ ಸಂಸ್ಥೆಯ ಗಾಯತ್ರಿ ಇದ್ದರು.

ಯಶವಂತಪುರದಲ್ಲಿ ಒಡೆದ ಪೈಪ್: ನೀರು ಪೋಲು

ಬೆಂಗಳೂರು: ಯಶವಂತಪುರದಲ್ಲಿ ಭಾನುವಾರ ಕುಡಿಯುವ ನೀರು ಪೂರೈಸುವ ಪೈಪ್ ಒಡೆದಿದೆ. ಇದರಿಂದ, ಅಪಾರ ಪ್ರಮಾಣದಲ್ಲಿ ನೀರು ಪೋಲಾಗಿದೆ.

ಯಶವಂತಪುರ ಎಂಇಐ ಬಸ್ ನಿಲ್ದಾಣದ ಸಮೀಪ ಪೈಪ್ ಒಡೆದಿದ್ದು, ಸುಮಾರು 8ರಿಂದ 10 ಅಡಿ ಎತ್ತರದಲ್ಲಿ ನೀರು ಚಿಮ್ಮಿದೆ. ಸುಮಾರು ಒಂದು ಗಂಟೆ ನೀರು ಪೋಲಾಗಿದೆ. ವ್ಯರ್ಥವಾಗಿ ಹರಿಯುತ್ತಿದ್ದ ನೀರಿನಲ್ಲಿ ನಾಗರಿಕರು ತಮ್ಮ ಕಾರುಗಳನ್ನು ತೊಳೆಯುತ್ತಿದ್ದ ದೃಶ್ಯ ಕಂಡು ಬಂತು. ಆದರೆ, ಬೈಕ್ ಸವಾರರ ಸಂಚಾರಕ್ಕೆ ಅಡ್ಡಿಯಾಗಿತ್ತು. ಪಾದಚಾರಿಗಳು ರಸ್ತೆ ದಾಟಲು ಪರದಾಡಬೇಕಾಯಿತು. ಜಲಮಂಡಳಿ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪೈಪ್‌ಗಳ ದುರಸ್ತಿ ಕಾರ್ಯ ಕೈಗೊಂಡರು.



ಪೈಪ್ ಒಡೆದು ನೀರು ಪೋಲಾಯಿತು

ಭಾರತ–ಬಾಂಗ್ಲಾ ಗಡಿ: ಇಬ್ಬರು ಬಿಎಸ್‌ಎಫ್ ಯೋಧರ ಮೇಲೆ ಹಲ್ಲೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ನಿರ್ಮಲ್‌ಚಾರ್ ಬಳಿ ಭಾರತದ ಗಡಿ ನುಸುಳಿ ಜಾನುವಾರು ಮೇಯಿಸಲು ಬಂದಿದ್ದ ಬಾಂಗ್ಲಾದೇಶದ ರೈತರ ಗುಂಪೊಂದು ಇಬ್ಬರು ಬಿಎಸ್‌ಎಫ್ ಯೋಧರ ಮೇಲೆ ಹಲ್ಲೆ ನಡೆಸಿ, ಅವರಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಂಡಿದೆ ಎಂದು ಮೂಲಗಳು ಭಾನುವಾರ ತಿಳಿಸಿವೆ.

ರೈತರನ್ನು ತಡೆದ ಯೋಧರ ಮೇಲೆ ನೂರಕ್ಕಿಂತಲೂ ಹೆಚ್ಚು ಮಂದಿ ದೊಣ್ಣೆಗಳಿಂದ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ವಿಜ್ಞಾನ ದಿನಾಚರಣೆ: ರಸಪ್ರಶ್ನೆ ಸ್ಪರ್ಧೆಯ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯಿಂದ ಆನ್‌ಲೈನ್‌ನಲ್ಲಿ ನಡೆದಿದ್ದ ಸರ್ ಸಿ.ವಿ. ರಾಮನ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟದ ಡಾಲ್ಫಿನ್ಸ್ ಪಬ್ಲಿಕ್ ಶಾಲೆಯ 9ನೇ ತರಗತಿ ವಿ.ಲಕ್ಷ್ಮಿ (ಪ್ರಥಮ, ₹ 5 ಸಾವಿರ ನಗದು), ಅದೇ ಶಾಲೆಯ 10ನೇ ತರಗತಿ ಎನ್.ಅಭಿಶ್ರೀ (ದ್ವಿತೀಯ, ₹ 4 ಸಾವಿರ), ಹಾಸನದ ವಿಜಯ ಶಾಲೆಯ 8ನೇ ತರಗತಿ ಬಿ.ರಾಘವ್ (ತೃತೀಯ, ₹ 3 ಸಾವಿರ) ಅವರು ವಿಜೇತರಾಗಿದ್ದಾರೆ.



ಅಭಿಶ್ರೀ



ರಾಘವ್



ಲಕ್ಷ್ಮಿ

ಹಾಸನದ ವಿಜಯ ಶಾಲೆಯ 9ನೇ ತರಗತಿ ದಿಗಂತ್, ಚಿತ್ರದುರ್ಗದ ಸಂತ ಜೋಸೆಫ್ ಕಾನ್ವೆಂಟ್‌ನ 8ನೇ ತರಗತಿ ವಾಜೀದಾ ತಬಸ್ಸುಮ್, ಉಡುಪಿ ಮಹಿಳಾ ಸರ್ಕಾರಿ ಪದವಿ ಪೂರ್ವ ಕಾಲೇಜಿನ 9ನೇ ತರಗತಿ ಎಚ್.ಎಸ್. ಸಂಕೇತ, ಶಿಡ್ಲಘಟ್ಟದ ಪಂಚಮುಖಿ ಶಾಲೆಯ 10ನೇ ತರಗತಿ ವಿ.ಸಾನಿಕ್, ಇದೇ ಶಾಲೆಯ 9ನೇ ತರಗತಿ ಆರ್.ಸೌಜನ್ಯಾ, ಕೋಲಾರ ಜಿಲ್ಲೆ ಶ್ರೀನಿವಾಸಪುರ ರಾಚೆಲ್ ಇಂಗ್ಲಿಷ್ ಮಾಡರ್ನ್ ಶಾಲೆಯ 8ನೇ ತರಗತಿ ಎಸ್. ಹರಿತಸ್ಯ, ಹಾಸನ ಜಿಲ್ಲೆ ಅರಕಲಗೂಡು ಕ್ರಿಸ್ತಜ್ಯೋತಿ ಶಾಲೆಯ 8ನೇ ತರಗತಿ ಎಂ.ನೇಹಮಧುರ, ಹಾಸನ ಕ್ರೈಸ್ಟ್ ಸ್ಕೂಲ್‌ನ 10ನೇ ತರಗತಿ, ಸೈಯ್ಯದ್ ಉಮ್ಮೆ ಕುಲ್ಸುಮ್ ಸಮಾಧಾನಕರ ಬಹುಮಾನ ಪಡೆದಿದ್ದಾರೆ (ತಲಾ ₹ 1 ಸಾವಿರ).

ಫೆ.28ರಂದು ನಡೆಯುವ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪೇ ಎಂಎಲ್‌ಎ: ಯುವ ಕಾಂಗ್ರೆಸ್ ಅಧ್ಯಕ್ಷ ಬಂಧನ

ತುಮಕೂರು: ‘ಪೇ ಎಂಎಲ್‌ಎ’ ಪೋಸ್ಟರ್ ಪ್ರಕರಣದ ವಿಚಾರಣೆಯಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಕಾಂಗ್ರೆಸ್ ಯುವ ಘಟಕದ ಜಿಲ್ಲಾ ಅಧ್ಯಕ್ಷ ಶಶಿ ಹುಲಿಕುಂಟೆಮಠ ಅವರನ್ನು ಶನಿವಾರ ಬಂಧಿಸಲಾಗಿದೆ.



ಶಶಿ

‘ಪೇ ಎಂಎಲ್‌ಎ’ ಪೋಸ್ಟರ್ ಅಂಟಿಸುತ್ತಿದ್ದ ನಾಲ್ವರು ಯುವಕರನ್ನು ತಿಲಕ್ ಪಾರ್ಕ್ ಠಾಣೆಯ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದರು. ಈ ವೇಳೆ ಠಾಣೆಗೆ ಆಗಮಿಸಿದ ಶಶಿ ಹುಲಿಕುಂಟೆಮಠ ಅವರು ಯುವಕರನ್ನು ಕರೆದುಕೊಂಡು ಹೋಗಿದ್ದರು.

ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಶಶಿ ಅವರನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರು ಪಡಿಸಿದರು.

ಸಕ್ರಿಯ ರಾಜಕಾರಣಕ್ಕೆ ಗುಲಾಂ ನಬಿ ಪುತ್ರ

ಶ್ರೀನಗರ (ಪಿಟಿಐ): ‘ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಕ್ಷದ (ಡಿಪಿಎಪಿ) ಅಧ್ಯಕ್ಷ ಗುಲಾಂ ನಬಿ ಆಜಾದ್ ಅವರ ಮಗ ಸದ್ದಾಂ ನಬಿ ಆಜಾದ್ ಅವರು ಸಕ್ರಿಯ ರಾಜಕಾರಣಕ್ಕೆ ಧುಮುಕಿದ್ದಾರೆ’ ಎಂದು ಪಕ್ಷದ ಮುಖ್ಯ ವಕ್ತಾರ ಸಲ್ಮಾನ್ ನಿಜಾಮಿ ಭಾನುವಾರ ತಿಳಿಸಿದ್ದಾರೆ.

ನಿಗೀನ್ ಕ್ಲಬ್‌ನಲ್ಲಿ ಭಾನುವಾರ ನಡೆದ ಪಕ್ಷದ ಯುವ ಸಮಾವೇಶದಲ್ಲಿ 41 ವರ್ಷದ ಸದ್ದಾಂ ಭಾಗಿಯಾಗಿದ್ದರು. ಉದ್ಯಮಿಯಾಗಿರುವ ಅವರು ತಮ್ಮ ತಂದೆ ಹಾಗೂ ಪಕ್ಷದ ಇತರ ಮುಖಂಡರ ಜೊತೆ ವೇದಿಕೆ ಹಂಚಿಕೊಂಡಿದ್ದರು.

ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ನ್ಯಾಯನಿಷ್ಠುರಿಯ ಸ್ಮರಣೆ

‘ಜಾತ್ಯತೀತ ತತ್ವಕ್ಕಾಗಿ ಹೋರಾಡಿದ್ದ ಕೋ.ಚೆ.’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರ್ಕ್ಸ್‌ವಾದ ನಂಬಿದ್ದ ಕೋ. ಚೆನ್ನಬಸಪ್ಪ, ಅದನ್ನು ಅರ್ಥೈಸಿಕೊಂಡು ಬಾಳಿದರು. ಅವರು ಕಂಡ ಜಾತ್ಯತೀತತೆ, ಎಲ್ಲರಿಗೂ ಸಾಮಾಜಿಕ– ರಾಜಕೀಯ ನ್ಯಾಯ ಹಾಗೂ ಮಹಿಳಾ ಸಬಲೀಕರಣ ಆಸೆಗಳನ್ನು ನಾವೆಲ್ಲರೂ ಈಡೇರಿಸ ಬೇಕು’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದರು.

‘ಕೋ.ಚೆ ಸಾಹಿತ್ಯ ಮತ್ತು ಶಿಕ್ಷಣ ಟ್ರಸ್ಟ್’ ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕೋ. ಚೆನ್ನಬಪ್ಪ ಜನ್ಮ ಶತಮಾನೋತ್ಸವ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮಾರ್ಕ್ಸ್‌ವಾದಕ್ಕೂ ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣ ಹಾಗೂ ಕುವೆಂಪು ಅವರ ತತ್ವಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಕೋ. ಚೆನ್ನಬಸಪ್ಪ ಅವರು ಸಹ ಮಾರ್ಕ್ಸ್‌ವಾದದ ಮೇಲೆ ಅಚಲ ನಂಬಿಕೆ ಇಟ್ಟುಕೊಂಡಿದ್ದರು. ಸಂವಿಧಾನದ ಮೂಲತತ್ವ ಜಾತ್ಯತೀತತೆ ಸಂರಕ್ಷಿಸಲು ನಿರ್ಭೀತಿಯಿಂದ ಹೋರಾಡಿದ್ದರು’ ಎಂದರು. ‘ಅಯೋಧ್ಯೆಯಲ್ಲಿ ಮಸೀದಿ ಧ್ವಂಸಗೊಳಿಸಿದಾಗ ಕೋ.ಚೆ ಮನಸ್ಸು ಕರಗಿತ್ತು. ಧ್ವಂಸದ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಧರ್ಮ ನಿರಪೇಕ್ಷತೆ ಬೋಧಿಸಲು ಜಾತ್ಯತೀತತೆ ಸಂರಕ್ಷಣಾ ವೇದಿಕೆ ಸ್ಥಾಪಿಸಿದ್ದರು’ ಎಂದರು. ‘ವಕೀಲ ವೃತ್ತಿಯಲ್ಲಿ ಕೋ.ಚೆನ್ನಬಸಪ್ಪ ಅವರು ಶಿಸ್ತಿನ ಸಿಪಾಯಿ. ಅವರಂಥ ವಕೀಲರು ಇಂದು ಸಿಗುವುದು ವಿರಳ’ ಎಂದರು. ಇಳಕಲ್ ಚಿತ್ತರಗಿ ಸಂಸ್ಥಾನ ಮಠದ ಗುರು ಮಹಾಂತ ಸ್ವಾಮೀಜಿ, ‘12ನೇ ಶತಮಾನದ ಶರಣರ ರೀತಿಯಲ್ಲಿ ಬದುಕಿದವರು ಕೋ.ಚೆನ್ನಬಸಪ್ಪ’ ಎಂದರು.


ಗೊ.ರು. ಚನ್ನಬಸಪ್ಪ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಆಡಳಿತ ನ್ಯಾಯ ಮಂಡಳಿ ಉಪಾಧ್ಯಕ್ಷೆ ಎಸ್. ಸುಜಾತಾ, ಲೇಖಕಿ ಡಾ. ವಿಜಯಾ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್, ಎಂ.ಎಸ್. ರಾಮಯ್ಯ ಸ್ಮಾರಕ ಆಸ್ಪತ್ರೆಯ ಅಧ್ಯಕ್ಷ ಡಾ. ಕೆ.ಸಿ. ಗುರುದೇವ್, ಪತ್ರಕರ್ತ ಲಕ್ಷ್ಮಣ ಕೊಡಸೆ, ಟ್ರಸ್ಟ್ ಅಧ್ಯಕ್ಷೆ ಶಾಂತಾ ಜಯಪ್ರಸಾದ್ ಇದ್ದರು.

ಪುಸ್ತಕ ಬಿಡುಗಡೆ

ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿರುವ ‘ಬೇಡಿ ಕಳಚಿತು ದೇಶ ಒಡೆಯಿತು’ ಕಾದಂಬರಿ ಹಾಗೂ ‘ಕೋ. ಚೆನ್ನಬಸಪ್ಪ ಸಮಗ್ರ ಸಾಹಿತ್ಯ’ ಕಾವ್ಯ ಸಮೀಕ್ಷೆ ಎರಡು ಸಂಪುಟ ಮತ್ತು ‘ಕೋ.ಚೆ ನೂರರ ನೆನಪು’ ಪುಸ್ತಕಗಳನ್ನು ಬಿಡುಗಡೆ ಮಾಡ ಲಾಯಿತು. ಕೋ.ಚೆನ್ನಬಸಪ್ಪ ಅವರ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.



ಸಮಾರಂಭದಲ್ಲಿ ಕೋ. ಚೆನ್ನಬಸಪ್ಪ ಭಾವಚಿತ್ರಕ್ಕೆ ಡಾ.ಕೆ.ಸಿ.ಗುರುದೇವ್, ನಿವೃತ್ತ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡ, ಸುಜಾತ, ಲೇಖಕಿ ವಿಜಯಾ, ಇಳಕಲ್ಲ ಚಿತ್ತರಗಿ ಸಂಸ್ಥಾನ ಮಠದ ಗುರು ಮಹಾಂತಸ್ವಾಮೀಜಿ ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ


ಕಲ್ಲು ಎಸೆತದಿಂದ ವಂದೇ ಭಾರತ್ ರೈಲಿನ ಕಿಟಕಿ ಗಾಜು ಒಡೆದಿರುವುದು

ವಂದೇ ಭಾರತ್ ರೈಲಿಗೆ ಕಲ್ಲು: ಮೊಬೈಲ್‌ಗಾಗಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ ಹೊರ ಜಿಲ್ಲೆ ಹಾಗೂ ರಾಜ್ಯಗಳಿಗೆ ಸಂಚರಿಸುವ ರೈಲುಗಳ ಮೇಲೆ ಕಿಡಿಗೇಡಿಗಳು ಕಲ್ಲು ಎಸೆಯುತ್ತಿದ್ದು, ಹಲವು ಪ್ರಯಾಣಿಕರು ಗಾಯಗೊಳ್ಳುತ್ತಿದ್ದಾರೆ. ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ರೈಲ್ವೆ ಪೊಲೀಸರು, ಹಳಿಗಳ ಬಳಿ ಗಸ್ತು ಹೆಚ್ಚಿಸಿದ್ದಾರೆ.

ಮೆಜೆಸ್ಟಿಕ್ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣದಿಂದ ಹೋಗುವ ಹಲವು ರೈಲುಗಳ ಮೇಲೆ ಕಲ್ಲು ಎಸೆಯುತ್ತಿರುವ ಬಗ್ಗೆ ಎರಡು ತಿಂಗಳಲ್ಲಿ 34 ಪ್ರಕರಣಗಳು ದಾಖಲಾಗಿವೆ. ವಂದೇ ಭಾರತ್ ಹಾಗೂ ಇತರೆ ರೈಲುಗಳಿಗೆ ಕಲ್ಲೇಟು ಬಿದ್ದಿದೆ. ಕೆಲ ರೈಲುಗಳ ಗಾಜುಗಳು ಒಡೆದಿವೆ. ಕಿಟಕಿ ಹಾಗೂ ಬಾಗಿಲು ಬಳಿ ಕುಳಿತಿದ್ದ ಪ್ರಯಾಣಿಕರಿಗೆ ಗಾಯಗಳಾಗಿದ್ದು, ಅವರು ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡು ಪೊಲೀಸರಿಗೆ ದೂರು ನೀಡಿದ್ದಾರೆ.

‘ನಗರದಲ್ಲಿ ಹಾದು ಹೋಗಿರುವ ಹಳಿಗಳ ಅಕ್ಕ–ಪಕ್ಕದಲ್ಲಿ ಜನವಸತಿ ಇದೆ. ಕೆಲವೆಡೆ ಕಟ್ಟಡಗಳು ಹಾಗೂ ಮಾರುಕಟ್ಟೆಗಳಿವೆ. ಕೆಲವರು, ಹಳಿ ಬಳಿ ಅಡಗಿ ಕುಳಿತು ರೈಲುಗಳ ಮೇಲೆ ಕಲ್ಲು ಎಸೆಯುತ್ತಿದ್ದಾರೆ’ ಎಂದು ರೈಲ್ವೆ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ರೈಲಿನಲ್ಲಿ ಪ್ರಯಾಣಿಸುವ ಕೆಲ ಪ್ರಯಾಣಿಕರು, ಕಿಟಕಿ ಹಾಗೂ ಬಾಗಿಲು ಬಳಿ ಮೊಬೈಲ್‌ನಲ್ಲಿ ಮಾತನಾಡುತ್ತ ಕುಳಿತಿರುತ್ತಾರೆ. ಅಂಥ ಪ್ರಯಾಣಿಕರನ್ನು ಗುರಿಯಾಗಿಸಿಕೊಂಡು ಕಲ್ಲು ಎಸೆಯಲಾಗುತ್ತಿದೆ. ಕಲ್ಲೇಟು ಬೀಳುತ್ತಿದ್ದಂತೆ ಪ್ರಯಾಣಿಕರು, ಮೊಬೈಲ್‌ಗಳನ್ನು ಕೈ ಬಿಡುತ್ತಾರೆ. ಅವಾಗಲೇ ಮೊಬೈಲ್‌ಗಳು ಹಳಿ ಹಾಗೂ ಅಕ್ಕ–ಪಕ್ಕದಲ್ಲಿ ಬೀಳುತ್ತವೆ. ಅಂಥ ಮೊಬೈಲ್ ಆಸೆಗಾಗಿ ಕಿಡಿಗೇಡಿಗಳು ಕೃತ್ಯ ಎಸಗುತ್ತಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ತಿಳಿಸಿದರು.

‘ಜನವರಿಯಲ್ಲಿ 21 ಹಾಗೂ ಫೆಬ್ರುವರಿಯಲ್ಲಿ 13 ಪ್ರಕರಣಗಳು ದಾಖಲಾಗಿವೆ. ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದಲ್ಲಿ ಹೊರಟಿದ್ದ ವಂದೇ ಭಾರತ್ ರೈಲಿಗೆ ಕೆ.ಆರ್.ಪುರ ಬಳಿ ಶನಿವಾರ ಕಿಡಿಗೇಡಿಗಳು ಕಲ್ಲು ಎಸೆದಿದ್ದಾರೆ. ರೈಲಿನ ಕಿಟಕಿ ಗಾಜುಗಳು ಒಡೆದಿವೆ’ ಎಂದು ಹೇಳಿದರು.

ಆಟೊ ಗುದ್ದಿ ಕರ್ತವ್ಯನಿರತ ಎಎಸ್‌ಐ ಗಾಯ

ಬೆಂಗಳೂರು: ಬಸವೇಶ್ವರ ವೃತ್ತದಲ್ಲಿ (ಚಾಲುಕ್ಯ) ಆಟೊವೊಂದು ಗುದ್ದಿ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಾಗರಾಜ್ (48) ಅವರು ತೀವ್ರ ಗಾಯಗೊಂಡಿದ್ದು, ಅಪಘಾತವೆಸಗಿದ್ದ ಆರೋಪದಡಿ ಚಾಲಕ ಶಿವಕುಮಾರ್ ಎಂಬುವರನ್ನು ಹೈಗ್ರೌಂಡ್ಸ್ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಹೈಗ್ರೌಂಡ್ಸ್ ಸಂಚಾರ ಠಾಣೆಯಲ್ಲಿ ಕೆಲಸ ಮಾಡುತ್ತಿರುವ ನಾಗರಾಜ್, ಭಾನುವಾರ ಕರ್ತವ್ಯದಲ್ಲಿದ್ದ ವೇಳೆ ಈ ಅವಘಡ ಸಂಭವಿಸಿದೆ. ತಲೆ ಹಾಗೂ ಕೈ–ಕಾಲುಗಳಿಗೆ ಪೆಟ್ಟು ಬಿದ್ದಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆಟೊ ಚಾಲಕ ಶಿವಕುಮಾರ್, ಅರಮನೆ ರಸ್ತೆಯಲ್ಲಿ ಮಹಾರಾಣಿ ಕಾಲೇಜು ಕಡೆಯಿಂದ ಚಾಲುಕ್ಯ ವೃತ್ತದತ್ತ ಹೊರಟಿದ್ದ. ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಆಟೊ ಚಲಾಯಿಸಿದ್ದ. ಚಾಲುಕ್ಯ ವೃತ್ತದಲ್ಲಿ ನಿಂತಿದ್ದ ನಾಗರಾಜ್ ಅವರಿಗೆ ಆಟೊ ಗುದ್ದಿತ್ತು’ ಎಂದರು.

‘ಅಪಘಾತದ ನಂತರ ಆಟೊ ಸಮೇತ ಶಿವಕುಮಾರ್ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದ. ಪೊಲೀಸರು, ಸ್ಥಳೀಯರು ಈತನನ್ನು ಬೆನ್ನಟ್ಟಿ ಹಿಡಿದ್ದಾರೆ. ಈತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಎಸ್‌ಐ ನಾಗರಾಜ್ ಆರೋಗ್ಯ ಸ್ಥಿತಿ ಸುಧಾರಿಸುತ್ತಿದೆ’ ಎಂದು ತಿಳಿಸಿದರು.

ಎಸ್.ಎಲ್. ಭೋಜೇಗೌಡ ಅವರ ಕಾರಿನ ನೋಂದಣಿ ಸಂಖ್ಯೆ ನಕಲು • ಇಬ್ಬರ ಬಂಧನ

ಎಂಎಲ್‌ಸಿ ‘ಇನ್ನೋವಾ’ ನಕಲಿ ಫಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರ ಇನ್ನೋವಾ ಕಾರಿನ ನೋಂದಣಿ ಸಂಖ್ಯೆ ಫಲಕವನ್ನು ನಕಲು ಮಾಡಿ ಬೇರೊಂದು ಕಾರಿಗೆ ಅಳವಡಿಸಿ ಮಾರಾಟಕ್ಕಿಟ್ಟಿದ್ದ ಇಬ್ಬರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮೈಸೂರಿನ ಶಹಬಾಜ್ ಹಾಗೂ ಮಂಜುನಾಥ್ ಬಂಧಿತರು. ಭೋಜೇಗೌಡ ಆಪ್ತ ಸಹಾಯಕ ನೀಡಿದ್ದ ದೂರಿನಡಿ ಇವರಿಬ್ಬರನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಇಬ್ಬರನ್ನೂ ಕಸ್ಟಡಿಗೆ ಪಡೆಯಲಾಗಿದೆ. ಆರೋಪಿ ಶಹಬಾಜ್, ಜೆಡಿಎಸ್ ಮುಖಂಡನೆಂದು ಹೇಳಿಕೊಳ್ಳುತಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಭೋಜೇಗೌಡ ಅವರು ಇನ್ನೋವಾ ಕಾರು ಬಳಸುತ್ತಿದ್ದಾರೆ. ಅವರ ಕಾರನ್ನೇ ಹೋಲುವ ಅಪರಿಚಿತರೊಬ್ಬರ ಇನ್ನೋವಾ ಕಾರನ್ನು ಆರೋಪಿಗಳು ಕಳ್ಳತನ ಮಾಡಿದ್ದಾರೆ. ಕದ್ದ ಕಾರಿಗೆ ಭೋಜೇಗೌಡ ಅವರ ಕಾರಿನ ನೋಂದಣಿ ಸಂಖ್ಯೆ ಫಲಕ ಅಳವಡಿಸಿದ್ದಾರೆ. ಇದೇ ಕಾರನ್ನು ಮಾರಾಟ ಮಾಡಲೆಂದು ಕ್ವೀನ್ಸ್ ರಸ್ತೆಯಲ್ಲಿರುವ ‘ಐ ಕಾರ್ಸ್ ಸ್ಟುಡಿಯೊ’ ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಮಳಿಗೆಯಲ್ಲಿ ಇರಿಸಿದ್ದರು’ ಎಂದು ತಿಳಿಸಿದರು.

‘ಮಳಿಗೆಯಲ್ಲಿದ್ದ ಕಾರು ಗಮನಿಸಿದ್ದ ಆಪ್ತ ಸಹಾಯಕ, ಭೋಜೇಗೌಡ ಅವರಿಗೆ ಮಾಹಿತಿ ನೀಡಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದರು. ಮಳಿಗೆ ಮಾಲೀಕ ಇಮ್ರಾನ್‌ನನ್ನು ವಶಕ್ಕೆ ಪಡೆಯಲಾಗಿತ್ತು. ಈತ ನೀಡಿದ್ದ ಮಾಹಿತಿಯಂತೆ ಶಹಬಾಜ್ ಹಾಗೂ ಮಂಜುನಾಥ್ ಅವರನ್ನು ಸೆರೆ ಹಿಡಿಯಲಾಗಿದೆ’ ಎಂದರು.

‘ನಕಲಿ ನೋಂದಣಿ ಸಂಖ್ಯೆ ಫಲಕ ಅಳವಡಿಸಿದ್ದ ಕಾರು ಯಾರದ್ದು? ಅದನ್ನು ಎಲ್ಲಿಂದ ಕಳ್ಳತನ ಮಾಡಲಾಗಿತ್ತು ? ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಪ್ರಕರಣದಲ್ಲಿ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಅಧಿಕಾರಿ ಹೇಳಿದರು.

ಹೈ ಪಾಯಿಂಟ್ ಕಟ್ಟಡದಿಂದ ಬಿದ್ದು ವಿದ್ಯಾರ್ಥಿನಿ ಸಾವು

ಬೆಂಗಳೂರು: ಬಸವೇಶ್ವರ ವೃತ್ತ (ಚಾಲುಕ್ಯ) ಬಳಿಯ ಹೈ ಪಾಯಿಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದ ಮಹಡಿಯಿಂದ ಬಿದ್ದು ಪ್ರಕೃತಿ (18) ಎಂಬುವವರು ಮೃತಪಟ್ಟಿದ್ದಾರೆ.

‘ಸಂಜಯನಗರ ನಿವಾಸಿ ಪ್ರಕೃತಿ, ದ್ವಿತೀಯ ಪಿಯುಸಿ ವಿದ್ಯಾರ್ಥಿನಿ. ಪೋಷಕರ ಜೊತೆ ಜಗಳ ಮಾಡಿ ಭಾನುವಾರ ಮನೆಯಿಂದ ಹೊರಬಂದಿದ್ದ ಅವರು, ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ಹೈಗ್ರೌಂಡ್ಸ್ ಠಾಣೆ ಪೊಲೀಸರು ಹೇಳಿದರು.

‘ಕಾಲೇಜಿಗೆ ಹೋಗಿ ಬರುವ ಸಂದರ್ಭದಲ್ಲಿ ಹೈ ಪಾಯಿಂಟ್ ಅಪಾರ್ಟ್‌ಮೆಂಟ್ ಸಮುಚ್ಚಯವನ್ನು ಯುವತಿ ಗಮನಿಸುತ್ತಿದ್ದರು. ಸಂಜಯನಗರದ ಮನೆಯಿಂದ ನಡೆದುಕೊಂಡು ಬಂದಿದ್ದ ಯುವತಿ, ಭದ್ರತಾ ಸಿಬ್ಬಂದಿ ಕಣ್ತಪ್ಪಿಸಿ ಕಟ್ಟಡದೊಳಗೆ ಹೋಗಿದ್ದರು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.’

‘ಕೆಲ ನಿಮಿಷಗಳ ನಂತರ ಯುವತಿ ಮಹಡಿಯಿಂದ ಜಿಗಿದಿದ್ದರು. ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ ಕಾರೊಂದರ ಮೇಲೆ ಬಿದ್ದಿದ್ದರು. ತೀವ್ರ ಗಾಯಗೊಂಡು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಯುವತಿ ಬಳಿಯ ಮೊಬೈಲ್ ಒಡೆದಿದೆ. ಜೇಬಿನಲ್ಲಿ ₹ 300 ಇತ್ತು. ಮಾನಸಿಕವಾಗಿ ನೊಂದಿದ್ದ ಯುವತಿ, ಕೆಲ ತಿಂಗಳಿನಿಂದ ಮನೆಯಲ್ಲಿ ಪೋಷಕರ ಜೊತೆ ಜಗಳ ಮಾಡುತ್ತಿದ್ದರೆಂದು ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

ಕಾರು– ಬೈಕ್ ಅಪಘಾತ: ಸವಾರ ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ವಿಕ್ರಮ್ (27) ಎಂಬುವವರು ಮೃತಪಟ್ಟಿದ್ದಾರೆ.

‘ವಿದ್ಯಾರಣ್ಯಪುರ ನಿವಾಸಿ ವಿಕ್ರಮ್, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ವಿದ್ಯಾರಣ್ಯಪುರದಿಂದ ವೀರಸಾಗರ ಕಡೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣವಾದ ಆರೋಪದಡಿ ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಚಾಲಕ ತನ್ನ ಕಾರನ್ನು ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿದ್ದರು. ಇದರಿಂದಾಗಿ ಬೈಕ್‌ಗೆ ಕಾರು ಡಿಕ್ಕಿ ಹೊಡೆದಿತ್ತು. ಸವಾರ ವಿಕ್ರಮ್, ಬೈಕ್ ಸಮೇತ ರಸ್ತೆಯಲ್ಲಿ ಬಿದ್ದು ತೀವ್ರ ಗಾಯಗೊಂಡಿದ್ದರು. ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿವೆ.

ಕಾರ್ಮಿಕ ಸಚಿವರ ಸಕ್ಕರೆ ಕಾರ್ಖಾನೆ ಯಂತ್ರಕ್ಕೆ ಸಿಲುಕಿ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಅವರ ಪುತ್ರ ವಿವೇಕ ಹೆಬ್ಬಾರ್ ಅವರ ಮಾಲೀಕತ್ವದ ವಿಐಪಿಎನ್ ಡಿಸ್ಟಿಲರೀಸ್ ಕಾರ್ಖಾನೆ (ವಿಐಎನ್‌ಪಿ)ಯಲ್ಲಿ ಕೆಲಸ ಮಾಡುವ ಕಾರ್ಮಿಕ, ತಾಲ್ಲೂಕಿನ ದುಂಢಸಿ ಗ್ರಾಮದ ನವೀನ ಬಸಪ್ಪ ಚಲವಾದಿ(19) ಕಬ್ಬು ತುಂಬುವ ಯಂತ್ರದ ಬೆಲ್ಟ್‌ಗೆ ಸಿಲುಕಿ ಮೃತಪಟ್ಟಿದ್ದಾರೆ.

ಶನಿವಾರ ಸಂಜೆ ಈ ದುರ್ಘಟನೆ ನಡೆದಿದ್ದು ಕಾರ್ಖಾನೆ ಮಾಲೀಕ ವಿವೇಕ ಹೆಬ್ಬಾರ್, ಪ್ರಧಾನ ವ್ಯವಸ್ಥಾಪಕ ಮಂಜುನಾಥ, ಕಾರ್ಮಿಕರ ಪೂರೈಕೆದಾರರಾದ ಬಸವರಾಜ, ಉಮೇಶ ಸುರವೇ, ವಿಶ್ವನಾಥ ಎ.ಎಸ್, ಆಕಾಶ ಧರ್ಮೋಜಿ ಸೇರಿದಂತೆ ಒಟ್ಟು ಆರು ಜನರ ಮೇಲೆ ಬಂಕಾಪುರ ಪೊಲೀಸ್ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

‘ಕೋಣನಕೇರಿಯ ವಿಐಪಿಎನ್ ಡಿಸ್ಟಿಲರೀಸ್ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುವ ಕೆಲಸಗಾರರಿಗೆ ಯಾವುದೇ ಸುರಕ್ಷತಾ ಕ್ರಮವಿಲ್ಲದೇ ದೊಡ್ಡ, ದೊಡ್ಡ ಯಂತ್ರಗಳ ಬೆಲ್ಟ್ ಹತ್ತಿರ ಯಾವುದೇ ಕೌಶಲ ರಹಿತ ಕಾರ್ಮಿಕನಿಂದ ಬುಟ್ಟಿಯಿಂದ ಕಬ್ಬಿನ ಪುಡಿಯನ್ನು ತುಂಬಿ ಹಾಕಿಸಲಾಗುತ್ತಿತ್ತು. ಸ್ಥಳದಲ್ಲಿ ಯಾವುದೇ ಜಾಲರಿ, ಸುರಕ್ಷಾ ಕ್ರಮಗಳಿಲ್ಲದ ಕಾರಣ ಈ ದುರ್ಘಟನೆ ನಡೆದಿದೆ’ ಎಂದು ಮೃತನ ಸಂಬಂಧಿಗಳು ದೂರಿದ್ದಾರೆ.

15 ಕೆ.ಜಿ. ತಿಮಿಂಗಿಲ ವಾಂತಿ ಸಾಗಣೆ

ಕೇರಳದಿಂದ ಬೆಂಗಳೂರಿನತ್ತ ಸಾಗಿಸುತ್ತಿದ್ದ ನಾಲ್ವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಕೋಟ್ಯಂತರ ರೂಪಾಯಿ ಬೆಲೆಬಾಳುವ 15 ಕೆ.ಜಿ. ತಿಮಿಂಗಿಲ ವಾಂತಿಯನ್ನು ಕೇರಳದಿಂದ ಬೆಂಗಳೂರಿನತ್ತ ಅಕ್ರಮವಾಗಿ ಸಾಗಿಸುತ್ತಿದ್ದ ಆರೋಪದ ಮೇಲೆ ನಾಲ್ವರನ್ನು ನಗರದ ಅರಣ್ಯ ಸಂಚಾರಿ ದಳದ ಪೊಲೀಸರು ಶನಿವಾರ ರಾತ್ರಿ ಬಂಧಿಸಿದ್ದಾರೆ.

ಇಲ್ಲಿನ ಹೈಟೆಕ್ ಬಸ್ ನಿಲ್ದಾಣದ ಸಮೀಪ ಕಾರ್ಯಾಚರಣೆ ನಡೆಸಿದ ಪೊಲೀಸರು, 15 ಕೆ.ಜಿ. ತಿಮಿಂಗಿಲದ ವಾಂತಿಯನ್ನು ವಶಪಡಿಸಿಕೊಂಡಿದ್ದಾರೆ.

ಕೇರಳದ ಕೋಯಿಕ್ಕೋಡ್ ಜಿಲ್ಲೆಯ ನಾದಪುರಂನ ಸಂಶುದ್ದೀನ್ ಒತಿಯೋತ್ (48), ಕೊಟ್ಟಾಯಂ ಜಿಲ್ಲೆಯ ಚಂಗಸೇರಿಯ ತ್ರೆಸೀಮಾ (55), ತ್ರಿಶ್ಯೂರ್ ಜಿಲ್ಲೆಯ ಕಿಲುಪ್ಪಲ್ಲಿಕ್ಕರದ ಸಜಿ ಸುಬಾಸ್ (41) ಹಾಗೂ ತುಮಕೂರು ಜಿಲ್ಲೆ ತಿಪಟೂರಿನ ವಿರೂಪಾಕ್ಷ (62) ಬಂಧಿತ ಆರೋಪಿಗಳು.

ಬೆಂಗಳೂರಿನ ಕಾಳಸಂತೆಯಲ್ಲಿ ಮಾರಲು ಕಾರ್‌ನಲ್ಲಿ ಸಾಗಿಸುತ್ತಿದ್ದರು. ಅರಣ್ಯ ಸಂಚಾರಿ ದಳದ ಪಿಎಸ್‌ಐ ವಿಜಯರಾಜು ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿದೆ. ಬಂಧಿತರಿಂದ ಒಂದು ಕಾರು, 4 ಮೊಬೈಲ್ ಫೋನ್ ವಶಕ್ಕೆ ಪಡೆದಿದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಸಿಬ್ಬಂದಿ ಬಸವರಾಜು, ಸ್ವಾಮಿ, ರಾಮಚಂದ್ರ, ಶಂಕರ, ಟಕೀ ಉಲ್ಲಾ, ಪ್ರಭಾಕರ, ಬಸವರಾಜು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.


ಅರಣ್ಯ ಸಂಚಾರ ದಳದ ಪೊಲೀಸರು ಕೊಳ್ಳೇಗಾಲದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿ 15 ಕೆಜಿ ತಿಮಿಂಗಿಲ ವಾಂತಿ, ಕಾರು, ನಾಲ್ಕು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ

ಅಪರಾಧ ಸುದ್ದಿ


ಆರೋಪಿಗಳಿಂದ ವಶಕ್ಕೆ ಪಡೆದ ತಿಮಿಂಗಿಲದ ವಾಂತಿ

ನಾಲ್ವರ ಹತ್ಯೆ: ಆರೋಪಿ ವಶಕ್ಕೆ

ಭಟ್ಕಳ: ತಾಲ್ಲೂಕಿನ ಹಾಡುವಳ್ಳಿಯಲ್ಲಿ ಶುಕ್ರವಾರ ನಾಲ್ವರ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಹಲ್ಯಾಣಿ ನಿವಾಸಿ ವಿನಯ ಶ್ರೀಧರ ಭಟ್ ಎಂಬಾತನನ್ನು ಭಾನುವಾರ ಶಿವಮೊಗ್ಗ ಆಸುಪಾಸಿನಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ವಿನಯ್ ಭಟ್

ಈತ ಬಳಸಿದ್ದ ದ್ವಿಚಕ್ರ ವಾಹನ ಶನಿವಾರ ಸಾಗರ ತಾಲ್ಲೂಕಿನ ಕಾರ್ಗಲ್ ಬಳಿ ಪತ್ತೆಯಾಗಿತ್ತು. ಭಟ್ಕಳ ಡಿಎಸ್ಪಿ ನೇತೃತ್ವದ ಮೂರು ವಿಶೇಷ ತಂಡಗಳಿಂದ ಚಿತ್ರದುರ್ಗ, ಕೇರಳ, ಮಹಾ ರಾಷ್ಟ್ರ, ಜೋಗ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳಲ್ಲೂ ಹುಡುಕಾಟ ನಡೆದಿತ್ತು’ ಎನ್ನಲಾಗಿದೆ.

ಟ್ರ್ಯಾಕ್ಟರ್-ಬೈಕ್ ಅಪಘಾತ: ನಾಲ್ವರ ಸಾವು

ನುಗ್ಗೇಹಳ್ಳಿ (ಹಾಸನ): ಇಲ್ಲಿನ ತಿಪಟೂರು ಮುಖ್ಯ ರಸ್ತೆಯ ನವಿಲೇ ಗೇಟ್ ಬಳಿ ಶನಿವಾರ ರಾತ್ರಿ ಸಂಭವಿಸಿದ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರವಾಹನ ನಡುವಿನ ಅಪಘಾತದಲ್ಲಿ ಇಬ್ಬರು ಮಕ್ಕಳು ಸೇರಿ ನಾಲ್ವರು ಮೃತಪಟ್ಟರು.

ತಿಪಟೂರು ತಾಲ್ಲೂಕಿನ ಎಡಗರಹಳ್ಳಿ ಗ್ರಾಮದ ಯೋಗೇಶ್ ಆಚಾರಿ (35), ಅವರ ಪತ್ನಿ ಲಕ್ಷ್ಮಿ(27) ಹಾಗೂ ಯೋಗೇಶ್ ಆಚಾರಿ ತಂಗಿಯ ಮಕ್ಕಳಾದ ಗಾನವಿ(11), ತೇಜು(6) ಮೃತರು.

ಯೋಗೇಶ್ ಶನಿವಾರ ಹುಟ್ಟೂರಿನಿಂದ ನವಲೇ ಗೇಟ್‌ಗೆ ಬರುವಾಗ ಅಪಘಾತ ಸಂಭವಿಸಿದೆ. ಡೀಸೆಲ್ ಖಾಲಿಯಾಗಿದ್ದ ಟ್ರ್ಯಾಕ್ಟರ್ ಅನ್ನು ಚಾಲಕ ನಡು ರಸ್ತೆಯಲ್ಲೇ ಬಿಟ್ಟು ಹೋಗಿದ್ದು, ದ್ವಿಚಕ್ರವಾಹನ ಡಿಕ್ಕಿ ಹೊಡೆದಿದೆ. ರಸ್ತೆಗೆ ಬಿದ್ದ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಗೊಟ್ಟಿಗೆರೆ: ಕಳಪೆ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊಟ್ಟಿಗೆರೆಯಲ್ಲಿ ಕೆಲವು ದಿನಗಳ ಹಿಂದಷ್ಟೇ ಡಾಂಬರು ಮಾಡಿದ್ದ ರಸ್ತೆಗಳು ಕಿತ್ತುಬರುತ್ತಿದ್ದು, ಗುಣಮಟ್ಟದ ಡಾಂಬರು ಬಳಸದಿರುವುದೇ ಇದಕ್ಕೆ ಕಾರಣ ಎಂದು ನಾಗರಿಕರು ದೂರಿದ್ದಾರೆ.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗೊಟ್ಟಿಗೆರೆ ವಾರ್ಡ್‌ನ ರಜತಾದ್ರಿ ಬಡಾವಣೆ, ಗಾಯತ್ರಿ ತಪೋವನ ಬಡಾವಣೆ, ವೆಂಕಟೇಶ್ವರ ಬಡಾವಣೆ, ಪವಮಾನ ಬಡಾವಣೆ ಸೇರಿದಂತೆ ಈ ಭಾಗದ ಪ್ರದೇಶಗಳಲ್ಲಿ ಡಾಂಬರೀಕರಣವನ್ನು ಒಂದು ವಾರದಿಂದೀಚೆಗೆ ಮಾಡಲಾಗುತ್ತಿದೆ. ಆದರೆ, ಡಾಂಬರು ಹಪ್ಪಳದಂತೆ ಎದ್ದು ಬರುತ್ತಿದ್ದು, ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ.

‘ಚುನಾವಣೆ ಹತ್ತಿರವಾಗುತ್ತಿರುವಂತೆ ಡಾಂಬರು ಹಾಕುವ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ. ಆದರೆ, ಮತದಾನಕ್ಕೆ ಮುನ್ನವೇ ಈ ಡಾಂಬರು ಕಿತ್ತು ಬರುತ್ತಿದೆ. ಇಂತಹ ಕಾಮಗಾರಿ ಏಕೆ ಮಾಡಬೇಕು’ ಎಂದಿದ್ದಾರೆ.


ಗೊಟ್ಟಿಗೆರೆ ವಾರ್ಡ್‌ನ ಗಾಯತ್ರಿ ತಪೋವನದ ರಸ್ತೆ ಡಾಂಬರೀಕರಣಗೊಂಡ ಮೂರೇ ದಿನಕ್ಕೆ ಕಿತ್ತು ಬಂದಿರುವುದು

‘10 ಎಂಎಂ ಜೆಲ್ಲಿ ಬಳಸಿ ಡಾಂಬರ್ ಹಾಕಬೇಕು. ಕನಿಷ್ಠ 120ರಿಂದ 140 ಡಿಗ್ರಿ ಬಿಸಿಯಲ್ಲಿ ಡಾಂಬರ್ ಇರಬೇಕು. ಡಾಂಬರ್ ಹಾಕುವ ಮೊದಲು ರಸ್ತೆಯನ್ನು ಸ್ವಚ್ಛಗೊಳಿಸಬೇಕು. ಆದರೆ, ಸ್ಟೋನ್ ಡಸ್ಟ್ ಬಳಸಿ ಡಾಂಬರ್ ಹಾಕಲಾಗಿದ್ದು, ಡಾಂಬರೀಕರಣಕ್ಕೆ ಪಾಲಿಸಬೇಕಾದ ನಿಯಮಗಳನ್ನೇ ಗಾಳಿಗೆ ತೂರಿರುವುದು ಸ್ಪಷ್ಟವಾಗಿ ತೋರುತ್ತದೆ. ಸರಿಯಾದ ಪ್ರಮಾಣದಲ್ಲಿ ಡಾಂಬರ್ ಮಿಕ್ಸ್ ಮಾಡದೆ ಕಾಮಗಾರಿ ಮಾಡಲಾಗಿದ್ದು, ದಪ್ಪ ಮಾಡದೇ ಕೇವಲ ಅರ್ಧ ಇಂಚು ಹಾಕಿರುವುದರಿಂದ ರಸ್ತೆ ಕಳಪೆಯಾಗಿ ಕಿತ್ತು ಬರುತ್ತಿದೆ’ ಎಂದು ಸ್ಥಳೀಯ ನಿವಾಸಿ ಕೃಷ್ಣಪ್ಪ ದೂರಿದ್ದಾರೆ.

‘ಅವೈಜ್ಞಾನಿಕವಾಗಿ ಡಾಂಬರೀಕರಣ, ಕಾಟಾಚಾರದ ಕೆಲಸ ಮಾಡಿ ಸರ್ಕಾರದ ಅನುದಾನ ದುರುಪಯೋಗಪಡಿಸಿಕೊಂಡಿರುವ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ಎಂಜಿನಿಯರ್ ಹಾಗೂ ಅಧಿಕಾರಿಗಳ ಮೇಲೆ ತನಿಖೆ ನಡೆಸಬೇಕು’ ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಡಿಆರ್‌ಡಿಒ ನಿವೃತ್ತ ಮಹಾನಿರ್ದೇಶಕ ವಾಸುದೇವ್ ಕೆ. ಅತ್ರೆ ಅಭಿಮತ

‘ತಂತ್ರಜ್ಞಾನದೊಂದಿಗೆ ಮಾನವೀಯತೆ ಬೆರೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘21ನೇ ಶತಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿದೆ. ಈ ತಂತ್ರಜ್ಞಾನದ ದಾಸ್ಯಕ್ಕೆ ಒಳಗಾಗಿ, ಮಾನವೀಯ ಅಂಶಗಳನ್ನು ಮರೆಯಬಾರದು’ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ನಿವೃತ್ತ ಮಹಾನಿರ್ದೇಶಕ ವಾಸುದೇವ್ ಕೆ. ಅತ್ರೆ ತಿಳಿಸಿದರು.

ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಧರ್ಮಸಂಸ್ಥೆಯ ಸಂಸ್ಥಾಪನಾ ದಿನಾಚರಣೆ ಹಾಗೂ ಹಳೆ ವಿದ್ಯಾರ್ಥಿಗಳ ಸಮಾವೇಶದಲ್ಲಿ ಅವರು ಮಾತನಾಡಿದರು.

‘ತಂತ್ರಜ್ಞಾನ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ನಡೆದ ಆವಿಷ್ಕಾರಗಳಿಂದ ಜಗತ್ತು ಕೆಲವೇ ವರ್ಷಗಳಲ್ಲಿ ನಿರೀಕ್ಷೆಗೂ ಮೀರಿ ಬದಲಾವಣೆಯಾಗಿದೆ. ಲೇಸರ್ ಕಿರಣಗಳನ್ನು ಬಳಸಿ ಶಸ್ತ್ರಚಿಕಿತ್ಸೆ ನಡೆಸಬಹುದಾಗಿದೆ. ಒಂದು ಹನಿ ರಕ್ತದಿಂದ ಕಾಯಿಲೆಯನ್ನು ನಿರ್ಧರಿಸಲು ಸಾಧ್ಯವಾಗುತ್ತಿದೆ. ಮನೆಗಳಲ್ಲಿನ ದೀಪದ ಸ್ವಿಚ್, ನಲ್ಲಿ ಎಲ್ಲವನ್ನೂ ತಂತ್ರಜ್ಞಾನ ಆವರಿಸಿಕೊಳ್ಳುತ್ತಿದೆ. ಈ ವೇಳೆ ಎಲ್ಲಿ, ಎಷ್ಟರ ಮಟ್ಟಿಗೆ ತಂತ್ರಜ್ಞಾನವನ್ನು ಬಳಸಬೇಕು ಎಂಬ ಅರಿವು ಮುಖ್ಯ’ ಎಂದು ಹೇಳಿದರು.

‘ತಂತ್ರಜ್ಞಾನದಿಂದ ಜೀವನ ಸುಲಭವಾಗಿದೆ. ಗೂಗಲ್ ಮೂಲಕ ಜಗತ್ತಿನ ಜ್ಞಾನ ದೊರೆಯುತ್ತಿದೆ. ಕೃತಕ ಬುದ್ಧಿಮತ್ತೆ, 3ಡಿ ಪ್ರಿಟಿಂಗ್‌ನಂತಹ ತಂತ್ರಜ್ಞಾನವು ವೈದ್ಯಕೀಯ, ಸಾರಿಗೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿ ಮಾಡಿವೆ. ಚಾಲಕ ರಹಿತ ವಾಹನದಂತಹ ಆವಿಷ್ಕಾರಗಳು ವಿದೇಶಗಳಲ್ಲಿ ಕಾರ್ಯಗತಗೊಂಡಿವೆ. ಆದರೆ, ತಂತ್ರಜ್ಞಾನದ ಆವಿಷ್ಕಾರಗಳು ಪರಿಸರ ಸಂರಕ್ಷಣೆಗೆ ಪೂರಕವಾಗಿರಬೇಕು’ ಎಂದು ತಿಳಿಸಿದರು.

ವಸತಿ ಸಚಿವ ವಿ.ಸೋಮಣ್ಣ, ‘ಸಂಸ್ಕಾರ ಹಾಗೂ ಸಂಸ್ಕೃತಿಗೆ ಇನ್ನೊಂದು ಹೆಸರೇ ವೀರಶೈವ. ಸಮಾಜದಲ್ಲಿನ ಅಂಕುಡೊಂಕುಗಳನ್ನು ಸರಿಪಡಿಸುವ ದೂರದೃಷ್ಟಿಯನ್ನು ಈ ಸಮುದಾಯ ಹೊಂದಿದೆ. ಹಿಂದಿನಿಂದಲೂ ಈ ಸಮುದಾಯ ಅನ್ನ, ಅಕ್ಷರ ದಾನಕ್ಕೆ ಹೆಸರುವಾಸಿಯಾಗಿದೆ. ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಅವರು ನಿರ್ಮಿಸಿದ ಕಟ್ಟಡ ಅನ್ನ-ಆಶ್ರಯ ನೀಡುತ್ತಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಕಾರ್ಯಕ್ರಮದಲ್ಲಿ ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಯ ಅಧ್ಯಕ್ಷ ಎಲ್. ರೇವಣ್ಣಸಿದ್ಧಯ್ಯ, ಧರ್ಮದರ್ಶಿ ಕೆ. ಸಿದ್ದಪ್ಪ, ವಾಸುದೇವ್ ಕೆ. ಅತ್ರೆ, ತುಮಕೂರಿನ ಹಿರೇಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಹಾಗೂ ವಿ.ಸೋಮಣ್ಣ ಅವರು ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. –ಪ್ರಜಾವಾಣಿ ಚಿತ್ರ

16,821 ಫಲಾನುಭವಿಗಳ ಆಯ್ಕೆ: ಹೇಮಾವತಿ ಹೆಗ್ಗಡೆ

ಧರ್ಮಸ್ಥಳದ ವತಿಯಿಂದ ಅಸಹಾಯಕರಿಗೆ ಕಾಯಕಲ್ಪ ನೀಡುವ ‘ವಾತ್ಸಲ್ಯ’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಉಜಿರೆ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಮಹಿಳಾ ಸಬಲೀಕರಣದೊಂದಿಗೆ ಅಸಹಾಯಕರಿಗೆ ಮನೆ ನಿರ್ಮಾಣ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಲು ‘ವಾತ್ಸಲ್ಯ’ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಧರ್ಮಸ್ಥಳದ ಹೇಮಾವತಿ ವಿ. ಹೆಗ್ಗಡೆ ಹೇಳಿದರು.


ಬೆಳ್ತಂಗಡಿ ತಾಲ್ಲೂಕಿನ ನೆರಿಯಾ ಗ್ರಾಮದಲ್ಲಿ ನೆಕ್ಕರೆ ನಿವಾಸಿ ಶಿವಣ್ಣ ಕುಟುಂಬಕ್ಕೆ ಶನಿವಾರ ‘ವಾತ್ಸಲ್ಯ’ ಕಾರ್ಯಕ್ರಮದಡಿ ಮನೆಯನ್ನು ಹಸ್ತಾಂತರಿಸಿ ಅವರು ಮಾತನಾಡಿದರು.

‘ವಾತ್ಸಲ್ಯ’ ಕಾರ್ಯಕ್ರಮದಡಿ 16,821 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಇದೇ ತಿಂಗಳು 4,189 ಕುಟುಂಬಗಳಿಗೆ ವಾತ್ಸಲ್ಯ ಕಿಟ್‌ಗಳನ್ನು ವಿತರಿಸಲಾಗುವುದು’ ಎಂದು ಪ್ರಕಟಿಸಿದರು.

‘₹2 ಕೋಟಿ ಅನುದಾನದಲ್ಲಿ 245 ಮನೆಗಳ ನಿರ್ಮಾಣ, ದುರಸ್ತಿ ಮತ್ತು ಕಾಮಗಾರಿ, 214 ಶೌಚಾಲಯ ಮತ್ತು ಸ್ನಾನಗೃಹಗಳ ನಿರ್ಮಾಣ, ಸೋಲಾರ್ ಮತ್ತು ವಿದ್ಯುತ್ ಅಳವಡಿಕೆ, ಔಷಧ ಪೂರೈಕೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ವಾತ್ಸಲ್ಯ ಫಲಾನುಭವಿಗಳ ಆರೋಗ್ಯ ರಕ್ಷಣೆಗಾಗಿ ‘ವಾತ್ಸಲ್ಯ ಮಿಕ್ಸ್’ ಎಂಬ ಪೌಷ್ಟಿಕ ಆಹಾರವನ್ನು 1,327 ಫಲಾನುಭವಿಗಳಿಗೆ ವಿತರಿಸಲು ಉದ್ದೇಶಿಸಲಾಗಿದೆ ಎಂದು ಅವರು ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್, ಜನಜಾಗೃತಿ ವೇದಿಕೆಯ ಪ್ರಾದೇಶಿಕ ನಿರ್ದೇಶಕ ವಿವೇಕ್ ಪಾಯಸ್, ಪ್ರಾದೇಶಿಕ ನಿರ್ದೇಶಕ ವಸಂತ ಸಾಲ್ಯಾನ್, ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಉಪಸ್ಥಿತರಿದರು.



ಬೆಳ್ತಂಗಡಿ ತಾಲ್ಲೂಕಿನ ನೆರಿಯಾ ಗ್ರಾಮದಲ್ಲಿ ನೆಕ್ಕರೆ ನಿವಾಸಿ ಶಿವಣ್ಣ ಕುಟುಂಬಕ್ಕೆ ಧರ್ಮಸ್ಥಳದ ಹೇಮಾವತಿ ವಿ. ಹೆಗ್ಗಡೆ ‘ವಾತ್ಸಲ್ಯ’ ಮನೆಯನ್ನು ಹಸ್ತಾಂತರಿಸಿದರು.

ಕೋಟ್ಯಂತರ ರೂಪಾಯಿ ಕಬಳಿಕೆ

ಕಾರ್ಕಳ: ಮೃತ ವ್ಯಕ್ತಿಯ ಹೆಸರಿನಲ್ಲಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಸ್ಥಿರಾಸ್ತಿ, ಶೇರು ಮತ್ತು ಹಣವನ್ನು ಅಕ್ರಮವಾಗಿ ಆರೋಪಿಗಳಿಬ್ಬರು ತಮ್ಮ ಹೆಸರಿಗೆ ವರ್ಗಾಯಿಸಿರುವ ಬಗ್ಗೆ ಕಾರ್ಕಳ ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

ಇಲ್ಲಿನ ನಿವಾಸಿ ಅಶೋಕ್ ರಾವ್ ಜೀವತಾವಧಿಯ ಕೊನೆಯ ತನಕ ಒಂಟಿಯಾಗಿದ್ದು, 2020ರ ಜು. 13ರಂದು ಮೃತಪಟ್ಟಿದ್ದರು. ಅವರ ಹೆಸರಿನಲ್ಲಿ ಕಾರ್ಕಳದ ವಿವಿಧೆಡೆ ಕೋಟ್ಯಂತರ ರೂಪಾಯಿ ಮೌಲ್ಯ ಸ್ಥಿರಾಸ್ತಿ ಗಳಲ್ಲದೆ, ಬ್ಯಾಂಕ್ ಖಾತೆ ಹಾಗೂ ವಿವಿಧ ಶೇರುಗಳಿದ್ದವು. ಮರಣಕ್ಕೂ ಮುನ್ನ ರಾವ್ ಮೃತ್ಯು ಪತ್ರವನ್ನು ಬರೆದಿಟ್ಟಿರಲಿಲ್ಲ.

ತಿದ್ದುಪಡಿ

ಫೆ.26ರ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಅಂಬೇಡ್ಕರ್ ತಾಂತ್ರಿಕ ಕಾಲೇಜು ಪದವಿ ಪ್ರದಾನ’ ಕಾರ್ಯಕ್ರಮದ ವರದಿಯಲ್ಲಿ ರ್‍ಯಾಂಕ್ ವಿಜೇತರ ಸಾಲಿನಲ್ಲಿ ಕೆ.ಎಸ್. ನವ್ಯಶ್ರೀ (ಸ್ನಾತಕೋತ್ತರ ವಿಭಾಗ) ಹೆಸರಿನ ಬದಲಿಗೆ ಕೆ.ಎಸ್. ಕಾವ್ಯಶ್ರೀ ಎಂದಾಗಿತ್ತು.

ಮುಂದಿನ ವಾರ ಹಾಸನಕ್ಕೆ ಬರಲಿರುವ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ

‘ದೊಡ್ಡಗೌಡ’ರಿಂದಲೇ ಟಿಕೆಟ್ ಘೋಷಣೆ

ಪ್ರಜಾವಾಣಿ ವಾರ್ತೆ

ಹಾಸನ: ಎಚ್‌.ಡಿ.ರೇವಣ್ಣ ಕುಟುಂಬದ ಪಟ್ಟು ಹಾಗೂ ಎಚ್‌.ಡಿ.ಕುಮಾರಸ್ವಾಮಿ ಅವರ ಹಟದಿಂದಾಗಿ ಕಗ್ಗಂಟಾಗಿರುವ ಹಾಸನ ಕ್ಷೇತ್ರದ ಜೆಡಿಎಸ್ ಟಿಕೆಟ್ ಘೋಷಣೆಗೆ ಎಚ್‌.ಡಿ.ದೇವೇಗೌಡ ಹಾಸನಕ್ಕೆ ಬರಲಿದ್ದಾರೆ. ಅವರೇ ಅಂತಿಮವಾಗಿ ಅಭ್ಯರ್ಥಿಯ ಆಯ್ಕೆ ಮಾಡಲಿದ್ದಾರೆ.

ಜೆಡಿಎಸ್ ಟಿಕೆಟ್ ಸಂಬಂಧಿಸಿದಂತೆ ಎಚ್‌.ಪಿ.ಸ್ವರೂಪ್ ಮತ್ತು ಭವಾನಿ ರೇವಣ್ಣ ಅವರ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಸ್ವರೂಪ್ ಅವರ ತಂದೆ, ಮಾಜಿ ಶಾಸಕ ದಿವಂಗತ ಎಚ್‌.ಎಸ್‌.ಪ್ರಕಾಶ್ ಅವರಿಗೆ ನೀಡಿದ್ದ ಮಾತು ಉಳಿಸಿಕೊಳ್ಳಲು ಎಚ್‌.ಡಿ. ಕುಮಾರಸ್ವಾಮಿ ಮುಂದಾಗಿದ್ದಾರೆ. ಆದರೆ, ಹಾಸನ ಶಾಸಕ ಪ್ರೀತಂ ಗೌಡ ತಮ್ಮ ಕುಟುಂಬಕ್ಕೆ ಹಾಕಿರುವ ಸವಾಲು ಎದುರಿಸಿಯೇ ಸಿದ್ಧ ಎಂದು ರೇವಣ್ಣ ಕುಟುಂಬ ಪಣ ತೊಟ್ಟಿದೆ.

ಹಾಸನ ಕ್ಷೇತ್ರದಲ್ಲಿ ಬಿಜೆಪಿ ಎದುರಿಸಲು ರೇವಣ್ಣ ಅಥವಾ ಭವಾನಿ ರೇವಣ್ಣ ಅವರೇ ಸ್ಪರ್ಧೆ ಮಾಡಬೇಕು ಎನ್ನುವ ಒತ್ತಾಯ ಕಾರ್ಯಕರ್ತರಿಂದಲೂ ಕೇಳಿ ಬರುತ್ತಿದೆ. ಅಲ್ಲದೇ ಭವಾನಿ ಅವರ ಕುರಿತು ಪ್ರೀತಂ ಗೌಡ ಆಡಿರುವ ಮಾತುಗಳು ಮಕ್ಕಳಾದ ಪ್ರಜ್ವಲ್ ಹಾಗೂ ಸೂರಜ್ ಅವರನ್ನು ಕೆರಳಿಸಿವೆ. ಹಾಗಾಗಿ ಹಾಸನದಿಂದ ಸ್ಪರ್ಧೆ ಮಾಡಿಯೇ ಸಿದ್ಧ ಎನ್ನುವ ನಿರ್ಧಾರ ಮಾಡಿದ್ದಾರೆ.

ರೇವಣ್ಣ ಕುಟುಂಬ ಹಾಗೂ ಕುಮಾರಸ್ವಾಮಿ ಅವರಿಗೆ ಹಾಸನ ಕ್ಷೇತ್ರದ ಟಿಕೆಟ್ ಪ್ರತಿಷ್ಠೆಯ ಪ್ರಶ್ನೆಯಾಗಿಯೂ ಮಾರ್ಪಟ್ಟಿದೆ. ಅಂತಿಮವಾಗಿ ಕ್ಷೇತ್ರದ ಮುಖಂಡರು, ಕಾರ್ಯಕರ್ತರನ್ನು ಕೇಳಿ ಅಭ್ಯರ್ಥಿ ಆಯ್ಕೆ ಮಾಡಲು ಮುಂದಾಗಿದ್ದ ಕುಮಾರಸ್ವಾಮಿ, ಬೆಂಗಳೂರಿನಲ್ಲಿ ಭಾನುವಾರ ಸಭೆಯನ್ನೂ ಕರೆದಿದ್ದರು. ತಮ್ಮನ್ನು ಹೊರಗಿಟ್ಟು ಸಭೆ ನಡೆಸಿದರೆ, ಜಿಲ್ಲೆಯ ಕಾರ್ಯಕರ್ತರಿಗೆ ತಪ್ಪು ಸಂದೇಶ ಹೋಗಲಿದೆ ಎನ್ನುವ ಕಾರಣಕ್ಕೆ ರೇವಣ್ಣ ವಿರೋಧ ವ್ಯಕ್ತಪಡಿಸಿದ್ದರು. ಅಂತಿಮವಾಗಿ ದೇವೇಗೌಡರೇ ಮಧ್ಯ ಪ್ರವೇಶಿಸಿ, ಬೆಂಗಳೂರಿನಲ್ಲಿ ಕರೆದಿದ್ದ ಸಭೆಯನ್ನು ರದ್ದುಪಡಿಸಿದ್ದಾರೆ.

ಇದರಿಂದ ಬೇಸತ್ತಿರುವ ಕುಮಾರಸ್ವಾಮಿ, ಈ ಬಗ್ಗೆ ದೇವೇಗೌಡರೇ ತೀರ್ಮಾನ ತೆಗೆದುಕೊಳ್ಳಲಿ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ. ಹಾಗಾಗಿ ದೇವೇಗೌಡರೇ ಹಾಸನ ಕ್ಷೇತ್ರದ ಟಿಕೆಟ್ ಘೋಷಣೆಯ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಮುಂದಿನ ವಾರ ಜಿಲ್ಲೆಗೆ ಬರಲಿದ್ದು, ಮುಖಂಡರು, ಕಾರ್ಯಕರ್ತರ ಜೊತೆಗೆ ಚರ್ಚಿಸಿ, ಅಂತಿಮ ನಿರ್ಣಯ ಕೈಗೊಳ್ಳಲಿದ್ದಾರೆ ಎನ್ನುವ ಮಾಹಿತಿ ಪಕ್ಷದ ಮೂಲಗಳಿಂದ ಲಭ್ಯವಾಗಿದೆ.

‘ನನ್ನ ಆರೋಗ್ಯ ಹಾಳಾದರೆ ನೀವು ಬರ್ತೀರಾ?’

ಹಾಸನ: ‘ನನ್ನ ಧ್ವನಿ ಇನ್ನೂ ಎರಡು ತಿಂಗಳು ಇರಬೇಕು. ನನ್ನ ಆರೋಗ್ಯ ಹಾಳಾದರೆ, ನೀವು ಬರ್ತೀರಾ. ನೀವಿಲ್ಲಿ ಸ್ವರೂಪ್‌ನನ್ನು ಗೆಲ್ಲಿಸಲು ಬಂದಿಲ್ಲ. ಅವನ ಮನೆ ಹಾಳು ಮಾಡಲು ಬಂದಿದ್ದೀರಾ?’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರಿಗೆ ತೆರಳುವ ಮಾರ್ಗ ಮಧ್ಯೆ ನಗರದ ರಿಂಗ್ ರಸ್ತೆಯಲ್ಲಿ ಸ್ವರೂಪ್ ಬೆಂಬಲಿಗರು ಕೂಗಾಟ ಆರಂಭಿಸಿದರು. ಇದರಿಂದ ಸಿಟ್ಟಿಗೆದ್ದ ಕುಮಾರಸ್ವಾಮಿ, ‘ನಾನು ಯಾವುದೇ ತಪ್ಪು ನಿರ್ಧಾರ ತೆಗೆದುಕೊಳ್ಳುವುದಿಲ್ಲ’ ಎಂದರು.

‘2-3 ದಿನ ಸಮಯ ಕೊಡಿ. ಸಕಾರಾತ್ಮಕವಾಗಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಕೆಲವೇ ದಿನಗಳಲ್ಲಿ ಜೆಡಿಎಸ್ 2ನೇ ಪಟ್ಟಿ ಬಿಡುಗಡೆ ಆಗಲಿದ್ದು, ಹಾಸನ ಅಭ್ಯರ್ಥಿ ಹೆಸರು ಕೂಡ ಇರುತ್ತದೆ’ ಎಂದು ಹೇಳಿದರು.

‘ನನಗೆ ರಾಜಕೀಯವಾಗಿ ಅಗ್ನಿಪರೀಕ್ಷೆ ಇದೆ. ಅರ್ಥ ಮಾಡಿಕೊಳ್ಳಿ. ಅನಾರೋಗ್ಯ ನಡುವೆಯೂ ನಿತ್ಯ 18 ಗಂಟೆ ಕೆಲಸ ಮಾಡುತ್ತಿದ್ದೇನೆ. ಈಗಾಗಲೇ ರಾಜ್ಯದ 20 ಜಿಲ್ಲೆಗಳಲ್ಲಿ ನಾನು ಪ್ರವಾಸ ಮಾಡಿದ್ದೇನೆ. ಸ್ವತಂತ್ರವಾಗಿ ಜೆಡಿಎಸ್ ಸರ್ಕಾರ ರಚಿಸಲು ಜನರು ನಿರ್ಧರಿಸಿದ್ದಾರೆ. ಹಾಸನ ಟಿಕೆಟ್ ವಿಚಾರವಾಗಿ ಪಕ್ಷ ಹಾಳು ಮಾಡಲು ತಯಾರಿದ್ದೀರಾ?’ ಎಂದು ಪ್ರಶ್ನಿಸಿದರು.

ಇದಕ್ಕೂ ಮುನ್ನ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಂದೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎಚ್‌.ಡಿ.ಕುಮಾರಸ್ವಾಮಿ, ‘ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್ ವಿಚಾರವಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌. ಡಿ. ದೇವೇಗೌಡ ಅವರು ಸಭೆ ನಡೆಸುವರು. ಆ ಕ್ಷೇತ್ರದ ಟಿಕೆಟ್ ವಿಚಾರವಾಗಿ ಅವರ ಜೊತೆ ಚರ್ಚಿಸಿಲ್ಲ’.

‘ದೇವೇಗೌಡ ಅವರ ಆರೋಗ್ಯ ನನಗೆ ಮುಖ್ಯ. ಹಾಸನದ ಟಿಕೆಟ್ ವಿಚಾರ ಚರ್ಚಿಸಿ ಅವರ ಆರೋಗ್ಯ ಹದಗೆಡುವಂತಾಗಬಾರದು ಎಂಬುದು ನನ್ನ ಕಾಳಜಿ. ಬೇರೆಯವರಿಗೆ ದೇವೇಗೌಡರ ಆರೋಗ್ಯಕ್ಕಿಂತ, ತಮ್ಮ ಭಾವನೆಗಳೇ ಮುಖ್ಯವಾದರೆ ನಾನೇನೂ ಮಾಡಲಾಗದು’ ಎಂದರು.

‘ಗೊಂದಲ ಸರಿಪಡಿಸಲು ಭಾನುವಾರ (ಫೆ.26) ಸಭೆ ನಡೆಸಲು ನಿರ್ಧರಿಸಿದ್ದೆ. ಕೊನೆ ಕ್ಷಣದಲ್ಲಿ ಸಭೆ ರದ್ದಾಗಿದೆ. ಇಂಥ ಪ್ರಕರಣಗಳನ್ನು ಜೆಡಿಎಸ್‌ಗೆ ಹಿನ್ನಡೆ ಉಂಟು ಮಾಡಲು ಬಿಜೆಪಿ ದುರ್ಬಳಕೆ ಮಾಡಿಕೊಳ್ಳಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಗೊಂದಲಗಳನ್ನು ನಿವಾರಣೆ ಮಾಡುವ ಶಕ್ತಿ ನಮಗೆ ಇದೆ’ ಎಂದರು.

‘ಹಿಂದೂ ಸಂಸ್ಕೃತಿ ತಿಳಿದುಕೊಳ್ಳಲಿ’

‘ಸಚಿವ ಪ್ರಲ್ಹಾದ ಜೋಶಿ ಅವರು ಹಿಂದೂ ಸಂಸ್ಕೃತಿಯಲ್ಲಿ ಏನಿದೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಎನ್‌.ಆರ್‌. ಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಮಾಯಾಣ’, ‘ಮಹಾಭಾರತ’ದಲ್ಲಿ ಕುಟುಂಬಗಳಲ್ಲಿ ಕಲಹ ನಡೆದಿದ್ದು ಏಕೆ? ದಶರಥನಿಂದ ಕೈಕೇಯಿ ವಚನ ಪಡೆದು ರಾಮನನ್ನು ಕಾಡಿಗೆ ಅಟ್ಟಲಿಲ್ಲವೇ? ಅದು ನಡೆದಿದ್ದು ಅಧಿಕಾರಕ್ಕಾಗಿ ಅಲ್ಲವೇ? ಸಂಸ್ಕೃತಿಯಲ್ಲಿ ನಡೆದುಕೊಂಡು ಬಂದಿರುವುದನ್ನು ಯಾರೂ ಸರಿಪಡಿಸಲಾಗದು’ ಎಂದರು.

‘ರಾಜ್ಯದಲ್ಲಿ ರಾಜಕೀಯ ಅತಂತ್ರ ಪರಿಸ್ಥಿತಿ ತಂದುಕೊಂಡಿರುವುದು ರಾಷ್ಟ್ರೀಯ ಪಕ್ಷಗಳೇ ವಿನಾ ನಾವಲ್ಲ. ಯಡಿಯೂರಪ್ಪ ಅವರನ್ನು ಬಿಜೆಪಿಯವರು ಅತಂತ್ರ ಪರಿಸ್ಥಿತಿಗೆ ತಂದಿದ್ದಾರೆ. ಈ ಬಾರಿ 120 ಸ್ಥಾನ ಗೆಲ್ಲುವ ಗುರಿಯನ್ನು ನಮ್ಮ ಪಕ್ಷ ಇಟ್ಟುಕೊಂಡಿದೆ’ ಎಂದರು.

ಮುಖ್ಯಾಂಶಗಳು

- ಪ್ರತಿಷ್ಠೆಯ ಪ್ರಶ್ನೆಯಾದ ಹಾಸನ ಕ್ಷೇತ್ರದ ಟಿಕೆಟ್
- ರೇವಣ್ಣ ಕುಟುಂಬದವರು ಸ್ಪರ್ಧಿಸಲು ಕಾರ್ಯಕರ್ತರ ಒತ್ತಡ
- ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಭೆ ರದ್ದು

‘ಮಠಾಧೀಶರು ರಾಜಕೀಯಕ್ಕೆ; ಅವರ ವೈಯಕ್ತಿಕ ವಿಚಾರ’

ಪ್ರಜಾವಾಣಿ ವಾರ್ತೆ


ಆರ್‌. ಅಶೋಕ

ಹುಬ್ಬಳ್ಳಿ: ‘ಮಠಾಧೀಶರು ರಾಜಕಾರಣಕ್ಕೆ ಬರುವುದು, ಬಿಡುವುದು ಅವರ ವೈಯಕ್ತಿಕ ವಿಚಾರ. ಆದರೆ, ರಾಜ್ಯದಲ್ಲಿ ಅಂತಹ ವಾತಾವರಣ ವಿಲ್ಲ. ಜನರು ಕೂಡ ಇದನ್ನು ಒಪ್ಪುವುದಿಲ್ಲ’ ಎಂದು ಸಚಿವ ಆರ್‌. ಅಶೋಕ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಮಠಾಧೀಶರು ರಾಜಕೀಯಕ್ಕೆ ಬರಲು ಇಲ್ಲಿನ ಪರಿಸ್ಥಿತಿ ಕೂಡ ಹೊಂದಾಣಿಕೆಯಾಗಬೇಕು. ದೇಶದಲ್ಲಿ ಯೋಗಿ ಆದಿತ್ಯನಾಥ, ಉಮಾ ಭಾರತಿ ಅಂಥವರನ್ನು ಬಿಟ್ಟರೆ ಈವರೆಗೆ ದೊಡ್ಡ ಮಠಾಧೀಶರು ಯಾರೂ ರಾಜಕೀಯಕ್ಕೆ ಬಂದಿಲ್ಲ. ಅವರಂತೆ ಧೈರ್ಯವಾಗಿ ರಾಜಕಾರಣದಲ್ಲಿ ನಿಲ್ಲಲು ಆಸಕ್ತಿಯಿರುವ ಮಠಾಧೀಶರು ರಾಜಕೀಯಕ್ಕೆ ಬರಲು ಪ್ರಯತ್ನಿಸಬಹುದು. ಆದರೆ, ಈವರೆಗೆ ಯಾವ ಮಠಾಧೀಶರು ನಮ್ಮನ್ನು ಸಂಪರ್ಕಿಸಿಲ್ಲ’ ಎಂದರು.

‘ಮಠಾಧೀಶರು ಎಲ್ಲರನ್ನೂ ಸಮಾನವಾಗಿ ಕಾಣಬೇಕು, ಅಷ್ಟೇ ಪ್ರೀತಿಯಿಂದ ನೋಡಬೇಕು. ಒಂದು ಜಾತಿಗೆ ಮಾತ್ರ ಸೀಮಿತ ಆಗಲು ಸಾಧ್ಯವಿಲ್ಲ. ರಾಜಕಾರಣಕ್ಕೆ ಬಂದ ನಂತರ ರಾಜಕೀಯ ಪಕ್ಷಗಳನ್ನು ಟೀಕಿಸಬೇಕಾಗುತ್ತದೆ. ಆಗ ಸಮಸ್ಯೆಗಳು ಉದ್ಭವಿಸುತ್ತವೆ. ಈ ಕಾರಣಗಳಿಂದ ಸೂಕ್ತವಾದ ವ್ಯಕ್ತಿ ರಾಜಕೀಯಕ್ಕೆ ಬರಬೇಕು’ ಎಂದರು.

> **ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಈವರೆಗೆ ಯಾವುದೇ ಮಠಾಧೀಶರು ನನ್ನನ್ನು ಸಂಪರ್ಕಿಸಿಲ್ಲ, ಚರ್ಚಿಸಿಯೂ ಇಲ್ಲ. ಆ ಬಗ್ಗೆ ಏನೂ ಹೇಳಲಾಗದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ಮಠಾಧೀಶರು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ ಎಂದು ಯಾರು, ಯಾವ ಅರ್ಥದಲ್ಲಿ ಹೇಳಿದ್ದಾರೆ ಗೊತ್ತಿಲ್ಲ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಸಿದ್ದರಾಮಯ್ಯ ಸ್ಥಿತಿ ಓಡು ಮಗಾ ಓಡು: (ಬಾಗಲಕೋಟೆ ವರದಿ): ‘ಸುಳ್ಳು ಹೇಳಿದ್ದರಿಂದಲೇ ಸಿದ್ದರಾಮಯ್ಯ ಅವರ ಸ್ಥಿತಿ ಓಡು ಮಗಾ ಓಡು ಎನ್ನುವಂತಾಗಿದೆ’ ಎಂದು ಕಂದಾಯ ಸಚಿವ ಆರ್‌.ಅಶೋಕ ಲೇವಡಿ ಮಾಡಿದರು.

‘ಬಿಜೆಪಿಗರು ಸುಳ್ಳಿಗರು’ ಎಂಬ ಸಿದ್ದರಾಮಯ್ಯ ಅವರ ಟೀಕೆಗೆ ತಿರುಗೇಟು ನೀಡಿ, ‘ಸುಳ್ಳು ಹೇಳುತ್ತಿರುವುದರಿಂದಲೇ ಅವರು ಕ್ಷೇತ್ರದಿಂದ ಕ್ಷೇತ್ರಕ್ಕೆ ಓಡುತ್ತಿದ್ದಾರೆ. ವರುಣಾದಿಂದ ಚಾಮುಂಡೇಶ್ವರಿಗೆ, ಅಲ್ಲಿಂದ ಬಾದಾಮಿಗೆ, ಈಗ ಕೋಲಾರಕ್ಕೆ ಹೋಗುತ್ತಿರುವುದು ಏಕೆ?’ ಎಂದರು.

ಎಐಸಿಸಿ ಮಹಾಧಿವೇಶನ ಸಂದರ್ಭದಲ್ಲಿ ಉಭಯ ನಾಯಕರ ಭೇಟಿ

ಸಿದ್ದರಾಮಯ್ಯ– ಖರ್ಗೆ ರಹಸ್ಯ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛತ್ತೀಸಗಢದ ರಾಯಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಮಹಾಧಿವೇಶನದ ವೇಳೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸುಮಾರು 45 ನಿಮಿಷ ರಹಸ್ಯ ಮಾತುಕತೆ ನಡೆಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಇನ್ನೇನು ಕೆಲವೇ ದಿನಗಳಲ್ಲಿ ಹೊರಬೀಳಲಿದ್ದು, ಈ ಮಧ್ಯೆ ಇಬ್ಬರ ನಡುವಿನ ಚರ್ಚೆ ಟಿಕೆಟ್ ಆಕಾಂಕ್ಷಿಗಳ ಕುತೂಹಲ ಹೆಚ್ಚಿಸಿದೆ.

‘ಸಿದ್ದರಾಮಯ್ಯ ವಾಸ್ತವ್ಯವಿದ್ದ ಹೋಟೆಲ್ ಕೊಠಡಿಯ ಎದುರಿನ ಕೊಠಡಿಯಲ್ಲಿ ಖರ್ಗೆ ಕೂಡಾ ಇದ್ದಾರೆ. ಶನಿವಾರ ರಾತ್ರಿ ಖರ್ಗೆಯವರ ಕೊಠಡಿಗೆ ತೆರಳಿದ ಸಿದ್ದರಾಮಯ್ಯ ಅವರು ರಾಜ್ಯ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಿದ್ದಾರೆ. ರಾಜ್ಯದಲ್ಲಿನ ಸದ್ಯದ ರಾಜಕೀಯ ಸ್ಥಿತಿಗತಿ, ಚುನಾವಣೆಗೆ ಪಕ್ಷದ ಸಿದ್ಧತೆ ಕುರಿತು ಇಬ್ಬರು ನಾಯಕರು ಚರ್ಚೆ ನಡೆಸಿದ್ದಾರೆ’ ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

‘150 ಕ್ಷೇತ್ರಗಳಿಗೆ ರಾಜ್ಯ ಚುನಾವಣಾ ಸಮಿತಿ ಶಿಫಾರಸು ಮಾಡಿದ್ದ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಎಐಸಿಸಿ ರಚಿಸಿದ ಸ್ಕ್ರೀನಿಂಗ್ ಸಮಿತಿ ಈಗಾಗಲೇ ಪರಿಶೀಲಿಸಿದೆ. ಕೇಂದ್ರ ಚುನಾವಣಾ ಸಮಿತಿ ಇನ್ನೂ ರಚನೆ ಆಗಿಲ್ಲ. ಈ ಸಮಿತಿ ರಚನೆಯಾದ ಬಳಿಕ ಪಟ್ಟಿ ಅಂತಿಮಗೊಳ್ಳಲಿದೆ. ಶೀಘ್ರದಲ್ಲಿ ಸಮಿತಿ ರಚಿಸಿ, ಮೊದಲ ಪಟ್ಟಿ ಪ್ರಕಟಿಸುವ ಬಗ್ಗೆ ಖರ್ಗೆ ಸುಳಿವು ನೀಡಿದ್ದಾರೆ’ ಎಂದೂ ಮೂಲಗಳು ಹೇಳಿವೆ.

ಏಪ್ರಿಲ್ ಕೊನೆ ಅಥವಾ ಮೇ ತಿಂಗಳ ಮೊದಲ ವಾರದಲ್ಲಿ ಚುನಾವಣೆ ನಡೆಯಲಿದೆ. ಅಭ್ಯರ್ಥಿಗಳನ್ನು ಮೊದಲೇ ಘೋಷಿಸಿ, ಪ್ರಚಾರಕ್ಕೆ ಹೆಚ್ಚಿನ ಸಮಯ ನೀಡುವ ಬಗ್ಗೆ ಈಗಾಗಲೇ ಚರ್ಚೆ ನಡೆದಿದೆ. ಆದರೆ, ಕೆಲವು ಕ್ಷೇತ್ರಗಳಲ್ಲಿ ಆಕಾಂಕ್ಷಿಗಳು ಟಿಕೆಟ್ ಗಿಟ್ಟಿಸಿಕೊಳ್ಳಲು ಪೈಪೋಟಿಗಿಳಿದಿದ್ದು, ಈ ವಿಚಾರವೂ ವರಿಷ್ಠರ ಗಮನದಲ್ಲಿದೆ. ಟಿಕೆಟ್ ಘೋಷಣೆಯಾದ ಬೆನ್ನಲ್ಲೆ, ಯಾವುದೇ ಭಿನ್ನಮತಕ್ಕೆ ಅವಕಾಶ ಇಲ್ಲದೆ ಕ್ಷೇತ್ರದ ಇತರ ಆಕಾಂಕ್ಷಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಹೊಣೆಗಾರಿಕೆಯನ್ನೂ ಅಭ್ಯರ್ಥಿಗೆ ನೀಡುವ ಬಗ್ಗೆಯೂ ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ ಎಂದೂ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಭಿನ್ನಮತಕ್ಕೆ ಆಸ್ಪದ ಇಲ್ಲದೇ ಟಿಕೆಟ್ ಹಂಚಿಕೆ ಕುರಿತು ಚರ್ಚೆ
- ಮೊದಲ ಪಟ್ಟಿ ಶೀಘ್ರ ಬಿಡುಗಡೆ: ಖರ್ಗೆ ಸುಳಿವು

ಬಿಜೆಪಿಗೆ ಮರಳಿದ ಮಾಜಿ ಶಾಸಕ ತಿಪ್ಪೇಸ್ವಾಮಿ

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ ಜಿಲ್ಲೆ): ಮೊಳಕಾಲ್ಮುರು ಕ್ಷೇತ್ರದ ಮಾಜಿ ಶಾಸಕ ಎಸ್‌. ತಿಪ್ಪೇಸ್ವಾಮಿ ಸಚಿವ ಶ್ರೀರಾಮುಲು ನೇತೃತ್ವದಲ್ಲಿ ಭಾನುವಾರ ಕ್ಷೇತ್ರ ವ್ಯಾಪ್ತಿಯ ನಾಯಕನಹಟ್ಟಿಯಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿಗೆ ಮರಳಿದರು.

2013ರಲ್ಲಿ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಶಾಸಕರಾಗಿದ್ದ ತಿಪ್ಪೇಸ್ವಾಮಿ, ಬಳಿಕ ಬಿ. ಶ್ರೀರಾಮುಲು ಅವರೊಂದಿಗೇ ಬಿಜೆಪಿ ಸೇರಿದ್ದರು. 2018ರಲ್ಲಿ ಬಿ. ಶ್ರೀರಾಮುಲು ಮೊಳಕಾಲ್ಮುರು ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ ಪರಿಣಾಮ ಮುನಿಸಿಕೊಂಡು ಪಕ್ಷ ತೊರೆದು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

2019ರಲ್ಲಿ ನಡೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿದ್ದರು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದರು. ಟಿಕೆಟ್ ಕೋರಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದರು. ಟಿಕೆಟ್ ಖಚಿತವಾಗದ ಹಿನ್ನೆಲೆಯಲ್ಲಿ ಬಿಜೆಪಿ ನಾಯಕರು ಮನವೊಲಿಸುವ ಪ್ರಯತ್ನ ಮಾಡಿದ್ದರು. ಚಿತ್ರದುರ್ಗದಲ್ಲಿ ಶನಿವಾರ ರಾತ್ರಿ ನಡೆದ ಸಭೆಯಲ್ಲಿ ಬಿಜೆಪಿ ಸೇರಲು ಅಧಿಕೃತ ಒಪ್ಪಿಗೆ ನೀಡಿದ್ದರು.

ಮೊಳಕಾಲ್ಮುರು ಶಾಸಕರಾಗಿರುವ ಶ್ರೀರಾಮುಲು ಅವರು ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇರುವುದರಿಂದ ಮತ್ತೆ ಬಿಜೆಪಿ ಸೇರ್ಪಡೆ ಆಗಿರುವ ತಿಪ್ಪೇಸ್ವಾಮಿ ಅವರಿಗೇ ಪಕ್ಷದ ಟಿಕೆಟ್ ಸಿಗುವ ಸಾಧ್ಯತೆ ಇದೆ.



ನಾಯಕನಹಟ್ಟಿಯಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಮಾಜಿ ಶಾಸಕ ಎಸ್‌. ತಿಪ್ಪೇಸ್ವಾಮಿ ಅವರನ್ನು ಸಚಿವ ಬಿ. ಶ್ರೀರಾಮುಲು ಬಿಜೆಪಿಗೆ ಬರಮಾಡಿಕೊಂಡರು

ಕಾರ್ಯಕ್ರಮಕ್ಕೆ ₹ 5 ಕೋಟಿ ಅನುದಾನ • ಬೆಂಗಳೂರಿನಲ್ಲಿ ಸಮಾರೋಪ ಸಮಾರಂಭ

ತಳಸಮುದಾಯದ ಕಲಾ ತರಬೇತಿಗೂ ‘ಕಮಲ’ದ ನಂಟು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಮತ್ತು ತಳಸಮುದಾಯದ ಕಲಾ ಪ್ರಕಾರಗಳಲ್ಲಿ ಸಂಘ ಪರಿವಾರ ಮತ್ತು ಬಿಜೆಪಿ ತಮ್ಮ ಸೈದ್ಧಾಂತಿಕ ಪ್ರಭಾವ ಬೀರುವ ಪ್ರಯತ್ನ ನಡೆಸಿದ್ದು, ಇದಕ್ಕಾಗಿ ‘ಮೂಲ ಸಂಸ್ಕೃತಿ ಮತ್ತು ದಲಿತ ಸಂಸ್ಕೃತಿ’ ಎನ್ನುವ ತರಬೇತಿ ಕಾರ್ಯಕ್ರಮವನ್ನು ಬಳಸಿಕೊಂಡಿದೆ.

ನಶಿಸಿ ಹೋಗುತ್ತಿರುವ ತಳಸಮುದಾಯದ ವಿಶಿಷ್ಟ ಕಲೆಗಳನ್ನು ಮುನ್ನೆಲೆಗೆ ತಂದು ಜನಸಾಮಾನ್ಯರ ಮಧ್ಯೆ ಜನಪ್ರಿಯಗೊಳಿಸಲು ‘ಮೂಲ ಸಂಸ್ಕೃತಿ ಮತ್ತು ದಲಿತ ಸಂಸ್ಕೃತಿ’ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ರೂಪಿಸಿ, ಆಯ್ದ ಯುವಕರಿಗೆ ತರಬೇತಿ ನೀಡಲಾಗುತ್ತಿದೆ. ಇದರಲ್ಲಿ ಸ್ವತಃ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್‌ಕುಮಾರ್ ಮತ್ತು ಬಿಜೆಪಿಯ ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ ಭಾಗಿಯಾಗಿದ್ದಾರೆ. ಹಿರೇಮನಿ ಈ ಕಾರ್ಯಕ್ರಮದ ರಾಜ್ಯ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

₹ 5 ಕೋಟಿ ಅನುದಾನದೊಂದಿಗೆ ಜನವರಿ 23ರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈ ತರಬೇತಿ ಕಾರ್ಯಕ್ರಮ ಆರಂಭಿಸಲಾಗಿದೆ. ಆಯ್ದ 135 ಕಲಾ ತಂಡಗಳಿಗೆ, ಪ್ರತಿ ಜಿಲ್ಲೆಯಲ್ಲಿ ತಲಾ 50 ಜನರಿಗೆ ತರಬೇತಿ ನೀಡಲಾಗುತ್ತಿದೆ. ಈ ಕಾರ್ಯಕ್ರಮವನ್ನು ಬಿಜೆಪಿ ಮತ್ತು ಸಂಘಪರಿವಾರದ ಕಾರ್ಯಕರ್ತರೇ ನಡೆಸುತ್ತಿದ್ದಾರೆ. ಅಲ್ಲದೇ, ಸಚಿವ ಸುನಿಲ್‌ಕುಮಾರ್ ಅವರು ಕಾರ್ಯಕ್ರಮದ ಕುರಿತು ಆಗಾಗ್ಗೆ ಪರಿಶೀಲನಾ ಸಭೆಗಳನ್ನೂ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಮಾರ್ಚ್ 9 ಮತ್ತು 10 ರಂದು ಈ ತರಬೇತಿ ಕಾರ್ಯಾಗಾರದ ಸಮಾರೋಪ ಬೆಂಗಳೂರಿನಲ್ಲಿ ನಡೆಯಲಿದೆ. ಅದರಲ್ಲಿ ತಳಸಮುದಾಯದ ಉಡುಪು, ಆಹಾರ, ವಸ್ತುಪ್ರದರ್ಶನ ಮತ್ತು ಮಾರಾಟ ಮೇಳವೂ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಇತರ ಗಣ್ಯರು ಭಾಗವಹಿಸಲಿದ್ದಾರೆ.

ಹಗಲುವೇಷ, ಜೋಗಿಪದ, ಖಾಸಬೇಡರ ಪಡೆ, ಗಣೆವಾದ್ಯ, ಜಡೆ ಕೋಲಾಟ, ಕೀಲುಕುದುರೆ ಇತ್ಯಾದಿಗಳಿಗೆ ಪುನಶ್ಚೇತನ ನೀಡುವುದು ಈ ಕಾರ್ಯಕ್ರಮದ ಉದ್ದೇಶ. ಪ್ರತಿ ಜಿಲ್ಲೆಗೆ ಈ ಕಾರ್ಯಕ್ರಮ ಆಯೋಜಿಸಲು ₹ 10 ಲಕ್ಷ ತರಬೇತಿಗೆ ಅನುದಾನ ನೀಡಲಾಗಿದೆ. 30 ವರ್ಷದೊಳಗಿನ ಯುವಕರಿಗೆ ತರಬೇತಿ ನೀಡಲಾಗಿದೆ. ಇದರಲ್ಲಿ ಪದವೀಧರರು ಮತ್ತು ಸ್ನಾತಕೋತ್ತರ ಪದವಿ ಮಾಡಿದವರೂ ಇರುವುದು ವಿಶೇಷ.

ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದಿಂದ ರಾಜ್ಯ ಮಟ್ಟದ ಪ್ರದರ್ಶನಕ್ಕೆ ಆಯ್ಕೆಯಾದ 30 ಜಿಲ್ಲೆಗಳ ತಲಾ ಎರಡು ಕಲಾ ತಂಡ ಮತ್ತು ಕಲಾವಿದರನ್ನು ರಾಜ್ಯ ಸರ್ಕಾರ ಆಯೋಜಿಸುವ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಬಳಸಿಕೊಳ್ಳಬೇಕು ಎಂದು ಆದೇಶ ಹೊರಡಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಕಾರ್ಯಕ್ರಮದ ಮೂಲಕ ಆರ್‌ಎಸ್‌ಎಸ್, ತಳಸಮುದಾಯದಲ್ಲಿ ಮೂಲಸಂಸ್ಕೃತಿ ಹೆಸರಿನಲ್ಲಿ ಹಿಂದುತ್ವದ ಅಜೆಂಡಾ ತುಂಬಲು ಯತ್ನಿಸುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಸಚಿವ ವಿ. ಸುನಿಲ್‌ಕುಮಾರ್, ‘ಎಲ್ಲದರಲ್ಲೂ ರಾಜಕಾರಣ ಹುಡುಕುವುದು ಕೆಲವರಿಗೆ ಅಭ್ಯಾಸವಾಗಿದೆ. ನಾವು ಮೂಲಸಂಸ್ಕೃತಿಯನ್ನು ಮುನ್ನಲೆಗೆ ತರುವ ಪ್ರಯತ್ನ ಮಾಡಿದ್ದೇವೆ. ಬೇರೆ ಯಾವುದೇ ಉದ್ದೇಶವಿಲ್ಲ. ಎಲ್ಲ ಕನ್ನಡಿಗರನ್ನು ಬೆಸೆಯುವ ಕೋಟಿ ಕಂಠ ಗಾಯನವನ್ನೂ ಮಾಡಿದ್ದೀವಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಾ. 4ರಂದು ಎಎಪಿ ರಾಜ್ಯ ಸಮಾವೇಶ

ದಾವಣಗೆರೆ: ವಿಧಾನಸಭಾ ಚುನಾವಣೆ ಅಂಗವಾಗಿ ದಾವಣಗೆರೆಯಲ್ಲಿ ಮಾರ್ಚ್ 4ರಂದು ಆಮ್ ಆದ್ಮಿ ಪಾರ್ಟಿ (ಎಎಪಿ)ಯ ರಾಜ್ಯ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಚುನಾವಣಾ ಪ್ರಚಾರ ಕಾರ್ಯಕ್ಕೆ ಇಲ್ಲಿಂದಲೇ ಚಾಲನೆ ನೀಡುವರು ಎಂದು ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ತಿಳಿಸಿದರು.

‘ಅಂದು ಬೆಳಿಗ್ಗೆ 11ಕ್ಕೆ ನಗರದ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿರುವ ಸಮಾವೇಶದಲ್ಲಿ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಪಾಲ್ಗೊಳ್ಳಲಿದ್ದಾರೆ. ನಂತರ ರಾಜ್ಯದ ವಿವಿಧೆಡೆ ಈ ಸಮಾವೇಶ ನಡೆಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ನೇಕಾರ ಅಭಿವೃದ್ಧಿ ನಿಗಮ ಶೀಘ್ರ ಸ್ಥಾಪನೆ’

ರಬಕವಿ-ಬನಹಟ್ಟಿ (ಬಾಗಲಕೋಟೆ): ‘ನೇಕಾರ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಶೀಘ್ರದಲ್ಲಿ ಸ್ಥಾಪಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ರಬಕವಿ-ಬನಹಟ್ಟಿ ನಗರದ ಎಸ್‌ಆರ್‌ಎ ಮೈದಾನದಲ್ಲಿ ಭಾನುವಾರ ನಡೆದ ಸಸಾಲಟ್ಟಿ ಶಿವಲಿಂಗೇಶ್ವರ ಏತ ನೀರಾವರಿ ಯೋಜನೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ‘ಕೈಮಗ್ಗ ಅಭಿವೃದ್ಧಿ ನಿಗಮವಿದ್ದರೂ, ನೇಕಾರ ಅಭಿವೃದ್ಧಿ ನಿಗಮ ಸ್ಥಾಪನೆಗೆ ಬೇಡಿಕೆಯಿದೆ. ತಕ್ಷಣವೇ ಅಧಿಕಾರಿಗಳಿಂದ ಮಾಹಿತಿ ಪಡೆದು ಘೋಷಣೆ ಮಾಡಲಾಗುವುದು’ ಎಂದರು.

‘ಬಜೆಟ್‌ನಲ್ಲಿ ರಾಜ್ಯದಲ್ಲಿ 25 ಜವಳಿ ಪಾರ್ಕ್ ಸ್ಥಾಪನೆ ಮಾಡಲಾಗುವುದು ಎಂದು ಘೋಷಣೆ ಮಾಡಲಾಗಿದೆ. ತೆರದಾಳ ವಿಧಾನಸಭಾ ಕ್ಷೇತ್ರದ ರಬಕವಿ-ಬನಹಟ್ಟಿಯಿಂದಲೇ ಆರಂಭಿಸಲಾಗುವುದು’ ಎಂದರು.

‘ತೃತೀಯ ರಂಗದಲ್ಲಿ ಒಗ್ಗಟ್ಟು, ಉದ್ದೇಶ ಇಲ್ಲ’

ಹುಬ್ಬಳ್ಳಿ: ‘ಒಂಬತ್ತು ವರ್ಷಗಳಿಂದ ತೃತೀಯ ಶಕ್ತಿ ಒಂದಾಗಿಸುವ ಪ್ರಯತ್ನ ನಡೆಯುತ್ತಿದೆ. ಅವರಲ್ಲಿ ಒಗ್ಗಟ್ಟು ಹಾಗೂ ಸ್ಪಷ್ಟ ಉದ್ದೇಶವಿಲ್ಲದ್ದರಿಂದ ಸಾಧ್ಯವಾಗುತ್ತಿಲ್ಲ. ಹೇಗಾದರೂ ಮಾಡಿ ಪ್ರಧಾನಿಯಾಗಬೇಕು ಎನ್ನುವ ಉದ್ದೇಶ ಅವರದ್ದು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಉದಾತ್ತ ಮನೋಭಾವ ಇದ್ದರೆ ತೃತೀಯ ರಂಗ ನಿರ್ಮಾಣವಾಗುತ್ತಿತ್ತು. ಅದು ಥರ್ಡ್ ಕ್ಲಾಸ್ ರಂಗವಾಗಲಿದೆಯೇ ಹೊರತು ತೃತೀಯ ರಂಗವಾಗದು’ ಎಂದು ಲೇವಡಿ ಮಾಡಿದರು.

‘ಕೇಂದ್ರದ ಮರುಪರಿಶೀಲನೆ ಕೋರಲಿ’

ಪ್ರಜಾವಾಣಿ ವಾರ್ತೆ

ಹೊಸದುರ್ಗ: ‘ಲಿಂಗಾಯತ ಸಮುದಾಯವನ್ನು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಘೋಷಿಸುವಂತೆ ಸಲ್ಲಿಸಿದ್ದ ವರದಿಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ. ರಾಜ್ಯ ಸರ್ಕಾರ ಈ ಕುರಿತ ಮರುಪರಿಶೀಲನೆಗೆ ಕೋರಬೇಕು’ ಎಂದು ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ್ ದಾಸ್ ಸಲಹೆ ನೀಡಿದರು.

ತಾಲ್ಲೂಕಿನ ಸಾಣೇಹಳ್ಳಿಯಲ್ಲಿ ಆಯೋಜಿಸಿದ್ದ ಲಿಂಗಾಯತ ಧರ್ಮ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭ ನನ್ನ ಅಧ್ಯಕ್ಷತೆಯಲ್ಲಿ ರಚಿಸಿದ್ದ ತಜ್ಞರ ಸಮಿತಿಯು ಅಧ್ಯಯನ ನಡೆಸಿ, ಲಿಂಗಾಯತ ಸಮುದಾಯದ ಕುರಿತು ವರದಿ ಸಲ್ಲಿಸಿತ್ತು. ಸರ್ಕಾರ ವರದಿಗೆ ಒಪ್ಪಿಗೆ ಸೂಚಿಸಿ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಆದರೆ, ಕೇಂದ್ರವು ವರದಿಯನ್ನು ತಿರಸ್ಕರಿಸಿದೆ. ಅದರ ವಿವರ ಕೇಳಿ ರಾಜ್ಯ ಸರ್ಕಾರ ಮರುಪರಿಶೀಲನೆಗೆ ಕೋರಬೇಕು’ ಎಂದು ಅವರು ತಿಳಿಸಿದರು.

ಸಾವಿರ ಕಲ್ಯಾಣಿಗಳ ಪುನರುಜ್ಜೀವನ: ಆರ್‌ಡಿಪಿಆರ್ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಒಂದು ಸಾವಿರ ಕಲ್ಯಾಣಿಗಳನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆ ಪುನರುಜ್ಜೀವನಗೊಳಿಸುತ್ತಿದೆ.

ಕಲ್ಯಾಣಿಗಳಲ್ಲಿ ಹಲವು ತ್ಯಾಜ್ಯದ ಗುಂಡಿಯಾಗಿದ್ದು, ಕೆಲವು ನಿರ್ವಹಣೆಯಿಲ್ಲದೇ ಹಾಳಾಗುತ್ತಿದ್ದು, ಇವುಗಳಿಗೆ ಮರುಜೀವ ನೀಡಲು ಯೋಜಿಸಲಾಗಿದೆ.

ಆರ್‌ಡಿಪಿಆರ್ ಇಲಾಖೆ ಅಧಿಕಾರಿಗಳ ಪ್ರಕಾರ, 2021-22 ರಲ್ಲಿ 517 ಕಲ್ಯಾಣಿಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 221 ಕಲ್ಯಾಣಿಗಳನ್ನು ಅಭಿವೃದ್ಧಿಪಡಿಸಲಾಗಿದೆ. 296 ಕಲ್ಯಾಣಿಗಳ ಪುನರುಜ್ಜೀವನ ಕಾಮಗಾರಿ ಅಂತಿಮ ಹಂತದಲ್ಲಿದೆ. 2022-23ನೇ ಸಾಲಿನಲ್ಲಿ 433 ಕಲ್ಯಾಣಿಗಳನ್ನು ಗುರುತಿಸಲಾಗಿದ್ದು, 53 ಹೊಸ ರೂಪ ಪಡೆಯಲಿವೆ.

‘ಇತರೆ ಜಲಮೂಲಗಳಂತೆ ಕಲ್ಯಾಣಿಗಳು ನೀರು ಸಂರಕ್ಷಣೆಗೆ ಮೀಸಲಿಲ್ಲ. ಧಾರ್ಮಿಕ ಕಾರ್ಯಗಳೂ ಇಲ್ಲಿ ನಡೆಯುತ್ತವೆ. ಆದ್ದರಿಂದ ಎಲ್ಲ ಸಮಯದಲ್ಲೂ ನೀರು ಉಳಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ನಾವು ಸ್ಥಳೀಯರು ಹಾಗೂ ಗ್ರಾಮ ಪಂಚಾಯಿತಿಯವರ ಜೊತೆ ಕಾರ್ಯನಿರ್ವಹಿಸುತ್ತಿದ್ದೇವೆ’ ಎಂದು ಗ್ರಾಮೀಣ ಅಭಿವೃದ್ಧಿ (ಎಂಜಿಎನ್‌ಆರ್‌ಇಜಿಎಸ್) ಆಯುಕ್ತರಾದ ಶಿಲ್ಪಾ ನಾಗ್ ತಿಳಿಸಿದರು.

‘ಕಲ್ಯಾಣಿಗಳ ಪುನರುಜ್ಜೀವನ ಕಾಮಗಾರಿಯಲ್ಲಿ ಮೊದಲ ಹೆಜ್ಜೆಯಾಗಿ ನಾವು ಕಂದಾಯ ದಾಖಲೆಗಳ ಪ್ರಕಾರ ಅದರ ಗಡಿಯನ್ನು ಗುರುತಿಸುತ್ತೇವೆ. ಯಾವುದೇ ರೀತಿಯ ಒತ್ತುವರಿ ಇದ್ದರೆ ಅದನ್ನು ತೆರವು ಮಾಡಿ ಅಭಿವೃದ್ಧಿ ಕಾರ್ಯ ಆರಂಭಿಸುತ್ತೇವೆ’ ಎಂದರು.

‘ಕಲ್ಯಾಣಿಗಳಲ್ಲಿರುವ ಕಸವನ್ನು ತೆಗೆದು ಸಿವಿಲ್ ಕಾಮಗಾರಿ ಆರಂಭಿಸುವುದು ಸವಾಲು. ಅಲ್ಲದೇ, ನಾವು ವಾಸ್ತುಶಿಲ್ಪ, ಪಾರಂಪರಿಕ ರಚನೆ ಮತ್ತು ನಿರ್ಮಾಣಗಳನ್ನು ಗುರುತಿಸಿ, ಸಂರಕ್ಷಿಸಬೇಕಾಗಿದೆ’ ಎಂದು ಆರ್‌ಡಿಪಿಆರ್ ಅಧಿಕಾರಿಗಳು ಮಾಹಿತಿ ನೀಡಿದರು.

ಪ್ರಧಾನಿ ಭಾಗಿ: ಶಿವಮೊಗ್ಗ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

ವಿಮಾನ ನಿಲ್ದಾಣ: ಲೋಕಾರ್ಪಣೆ ಇಂದು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಮೀಪದ ಸೋಗಾನೆ ಗ್ರಾಮದ ಬಳಿ ನಿರ್ಮಿಸಲಾದ ನೂತನ ವಿಮಾನ ನಿಲ್ದಾಣವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಲೋಕಾರ್ಪಣೆ ಮಾಡಲಿದ್ದಾರೆ.

ಶಿವಮೊಗ್ಗ– ಭದ್ರಾವತಿ ನಗರಗಳ ಮಧ್ಯೆ ಇರುವ ಸೋಗಾನೆ ಬಳಿ ₹449.22 ಕೋಟಿ ವೆಚ್ಚದಲ್ಲಿ 778.62 ಎಕರೆ ಪ್ರದೇಶದಲ್ಲಿ ವಿಮಾನ ನಿಲ್ದಾಣ ನಿರ್ಮಾಣವಾಗಿದೆ.

2007ರಲ್ಲಿ ಬಿ.ಎಸ್‌. ಯಡಿಯೂರಪ್ಪ ಉಪಮುಖ್ಯಮಂತ್ರಿ ಆಗಿದ್ದಾಗ ಸೋಗಾನೆಯಲ್ಲಿ ಕಿರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿತ್ತು. ಮೊದಲು ಟೆಂಡರ್ ಪಡೆದಿದ್ದ ಗುತ್ತಿಗೆದಾರರು ಕಾಮಗಾರಿ ನಿರ್ವಹಣೆಯಿಂದ ಹಿಂದೆ ಸರಿದಿದ್ದರು. ನಂತರ ಬಂದ ಸರ್ಕಾರಗಳು ಆಸಕ್ತಿ ತೋರದ ಕಾರಣ ವಿಮಾನ ನಿಲ್ದಾಣ ಕಾಮಗಾರಿ ವಿಳಂಬವಾಗಿತ್ತು.

2019ರಲ್ಲಿ ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ವಿಮಾನ ನಿಲ್ದಾಣದ ವಿನ್ಯಾಸ ಬದಲಿಸಿತ್ತು. ಬೋಯಿಂಗ್‌ನಂತಹ ದೊಡ್ಡ ವಿಮಾನ ಇಳಿಯಲು ಅವಕಾಶ ಕಲ್ಪಿಸಿ, ರನ್ ವೇ ಉದ್ದವನ್ನು 2.05 ಕಿ.ಮೀ ಬದಲಿಗೆ, 3.20 ಕಿ.ಮೀ.ಗೆ ಹೆಚ್ಚಿಸಲಾಯಿತು. ರಾತ್ರಿ ವೇಳೆ ವಿಮಾನ ಇಳಿಯುವ ಸೌಲಭ್ಯ ಕಲ್ಪಿಸಲಾಯಿತು. ಇದರಿಂದ ಯೋಜನಾ ವೆಚ್ಚ ₹ 220 ಕೋಟಿಯಿಂದ ₹449.22 ಕೋಟಿಗೆ ಏರಿಕೆಯಾಯಿತು.

ಶಿವಮೊಗ್ಗ– ಶಿಕಾರಿಪುರ– ರಾಣೆಬೆನ್ನೂರು ನಡುವೆ ನೂತನ ರೈಲು ಮಾರ್ಗ ನಿರ್ಮಾಣ ಕಾಮಗಾರಿಗೂ ಮೋದಿ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಆರ್‌.ಸೆಲ್ವಮಣಿ ಹೇಳಿದರು.


ಶಿವಮೊಗ್ಗ ಸಮೀಪದ ಸೋಗಾನೆ ಬಳಿ ನಿರ್ಮಿಸಲಾಗಿರುವ ನೂತನ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡ.

ಪ್ರಧಾನಿಯಿಂದ ಹೆಸರು ಘೋಷಣೆ?

ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರನ್ನು ರಾಜ್ಯ ಸಚಿವ ಸಂಪುಟದಲ್ಲಿ ಅಂತಿಮಗೊಳಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಲೋಕಾರ್ಪಣೆ ವೇಳೆ ನರೇಂದ್ರ ಮೋದಿ ಅಧಿಕೃತವಾಗಿ ಈ ಹೆಸರು ಘೋಷಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

10 ಸಾವಿರ ಮಹಿಳೆಯರಿಂದ ಕೇಸರಿ ಪೇಟಾ ಧರಿಸಿ ಪೂರ್ಣಕುಂಭ ಸ್ವಾಗತ

ಪ್ರಧಾನಿ ಸ್ವಾಗತಿಸಲು ಸಜ್ಜಾದ ಕಾರ್ಮಿಕರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸೋಮವಾರ (ಫೆ.27) ಬೆಳಗಾವಿಗೆ ಆಗಮಿಸುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಶಿಷ್ಟ ರೀತಿಯಲ್ಲಿ ಸ್ವಾಗತಿಸಲು, ವಿವಿಧ ಕ್ಷೇತ್ರಗಳ ಆರು ಕಾರ್ಮಿಕರನ್ನು ಸಿದ್ಧಗೊಳಿಸಲಾಗಿದೆ.

ಪೌರಕಾರ್ಮಿಕ ಮಹಿಳೆ ಮೀನಾಕ್ಷಿ ಕೃಷ್ಣ ತಳವಾರ, ಕೃಷಿ ಕಾರ್ಮಿಕ ಮಹಿಳೆ ಶೀಲಾ ಖನ್ನೂಕರ, ನೇಕಾರ ಕಲ್ಲಪ್ಪ ತಂಬಗಿ, ಆಟೊ ಚಾಲಕ ಮಯೂರ ಯಶವಂತ ಚವ್ಹಾಣ, ಹೋಟೆಲ್ ಮಾಣಿ ಚಂದ್ರಕಾಂತ ಮಹಾದೇವ ಹೋನಕರ, ಕಟ್ಟಡ ಕಾರ್ಮಿಕ ಮಂಗೇಶ ಬಸ್ತವಾಡಕರ ಅವರಿಗೆ ಶಿಷ್ಟಾಚಾರದ ತರಬೇತಿ ನೀಡಲಾಗಿದೆ.

ಸೋಮವಾರ ಮಧ್ಯಾಹ್ನ 2ಕ್ಕೆ ನಗರಕ್ಕೆ ಬರುವ ಪ್ರಧಾನಿ, ಇಲ್ಲಿನ ರಾಣಿ ಚನ್ನಮ್ಮ ವೃತ್ತದಿಂದ ರೋಡ್ ಶೋ ನಡೆಸಲಿದ್ದಾರೆ. 10.5 ಕಿ.ಮೀ ಉದ್ದದ ರೋಡ್ ಶೋನಲ್ಲಿ ಎಂಟು ಕಡೆ ವೀಕ್ಷಣಾ ಸ್ಥಳ ಮಾಡಲಾಗಿದೆ.

ರೋಡ್ ಶೋ ಮಾರ್ಗದಲ್ಲಿ 90 ಕಡೆ ವಿಶಿಷ್ಟ ವೇದಿಕೆಗಳನ್ನು ಸಿದ್ಧಗೊಳಿಸಲಾಗಿದೆ. ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸಂಸ್ಕೃತಿ, ಪರಂಪರೆ ಸಾರುವ ಪ್ರದರ್ಶನ ಈ ವೇದಿಕೆಗಳಲ್ಲಿ ನಡೆಯಲಿದೆ. ಅಲ್ಲದೇ, ಆಯಾ ರಾಜ್ಯಗಳಿಗೆ ಪ್ರಧಾನಿ ನೀಡಿದ ಕೊಡುಗೆಗಳ ಪ್ರದರ್ಶನ ಇರಲಿದೆ. ‘ಕಾಂಗ್ರೆಸ್ ಯುಗ– ಮೋದಿ ಯುಗ’ ಎಂಬ ಬೃಹತ್ ಫ್ಲೆಕ್ಸ್‌ಗಳನ್ನು ಮಾಡಿದ್ದು ಯಾರ ಅವಧಿಯಲ್ಲಿ ಎಷ್ಟು ಅಭಿವೃದ್ಧಿ ಆಗಿವೆ ಎಂಬ ಎಲ್‌ಇಡಿ ವಿಡಿಯೊ ಪ್ರದರ್ಶನ, ಭಿತ್ತಿಚಿತ್ರಗಳನ್ನೂ ಪ್ರದರ್ಶಿಸಲಾಗುತ್ತಿದೆ.

ಪ್ರಧಾನಿ ಬೆಳಗಾವಿ ದಕ್ಷಿಣ ಕ್ಷೇತ್ರ ಪ್ರವೇಶಿಸುವ ಸ್ಥಳದಲ್ಲಿ 10 ಸಾವಿರ ಮಹಿಳೆಯರು ಒಂದೇ ಬಣ್ಣದ ಸೀರೆಯುಟ್ಟು ಕೇಸರಿ ಪೇಟಾ ಧರಿಸಿ, ಪೂರ್ಣಕುಂಭ ಹೊತ್ತು ಪ್ರಧಾನಿಗೆ ಸ್ವಾಗತ ಕೋರಲಿದ್ದಾರೆ ಎಂದು ಶಾಸಕ ಅಭಯ ಪಾಟೀಲ ತಿಳಿಸಿದ್ದಾರೆ.

ಮಧ್ಯಾಹ್ನ 12.45ಕ್ಕೆ ಮಾಲಿನಿ ಸಿಟಿಯ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಒಂದು ಲಕ್ಷ ಕುರ್ಚಿಗಳನ್ನು ಹಾಕಲಾಗಿದೆ. ಲಕ್ಷ ಜನರಿಗೆ ಊಟ, ನೀರಿನ ವ್ಯವಸ್ಥೆ ಇರಲಿದೆ ಎಂದು ಮೂಲಗಳು ತಿಳಿಸಿವೆ.


ಬೆಳಗಾವಿಯಲ್ಲಿ ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರು ರೋಡ್ ಶೋ ನಡೆಸುವ ಮಾರ್ಗವನ್ನು ಬಿಜೆಪಿ ಧ್ವಜ, ಕೇಸರಿ ಪಟಗಳಿಂದ ಅಲಂಕರಿಸಲಾಗಿದೆ
– ಪ್ರಜಾವಾಣಿ ಚಿತ್ರ

ಸೂಜಿ–ದಾರದ ಕಸೂತಿ ಪೇಂಟಿಂಗ್

ಮೋದಿ ಅವರಿಗೆ ಕಾಣಿಕೆ ನೀಡಲು ಬೆಳಗಾವಿಯ ಸಿಂಪಿ ಸಮಾಜದ ಯುವಕರು ಸೂಜಿ– ದಾರದಿಂದಲೇ ವಿಶಿಷ್ಟ ಕಸೂತಿಯ ಪೇಂಟಿಂಗ್ ಸಿದ್ಧಪಡಿಸಿದ್ದಾರೆ.

12 ಲಕ್ಷಕ್ಕೂ ಹೆಚ್ಚು ಹೊಲಿಗೆ ಹೊಂದಿರುವ ಈ ಪೇಂಟಿಂಗ್ ಮಾಡಲು ಒಂದು ತಿಂಗಳ ಸಮಯ ಹಿಡಿದಿದೆ. ಟೇಲರ್ ಎಸ್‌.ಕೆ. ಕಾಕಡೆ ನೇತೃತ್ವದಲ್ಲಿ ಸಿಂಪಿ ಸಮುದಾಯದ ಯುವಕ– ಯುವತಿಯರು ರಚಿಸಿದ್ದಾರೆ.

ಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶ– ಸ್ಥಳೀಯರಿಂದ ಆರೋಪ

ದಶಪಥ ಅಪೂರ್ಣ; ಉದ್ಘಾಟನೆಗೆ ದಿನ ನಿಗದಿ!

• ಎಂ.ಎನ್.ಯೋಗೇಶ್

ಪ್ರಜಾವಾಣಿ ವಿಶೇಷ



ಮಂಡ್ಯ ತಾಲ್ಲೂಕು ಇಂಡುವಾಳು ಬಳಿ ದಶಪಥ ಯೋಜನೆಯ ಸೇತುವೆ ಕಾಮಗಾರಿ ಈಗಷ್ಟೇ ಆರಂಭವಾಗಿದೆ –ಪ್ರಜಾವಾಣಿ ಚಿತ್ರ; ಧನುಷ್ ಡಿ.ವಿ

ಮಂಡ್ಯ: ಬೆಂಗಳೂರು-ಮೈಸೂರು ದಶಪಥ ನಿರ್ಮಾಣ ಕಾಮಗಾರಿ ಮಂಡ್ಯ ಮತ್ತು ಮೈಸೂರು ಜಿಲ್ಲೆಯ ವ್ಯಾಪ್ತಿಯ ಕೆಲವೆಡೆ ಇನ್ನೂ ಪೂರ್ಣಗೊಂಡಿಲ್ಲ. ಆದರೂ ಮಾರ್ಚ್ 11 ಕ್ಕೆ ಉದ್ಘಾಟನೆಗೆ ದಿನವನ್ನು ನಿಗದಿಪಡಿಸಲಾಗಿದೆ.

ಮೊದಲ ಹಂತದ ಕಾಮಗಾರಿ ಬೆಂಗಳೂರಿನ ಪಂಚಮುಖಿ ಆಂಜನೇಯ ದೇವಾಲಯದಿಂದ ಜಿಲ್ಲೆಯ ನಿಡಘಟ್ಟದ ವರೆಗೆ ಪೂರ್ಣಗೊಂಡಿದೆ. ಅಲ್ಲಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆವರೆಗೆ 2ನೇ ಹಂತದ ನಿರ್ಮಾಣ ಕಾರ್ಯ ನಡೆಯುತ್ತಿದೆ. ತಾಲ್ಲೂಕಿನ ಹಳೇಬೂದನೂರು, ಹೊಸ ಬೂದನೂರು, ಇಂಡುವಾಳು ಹಾಗೂ ಮೈಸೂರು ಸಮೀಪದ ಸಿದ್ದಲಿಂಗಪುರ ಬಳಿ ಬೃಹತ್ ಸೇತುವೆ ನಿರ್ಮಾಣ ಕೆಲಸ ಇತ್ತೀಚೆಗಷ್ಟೇ ಆರಂಭವಾಗಿದೆ.

ಹಲವು ಪಾದಚಾರಿ ಮೇಲ್ಸೇತುವೆ, ಕೆಳಸೇತುವೆಗಳ ಕಾಮಗಾರಿ ಇನ್ನೂ ಆರಂಭವೇ ಆಗಿಲ್ಲ. ಬೃಹತ್ ಸೇತುವೆಗಳ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಠ ಎರಡು ತಿಂಗಳಾದರೂ ಬೇಕು ಎಂದು ತಂತ್ರಜ್ಞರು ತಿಳಿಸಿದ್ದಾರೆ. ಆದರೂ ಮಾರ್ಚ್ 11ರಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್‌ಪ್ರೆಸ್ ವೇಯನ್ನು ಲೋಕಾರ್ಪಣೆಗೊಳಿಸಲಿದ್ದಾರೆ ಎಂದು ಪ್ರಕಟಿಸಿರುವುದು ಗುತ್ತಿಗೆದಾರರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

‘ನೀತಿ ಸಂಹಿತೆ ಜಾರಿಗೊಳ್ಳುವ ಮೊದಲೇ ಉದ್ಘಾಟಿಸಿ, ವಿಧಾನಸಭಾ ಚುನಾವಣೆಯಲ್ಲಿ ಅದರ ಸಂಪೂರ್ಣ ಶ್ರೇಯ ಪಡೆಯುವುದು ಸರ್ಕಾರದ ಉದ್ದೇಶ’ ಎಂಬ ಆರೋಪ ಕೇಳಿ ಬಂದಿದೆ.

ಹಳೇಬೂದನೂರು ಹಾಗೂ ಹೊಸಬೂದನೂರು ವ್ಯಾಪ್ತಿಯ 2 ಕಿ.ಮೀ ವ್ಯಾಪ್ತಿಯಲ್ಲಿ ಮೇಲ್ಸೇತುವೆ ನಿರ್ಮಾಣ ಅರ್ಧದಷ್ಟು ಮುಗಿದಿದೆ. ಸೇತುವೆಯ ಗೋಡೆ (ಅರ್ಥ್ ವಾಲ್) ನಿರ್ಮಾಣ ಹಾಗೂ ಮಣ್ಣು ಭರ್ತಿ ಕೆಲಸ ನಡೆದಿದೆ. 1 ಕಿ.ಮೀ.ನಷ್ಟಿರುವ ಇಂಡುವಾಳು ಸೇತುವೆಯ ಒಂದು ಭಾಗದ ಗೋಡೆ ನಿರ್ಮಾಣವಾಗುತ್ತಿದ್ದು, ಇನ್ನೊಂದು ಭಾಗ ಖಾಲಿಯೇ ಉಳಿದಿದೆ.

ಮೈಸೂರು ಬಳಿ ಇರುವ ನಾಗನಹಳ್ಳಿ ಗೇಟ್‌ನಿಂದ ಸಿದ್ದಲಿಂಗಪುರದವರೆಗೆ 700 ಮೀಟರ್ ಉದ್ದದ ಸೇತುವೆ ನಿರ್ಮಾಣ ಕಾರ್ಯವೂ ಬಾಕಿಯಿದ್ದು, ಮಣ್ಣು ಭರ್ತಿ ಕಾರ್ಯ ನಡೆಯುತ್ತಿದೆ.

‘ಮಣ್ಣು ಭರ್ತಿಯಾದ ನಂತರ ಗಟ್ಟಿಯಾಗುವವರೆಗೆ ಕಾಯಬೇಕು. ಅವಸರ ಮಾಡಿದರೆ ಕುಸಿಯುವ ಅಪಾಯವಿದೆ. ಮೇ 2ನೇ ವಾರದ ವೇಳೆಗೆ ವಾಹನ ಓಡಾಡುವಷ್ಟು ಸೇತುವೆ ನಿರ್ಮಿಸಿಕೊಡುವಂತೆ ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. 2 ವಾರದಲ್ಲಿ ಮುಗಿಯುವುದು ಕಷ್ಟ’ ಎಂದು ಇಂಡುವಾಳು ಬಳಿ ನಿರ್ಮಾಣ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಎಂಜಿನಿಯರ್‌ವೊಬ್ಬರು ‘ಪ್ರಜಾವಾಣಿ’ಗೆ ಹೇಳಿದರು.

ಈಗಾಗಲೇ ನಿಗದಿಯಾಗಿರುವ ನಿರ್ಮಾಣ ಕೆಲಸದ ಜೊತೆಗೆ, ಜನ ಒತ್ತಾಯಪೂರ್ವಕವಾಗಿ ಮಂಜೂರು ಮಾಡಿಸಿಕೊಂಡಿರುವ ಕೆಲಸಗಳೂ ಬಾಕಿ ಇವೆ. ಮದ್ದೂರು ಬಳಿ ಶಿಂಷಾ ಮೇಲ್ಸೇತುವೆಗೆ ಸಮಾನಾಂತರವಾಗಿ ಸರ್ವೀಸ್ ಸೇತುವೆ ನಿರ್ಮಿಸಿಕೊಡುವಂತೆ ಜನ ನಿರಂತರ ಧರಣಿ ನಡೆಸಿದ್ದರು, ಸಂಸದೆ ಸುಮಲತಾ ಕೂಡ ಬೆಂಬಲಿಸಿದ್ದರು.

ನಂತರ, ಸರ್ವೀಸ್ ಸೇತುವೆ ನಿರ್ಮಿಸಿಕೊಡಲು ಹೆದ್ದಾರಿ ಪ್ರಾಧಿಕಾರವು ಒಪ್ಪಿಕೊಂಡಿತ್ತು. ಆದರೆ ಈವರೆಗೂ ಶುರುವಾಗಿಲ್ಲ. ಫೆ.20ರಂದು ರೈತರು ನಡೆಸಿದ ‘ದಶಪಥ ಬಂದ್’ ಹೋರಾಟದ ಫಲವಾಗಿ ತಾಲ್ಲೂಕಿನ ಹನಕೆರೆ ಬಳಿ ಕೆಳಸೇತುವೆ ನಿರ್ಮಾಣಕ್ಕೆ ಪ್ರಾಧಿಕಾರ ಒಪ್ಪಿಕೊಂಡಿದೆ. ಅದೂ ಆರಂಭವಾಗಿಲ್ಲ.

ದಶಪಥಕ್ಕೆ ರಾಮನಗರ, ಚನ್ನಪಟ್ಟಣ, ಮಂಡ್ಯ ಹಾಗೂ ಶ್ರೀರಂಗಪಟ್ಟಣದ ಸಂಪರ್ಕವೇ ಇಲ್ಲ. ಪ್ರವೇಶ, ನಿರ್ಗಮನ ಪಥಕ್ಕೆ ಈವರೆಗೂ ಭೂಸ್ವಾಧೀನ ಆಗಿಲ್ಲ. ಸರ್ವೀಸ್ ರಸ್ತೆ ಮಳೆ ಬಂದರೆ ಮುಳುಗುತ್ತದೆ. ಈವರೆಗೂ ಹೆದ್ದಾರಿಯಲ್ಲಿ ಸೂಚನಾ ಫಲಕ ಅಳವಡಿಸದ ಕಾರಣ ಅಪಘಾತಗಳ ಸಂಖ್ಯೆಯೂ ಹೆಚ್ಚುತ್ತಿವೆ.

ಈ ಕುರಿತು ಮಾಹಿತಿ ಪಡೆಯಲು ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕ ಶ್ರೀಧರ್ ಅವರನ್ನು ಸಂಪರ್ಕಿಸಿದಾಗ, ಅವರು ಕರೆ ಸ್ವೀಕರಿಸಲಿಲ್ಲ.

ಕೆರೆ, ಕಾಲುವೆ ಕಲುಷಿತವಾಗುವ ಅಪಾಯ

ಸರ್ವೀಸ್ ರಸ್ತೆಯ ಚರಂಡಿಗಳು ಅವೈಜ್ಞಾನಿಕವಾಗಿದ್ದು ಕಾಲುವೆ, ನಾಲೆಗಳಿಗೆ ಸಂಪರ್ಕಿಸಲಾಗಿದೆ. ಇದರಿಂದ ಸ್ಥಳೀಯ ಕೆರೆ, ಕಟ್ಟೆಗಳು ಕಲುಷಿತವಾಗುವ ಅಪಾಯ ಎದುರಾಗಿದೆ.

‘ಹೆದ್ದಾರಿ ಮೂಲಕ ಹರಿದು ಬರುವ ಚರಂಡಿ ನೀರನ್ನು ಫಿಲ್ಟರ್ ಮಾಡಿ ಹರಿಸಬೇಕು, ಅದಕ್ಕಾಗಿ ಪ್ರಾಧಿಕಾರವೇ ಶುದ್ಧೀಕರಣ ಘಟಕ ಆರಂಭಿಸಬೇಕು’ ಎಂದು ಇಂಡುವಾಳು ಗ್ರಾಮದ ಜೋಗಿಗೌಡ ಒತ್ತಾಯಿಸಿದರು.

ಹಲವೆಡೆ 2ನೇ ಹಂತದ ಕಾಮಗಾರಿ ಬಾಕಿ ಇದೆ. ನಿಗದಿತ ದಿನಾಂಕದೊಳಗೆ ಕೆಲಸ ಪೂರ್ಣಗೊಳಿಸುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಲಾಗಿದೆ

ಪ್ರತಾಪ್ ಸಿಂಹ, ಮೈಸೂರು ಸಂಸದ

ಮುಖ್ಯಾಂಶಗಳು

- ಪ್ರವೇಶ, ನಿರ್ಗಮನ ಪಥಕ್ಕೆ ನಡೆಯದ ಭೂಸ್ವಾಧೀನ
- ಸರ್ವೀಸ್ ಸೇತುವೆ ನಿರ್ಮಾಣ ಕಾರ್ಯ ಶುರುವೇ ಆಗಿಲ್ಲ

ಸುದ್ದಿ 2 ನಿಮಿಷ

‘ಮಾರ್ಚ್ 15ರಂದು ಸಚಿವ ಮಾಧುಸ್ವಾಮಿ ನಿವಾಸಕ್ಕೆ ಮುತ್ತಿಗೆ’

ಮೈಸೂರು: ‘ಪರಿಶಿಷ್ಟ ಜಾತಿ ಮೀಸಲಾತಿಯನ್ನು ವರ್ಗೀಕರಿಸುವ ಹುನ್ನಾರದ ವಿರುದ್ಧ ಮಾರ್ಚ್ 15ರಂದು ಬೆಂಗಳೂರಿನಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಮಾಧುಸ್ವಾಮಿ ನಿವಾಸಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದು ಬಂಜಾರ ಗುರು ಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ ತಿಳಿಸಿದರು.

ಇಲ್ಲಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದಿಂದ ಭಾನುವಾರ ಆಯೋಜಿಸಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

‘ನಾಲ್ವಡಿ ಕೃಷ್ಣರಾಜ ಒಡೆಯರ್ ಬಂಜಾರ ಸಮುದಾಯಕ್ಕೆ ಆ ಕಾಲದಲ್ಲೇ ಮೀಸಲಾತಿ ನೀಡಿದ್ದರಿಂದಾಗಿ ನಾವು ವಿದ್ಯಾವಂತರಾಗಲು ಸಾಧ್ಯವಾಯಿತು. ಆದರೆ, ಈಗ ಸರ್ಕಾರ ಮೀಸಲಾತಿ ಕಸಿಯುವ ಹುನ್ನಾರವನ್ನು ವರ್ಗೀಕರಣದ ಮೂಲಕ ಮಾಡುತ್ತಿದೆ. ಸಾರ್ವಜನಿಕ ಚರ್ಚೆ ನಡೆಸದೆ ವರ್ಗೀಕರಿಸಿದರೆ ತೊಂದರೆ ಆಗುತ್ತದೆ. ಈ ಬಗ್ಗೆ ಕಾನೂನು ಸಚಿವರು ಪದೇ ಪದೇ ಮಾತನಾಡುತ್ತಿರುವುದು ಖಂಡನೀಯ’ ಎಂದರು.

‘ಮೀಸಲಾತಿಯಲ್ಲಿ ಯಾವುದೇ ಬದಲಾವಣೆ ಇರಬಾರದು. ಸೇವಾಲಾಲ್ ಪೀಠಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ₹ 10 ಕೋಟಿ ಅನುದಾನ ನೀಡುವುದಾಗಿ ಹೇಳಿ ಈಗಾಗಲೇ ₹ 5 ಕೋಟಿ ಬಿಡುಗಡೆ ಮಾಡಿದ್ದಾರೆ. ನಮಗೆ ಹಣಕ್ಕಿಂತ ಮೀಸಲಾತಿ ಮುಖ್ಯ’ ಎಂದು ಹೇಳಿದರು.

ಮಂತ್ರಾಲಯ: ರಾಯರ ವರ್ಧಂತಿ



ರಾಯಚೂರು: ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ 428ನೇ ವರ್ಧಂತಿ ಮಹೋತ್ಸವವನ್ನು ಭಾನುವಾರ ಸಂಭ್ರಮ, ಸಡಗರದಿಂದ ನೆರವೇರಿಸಲಾಯಿತು.

ಮಹೋತ್ಸವದ ನಿಮಿತ್ತ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ರಾಯರ ಮೂಲವೃಂದಾವನಕ್ಕೆ ಮಹಾಪಂಚಾಮೃತ ಅಭಿಷೇಕ ನೆರವೇರಿಸಿದರು. ನಂತರ ವಸ್ತ್ರಾಲಂಕಾರ, ಪುಷ್ಪಾಲಂಕಾರ, ತಿರುಪತಿ ಶ್ರೀನಿವಾಸದೇವರ ಶೇಷವಸ್ತ್ರ ಸಮರ್ಪಣೆ, ಮಂಗಳಾರತಿ ಮಾಡಿದರು.

ಸುವರ್ಣ ರಥದಲ್ಲಿ ರಾಯರ ಮೂರ್ತಿಯನ್ನು ಇರಿಸಿ ಭಕ್ತ ಸಮೂಹದೊಂದಿಗೆ ರಥೋತ್ಸವ ನಡೆಸಲಾಯಿತು. ವಿವಿಧೆಡೆಯಿಂದ ನೂರಾರು ಮಂದಿ ಭಕ್ತರು ಉತ್ಸವದಲ್ಲಿ ಭಾಗವಹಿಸಿದ್ದರು.

ಒಳನೋಟ
ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ
https://bit.ly/3ZmVuh3

ಪೂರ್ವದಿಂದ ಪಶ್ಚಿಮಕ್ಕೆ ಮತ್ತೊಂದು ಯಾತ್ರೆ

ಪ್ರಧಾನಿಗೆ ಅದಾನಿ ಜೊತೆಗೆ ಇರುವ ನಂಟೇನು ಎಂಬ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಿಲ್ಲ: ರಾಹುಲ್ ಗಾಂಧಿ



ರಾಯಪುರದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಮಹಾಧಿವೇಶನ –ಪಿಟಿಐ ಚಿತ್ರ

ರಾಯಪುರ (ಪಿಟಿಐ): ‘ಭಾರತ್ ಜೋಡೊ’ ಯಾತ್ರೆಯ ಯಶಸ್ಸಿನ ಬಳಿಕ ಅದೇ ರೀತಿಯ ಮತ್ತೊಂದು ಯಾತ್ರೆ ಹಮ್ಮಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ. ದೇಶದ ಪೂರ್ವ ಗಡಿಯಿಂದ ಪಶ್ಚಿಮ ಗಡಿಯವರೆಗೆ ಯಾತ್ರೆ ನಡೆಸುವ ವಿಚಾರವನ್ನು ಪಕ್ಷ ಪರಿಶೀಲಿಸುತ್ತಿದೆ ಎಂದು ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಭಾನುವಾರ ಹೇಳಿದ್ದಾರೆ.

ಅರುಣಾಚಲ ಪ್ರದೇಶದ ಪಾಸಿಘಾಟ್‌ನಿಂದ ಗುಜರಾತ್‌ನ ಪೋರಬಂದರ್ ತೀರದವರೆಗೆ ಯಾತ್ರೆ ಹಮ್ಮಿಕೊಳ್ಳುವ ಸಾಧ್ಯತೆಯಿದ್ದು, ಯಾತ್ರೆಯ ಸ್ವರೂಪವು ‘ಭಾರತ್ ಜೋಡೊ ಯಾತ್ರೆ’ಗಿಂತ ಭಿನ್ನವಾಗಿ ಇರಲಿದೆ ಎಂದು ಅವರು ಹೇಳಿದ್ದಾರೆ.

‘ಈ ಯಾತ್ರೆಗೆ ಹೆಚ್ಚಿನ ಸೌಕರ್ಯಗಳ ಅಗತ್ಯ ಇರುವುದಿಲ್ಲ ಹಾಗೂ ಕಡಿಮೆ ಸಂಖ್ಯೆಯ ಯಾತ್ರಾರ್ಥಿಗಳು ಇರಲಿದ್ದಾರೆ. ಇದು ಸಹ ಪಾದಯಾತ್ರೆ ರೂಪದಲ್ಲಿ ಇರಲಿದೆ. ಆದರೆ, ಯಾತ್ರೆ ಮಾರ್ಗದಲ್ಲಿ ಕಣಿವೆ, ಅರಣ್ಯ ಹಾಗೂ ನದಿಗಳು ಎದುರಾಗುತ್ತವೆ. ಹೀಗಾಗಿ ಯಾತ್ರೆಯು ಬಹುಮಾದರಿಯ ಸ್ವರೂಪದಲ್ಲಿ ಇರಲಿದೆ’ ಎಂದಿದ್ದಾರೆ. ಜೂನ್ ಅಥವಾ ನವೆಂಬರ್ ಬಳಿಕ ಯಾತ್ರೆ ಶುರುವಾಗುವ ಸಾಧ್ಯತೆಯಿದೆ.

‘ಭಾರತ್ ಜೋಡೊ’ ಯಾತ್ರೆ ರೀತಿಯ ಮತ್ತೊಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ರಾಹುಲ್ ಅಧಿವೇಶನದಲ್ಲಿ ಪಕ್ಷಕ್ಕೆ ಮನವಿ ಮಾಡಿದರು.

ಈಸ್ಟ್ ಇಂಡಿಯಾ ಕಂಪನಿಗೆ ಹೋಲಿಕೆ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಅದಾನಿ ಸಮೂಹವನ್ನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಜೊತೆಗೆ ಹೋಲಿಸಿದ್ದಾರೆ. ಸತ್ಯ ಹೊರ ಬರುವವರೆಗೂ ಅದಾನಿ ಸಮೂಹದ ವ್ಯಾವಹಾರಿಕ ಚಟುವಟಿಕೆಗಳನ್ನು ಪಕ್ಷ ಪ್ರಶ್ನಿಸುತ್ತಲೇ ಇರುತ್ತದೆ ಎಂದಿದ್ದಾರೆ.

ಮಹಾಧಿವೇಶನದಲ್ಲಿ ಭಾನುವಾರ ಮಾತನಾಡಿದ ರಾಹುಲ್, ‘ಅದಾನಿಗೂ ಪ್ರಧಾನಿ ಅವರಿಗೂ ಇರುವ ಸಂಬಂಧ ವೇನು ಎಂದು ಸಂಸತ್ತಿನಲ್ಲಿ ನಾವು ಪ್ರಶ್ನೆ ಮಾಡಿದೆವು. ಆದರೆ ನಮ್ಮ ಇಡೀ ಭಾಷಣವನ್ನು ತೆಗೆದುಹಾಕಲಾಯಿತು. ಸತ್ಯ ಬಹಿರಂಗವಾಗುವವರೆಗೆ ಸಂಸತ್ತಿನಲ್ಲಿ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಿಲ್ಲ’ ಎಂದು ಹೇಳಿದರು.

‘ದೇಶದ ಎಲ್ಲ ಸಂಪತ್ತನ್ನು ಕೊಳ್ಳೆ ಹೊಡೆದ ಒಂದು ಕಂಪನಿಯ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಇತಿಹಾಸ ಮರುಕಳಿಸುತ್ತಿದೆ. ದೇಶದ ವಿರುದ್ಧ ಕಂಪನಿಯೊಂದು ಕೆಲಸ ಮಾಡುತ್ತಿದೆ. ಆ ಕಂಪನಿಯ ದೇಶವಿರೋಧಿ ಯತ್ನದ ವಿರುದ್ಧ ಇಡೀ ಪಕ್ಷ ನಿಲ್ಲಲಿದೆ’ ಎಂದು ಈಸ್ಟ್ ಇಂಡಿಯಾ ಕಂಪನಿ ಹಾಗೂ ಅದಾನಿ ಸಮೂಹವನ್ನು ಹೋಲಿಸಿ ರಾಹುಲ್ ಅವರು ಹೇಳಿದರು.

ಕ್ಷಮೆ ಕೇಳಿದ ಕಾಂಗ್ರೆಸ್: ಮಹಾಧಿವೇಶನದ ಕುರಿತು ನೀಡಲಾಗಿದ್ದ ಪತ್ರಿಕಾ ಜಾಹೀರಾತಿನಲ್ಲಿ ಭಾರತದ ಮೊದಲ ಶಿಕ್ಷಣ ಸಚಿವ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಅವರ ಚಿತ್ರವನ್ನು ಕೈಬಿಟ್ಟದ್ದಕ್ಕೆ ಕಾಂಗ್ರೆಸ್ ಭಾನುವಾರ ಕ್ಷಮೆ ಯಾಚಿಸಿದೆ.

‘ಇದು ಕ್ಷಮಿಸಲಾಗದ ವಿಚಾರ. ಇದಕ್ಕೆ ಕಾರಣರಾದವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ಮಹಾತ್ಮ ಗಾಂಧೀಜಿ, ಜವಾಹರ್‌ಲಾಲ್ ನೆಹರೂ, ಸರ್ದಾರ್ ಪಟೇಲ್, ಬಿ.ಆರ್. ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್, ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ನರಸಿಂಹ ರಾವ್ ಹಾಗೂ ಸರೋಜಿನಿ ನಾಯ್ಡು ಅವರ ಚಿತ್ರಗಳನ್ನು ಜಾಹೀರಾತಿನಲ್ಲಿ ಪ್ರಕಟಿಸಲಾಗಿತ್ತು. ಆದರೆ ಆಜಾದ್ ಅವರ ಚಿತ್ರ ಕೈಬಿಟ್ಟಿದ್ದಕ್ಕೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು.

‘ಆಜಾದ್ ಅವರದ್ದು ಸ್ಫೂರ್ತಿದಾಯಕ ವ್ಯಕ್ತಿತ್ವ. ಅವರು ಎಂದಿಗೂ ಸ್ಮರಣೀಯರು’ ಎಂದು ಕಾಂಗ್ರೆಸ್ ಹೇಳಿದೆ.

ನಮ್ಮ ಮುಂದೆ ಇಂದು ಹಲವು ಸವಾಲುಗಳಿವೆ. ಒಗ್ಗಟ್ಟು, ಶಿಸ್ತು ಹಾಗೂ ದೃಢತೆ ಇಂದಿನ ಅಗತ್ಯ. ಮಹಾಧಿವೇಶನವು ‘ಹೊಸ ಕಾಂಗ್ರೆಸ್’ನ ಆರಂಭಕ್ಕೆ ನಾಂದಿ ಹಾಡಿದೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ತನಿಖಾ ಸಂಸ್ಥೆಗಳನ್ನು ಮುಂದಿಟ್ಟುಕೊಂಡು ಛತ್ತೀಸಗಡದ ಕಾಂಗ್ರೆಸ್ ಮುಖಂಡರನ್ನು ಬೆದರಿಸಲಾಗುತ್ತಿದೆ. ರಾಜ್ಯದ ಬೆಳವಣಿಗೆಯನ್ನು ಕೇಂದ್ರ ಸಹಿಸುತ್ತಿಲ್ಲ

ಪ್ರಿಯಾಂಕಾ ಗಾಂಧಿ ವಾದ್ರಾ
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸೋನಿಯಾ ನಿವೃತ್ತಿ ವದಂತಿಗೆ ತೆರೆ

ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗುವುದಿಲ್ಲ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪಕ್ಷದ ಮುಖಂಡರಿಗೆ ತಿಳಿಸಿದ್ದಾರೆ ಎಂದು ಪಕ್ಷದ ನಾಯಕಿ ಅಲಕಾ ಲಾಂಬಾ ಅವರು ಭಾನುವಾರ ಹೇಳಿದ್ದಾರೆ. ಮಹಾಧಿವೇಶನದಲ್ಲಿ ಸೋನಿಯಾ ಅವರು ಶನಿವಾರ ಮಾಡಿದ್ದ ಭಾಷಣವು ನಿವೃತ್ತಿಯ ಚರ್ಚೆಯನ್ನು ಹುಟ್ಟುಹಾಕಿತ್ತು.

ಮಹಾಧಿವೇಶನದಲ್ಲಿ ಮಾತನಾಡಿದ ಲಾಂಬಾ, ‘ಮಾಧ್ಯಮಗಳು ನಿವೃತ್ತಿಯ ಬಗ್ಗೆ ಚರ್ಚಿಸುತ್ತಿರುವ ವಿಚಾರವನ್ನು ಸೋನಿಯಾ ಅವರ ಗಮನಕ್ಕೆ ತಂದೆ. ಆದರೆ, ರಾಜಕೀಯದಿಂದ ನಿವೃತ್ತಿಯಾಗುವುದಿಲ್ಲ ಎಂಬುದನ್ನು ಅವರು ತಿಳಿಸಿದರು’ ಎಂದು ಲಾಂಬಾ ಹೇಳಿದರು. ಲಾಂಬಾ ಅವರು ಈ ಮಾತು ಹೇಳುತ್ತಿದ್ದಾಗ ಸೋನಿಯಾ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

‘ಸೋನಿಯಾ ಅವರ ಆಶೀರ್ವಾದ ಹಾಗೂ ಮಾರ್ಗದರ್ಶನ ನಮ್ಮ ಜತೆ ಇರಲಿದೆ. ಅವರಿಗೆ ಧನ್ಯವಾದ. ನಿವೃತ್ತಿಯ ವಿಚಾರಕ್ಕೆ ಪ್ರಚಾರ ಕೊಡಬೇಡಿ ಎಂದು ಮಾಧ್ಯಮಗಳಲ್ಲಿ ಮನವಿ ಮಾಡುತ್ತೇನೆ’ ಎಂದು ಲಾಂಬಾ ಹೇಳಿದ್ದಾರೆ.

ಅದಾನಿ: ಪ್ರತಿಭಟನೆಗೆ ನಿರ್ಧಾರ

ಮುಂದಿನ ಮೂರು ತಿಂಗಳಲ್ಲಿ ಅದಾನಿ ಸಮೂಹದ ವಿರುದ್ಧ ಸರಣಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾಂಗ್ರೆಸ್ ಮಹಾಧಿವೇಶನ ನಿರ್ಧರಿಸಿದೆ. ಕೇಂದ್ರ ಸರ್ಕಾರ ಬೆಂಬಲಿಸುತ್ತಿರುವ ಎಲ್ಲ ರೀತಿಯ ಸ್ವಜನ ಪಕ್ಷಪಾತ ನಿಲುವುಗಳ ಬಗ್ಗೆ ಜನಜಾಗೃತಿ ಮೂಡಿಸಲು ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

- ಮಾರ್ಚ್ 6: ದೇಶದಾದ್ಯಂತ ಎಸ್‌ಬಿಐ ಹಾಗೂ ಎಲ್‌ಐಸಿ ತಾಲ್ಲೂಕು ಮಟ್ಟದ ಕಚೇರಿಗಳ ಎದುರು ಪ್ರತಿಭಟನೆ
- ಮಾರ್ಚ್ 13: ದೇಶದಾದ್ಯಂತ ರಾಜಭವನಗಳಿಗೆ ಘೇರಾವ್
- ಮಾರ್ಚ್ ಕೊನೆ-ಏಪ್ರಿಲ್‌ನಲ್ಲಿ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ‘ಪರ್ದಾ ಫಾಸ್’ (ಮುಖವಾಡ ಕಳಚಿ) ಪ್ರತಿಭಟನೆ

ಕೊಳ್ಳೇಗಾಲದ ಕವಿಯ ಜೋಗುಳ ಹಾಡಿಗೆ ಮೋದಿ ಮೆಚ್ಚುಗೆ



ಬಿ.ಎಂ. ಮಂಜುನಾಥ್

ಚಾಮರಾಜನಗರ: ಸರ್ದಾರ್ ವಲ್ಲಭ ಬಾಯಿ ಪಟೇಲ್ ಅವರ ಜನ್ಮ ದಿನದ ಅಂಗವಾಗಿ ಆಚರಿಸಲಾಗುವ ಏಕತಾ ದಿನದ ಪ್ರಯುಕ್ತ ಕೇಂದ್ರ ಸರ್ಕಾರ ಆಯೋಜಿಸಿದ್ದ ‘ಜೋಗುಳ ಗೀತ ರಚನೆ ಸ್ಪರ್ಧೆ’ಯಲ್ಲಿ ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನ ಗಳಿಸಿರುವ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕವಿ ಬಿ.ಎಂ. ಮಂಜುನಾಥ ಅವರನ್ನು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

‘ಆಕಾಶವಾಣಿಯಲ್ಲಿ ಭಾನುವಾರ ಪ್ರಸಾರವಾದ ಮನ್ ಕಿ ಬಾತ್‌ನ 98ನೇ ಆವೃತ್ತಿಯಲ್ಲಿ ಈ ಸ್ಪರ್ಧೆಯ ಬಗ್ಗೆ ಉಲ್ಲೇಖಿಸಿದ ಮೋದಿ, ‘ರಾಷ್ಟ್ರ ಮಟ್ಟದ ಮೊದಲ ಬಹುಮಾನವನ್ನು ಚಾಮರಾಜನಗರ ಜಿಲ್ಲೆಯ ಬಿ.ಎಂ. ಮಂಜುನಾಥ ಪಡೆದಿದ್ದಾರೆ. ಕನ್ನಡದಲ್ಲಿ ಅವರು ಬರೆದಿರುವ ‘ಮಲಗು ಕಂದ’ ಹಾಡಿಗೆ ಬಹುಮಾನ ದೊರಕಿದೆ. ಅವರು ಮಗುವಾಗಿದ್ದಾಗ ತಾಯಿ, ಅಜ್ಜಿ ಹಾಡುತ್ತಿದ್ದ ಜೋಗುಳ ಹಾಡುಗಳೇ ಸ್ಫೂರ್ತಿಯಾಗಿವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಾಳಗುಣಸೆ ಗ್ರಾಮದ ಮಂಜುನಾಥ ವೃತ್ತಿಯಲ್ಲಿ ವಿಮಾ ಸಲಹೆಗಾರ. 4 ತಿಂಗಳ ಹಿಂದೆ ‘ಮಲಗು ಕಂದ’ ಜೋಗುಳ ಹಾಡನ್ನು ಆನ್‌ಲೈನ್‌ನಲ್ಲಿ ಸ್ಪರ್ಧೆಗೆ ಕಳುಹಿಸಿದ್ದರು. ಜಿಲ್ಲಾ ಮಟ್ಟದಿಂದ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿತ್ತು. ಅಲ್ಲಿ ಪ್ರಥಮ ಬಹುಮಾನ ಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿತ್ತು. ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನದೊಂದಿಗೆ ₹6 ಲಕ್ಷ ಬಹುಮಾನ ದೊರೆತಿದೆ.

ಬಂಧನವು ಸರ್ವಾಧಿಕಾರದ ಪರಮಾವಧಿ: ಎಎಪಿ

ನವದೆಹಲಿ (ಪಿಟಿಐ): ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರನ್ನು ಅಬಕಾರಿ ನೀತಿ ಜಾರಿ ಹಗರಣದಲ್ಲಿ ಸಿಬಿಐ ಬಂಧಿಸಿರುವುದು ‘ಸರ್ವಾಧಿಕಾರದ ಪರಮಾವಧಿ’ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ಆರೋಪಿಸಿದೆ.

‘ಅತ್ಯುತ್ತಮ ವ್ಯಕ್ತಿ ಹಾಗೂ ಉತ್ತಮ ಶಿಕ್ಷಣ ಸಚಿವರನ್ನು ಬಂಧಿಸಿರುವುದು ಸರಿಯಲ್ಲ. ಪ್ರಧಾನಿ ನರೇಂದ್ರ ಮೋದಿ ಅವರನ್ನು ದೇವರು ಕ್ಷಮಿಸುವುದಿಲ್ಲ. ನಿಮ್ಮ ಸರ್ವಾಧಿಕಾರ ಒಂದು ದಿನ ಕೊನೆಯಾಗಲಿದೆ’ ಎಂದು ಎಎಪಿ ಸಂಸದ ಸಂಜಯ್ ಸಿಂಗ್ ಹೇಳಿದ್ದಾರೆ.

ಎಎಪಿ ಹಾಗೂ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜನಪ್ರಿಯತೆಯಿಂದ ಬಿಜೆಪಿ ದಿಗಿಲುಗೊಂಡಿದೆ ಎಂದು ಎಎಪಿ ಶಾಸಕಿ ಆತಿಶಿ ಹೇಳಿದ್ದಾರೆ. ‘ಸಿಸೋಡಿಯಾ ವಿರುದ್ಧದ ಪ್ರಕರಣ ಸುಳ್ಳು. ಸುಳ್ಳು ಪ್ರಕರಣಗಳು, ಶೋಧ ಹಾಗೂ ಬಂಧನದ ಮೂಲಕ ಎಎಪಿ ಮುಖಂಡರನ್ನು ಸುಮ್ಮನಿರಿಸುವ ಹಾಗೂ ಬೆದರಿಸುವ ಯತ್ನ ಮಾಡಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

ಕೇಂದ್ರದ ಬಿಜೆಪಿ ಸರ್ಕಾರವು ಆಯ್ದ ಜನರನ್ನು ಗುರಿಯಾಗಿಸಿ ದಾಳಿ ನಡೆಸುತ್ತಿದೆ ಎಂದು ಸಚಿವ ಗೋಪಾಲ್ ರಾಯ್ ಆರೋಪಿಸಿದ್ದಾರೆ.

‘ಅದಾನಿಗೆ ₹2.5 ಲಕ್ಷ ಕೋಟಿ ಸಾಲ ನೀಡಲಾಗಿದೆ. ಅದರಲ್ಲಿ ₹80 ಸಾವಿರ ಕೋಟಿ ಮನ್ನಾ ಮಾಡಲಾಗಿದೆ. ಅದಾನಿ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲು ಸಿಸೋಡಿಯಾ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ರಾಯ್ ಆರೋಪಿಸಿದ್ದಾರೆ.

ಕೇಜ್ರಿವಾಲ್ ಅವರ ಆಡಳಿತ ಮಾದರಿಯಿಂದ ಹೆದರಿರುವ ಬಿಜೆಪಿ, ದೆಹಲಿಯ ಶಿಕ್ಷಣ ಮಾದರಿಯನ್ನು ದುರ್ಬಲಗೊಳಿಸಲು ಮುಂದಾಗಿದೆ ಎಂದು ಪಕ್ಷದ ವಕ್ತಾರ ಸೌರಭ್ ಭಾರದ್ವಾಜ್ ಅವರು ಹೇಳಿದ್ದಾರೆ.

ಕೇಜ್ರಿವಾಲ್ ಟೀಕೆ

ಸಿಸೋಡಿಯಾ ಅವರು ಪ್ರಾಮಾಣಿಕರಾಗಿದ್ದು, ಅವರನ್ನು ಬಂಧಿಸಿರುವುದು ಕೊಳಕು ರಾಜಕೀಯವನ್ನು ತೋರಿಸುತ್ತದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಅವರ ಬಂಧನದಿಂದ ಜನರಲ್ಲಿ ಆಕ್ರೋಶ ಮನೆಮಾಡಿದೆ. ಜನರು ಎಲ್ಲರನ್ನೂ ಅರ್ಥ ಮಾಡಿಕೊಂಡಿದ್ದಾರೆ. ಇದಕ್ಕೆ ತಕ್ಕ ಪ್ರತಿಕ್ರಿಯೆ ನೀಡಲಿದ್ದಾರೆ. ಈ ಘಟನೆಯಿಂದ ನಮ್ಮ ಚೈತನ್ಯ ಹೆಚ್ಚಿದೆ. ಹೋರಾಟಕ್ಕೆ ಮತ್ತಷ್ಟು ಬಲ ಬಂದಿದೆ’ ಎಂದು ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ.

ಗುಡಿಸಲಿಗೆ ಬೆಂಕಿ; ವೃದ್ಧ ದಂಪತಿ ಸಜೀವ ದಹನ

ಚಡಚಣ (ವಿಜಯಪುರ ಜಿಲ್ಲೆ): ಪಟ್ಟಣದ ಹೊರ ವಲಯದ ನಿವರಗಿ ರಸ್ತೆಗೆ ಹೊಂದಿಕೊಂಡಿರುವ ಗುಡಿಸಲಿಗೆ ಭಾನುವಾರ ಬೆಂಕಿ ತಗುಲಿ ವೃದ್ಧ ದಂಪತಿ ಸಜೀವ ದಹನವಾಗಿದ್ದಾರೆ.

ಕರೀಂಸಾಬ್ ಇಮಾಮಸಾಬ್ ಟಪಾಲ್(82) ಹಾಗೂ ಸಾಜನಬಿ ಟಪಾಲ್(72) ಬೆಂಕಿಗಾಹುತಿಯಾದವರು. ‘ತಮ್ಮ ತೋಟದ ಗುಡಿಸಲಿನಲ್ಲಿ ವಾಸವಾಗಿದ್ದ ದಂಪತಿ, ರಾತ್ರಿ ಎಣ್ಣೆ ದೀಪ ಹಚ್ಚಿಟ್ಟಿದ್ದರು. ಅದೇ ದೀಪ ಗುಡಿಸಲಿಗೆ ತಗುಲಿ ಬೆಂಕಿ ಹೊತ್ತಿರಬಹುದು’ ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಮನೆಯಲ್ಲಿದ್ದ ದವಸ,ಧಾನ್ಯಗಳು ಹಾಗೂ ನಿತ್ಯ ಬಳಕೆಯ ಎಲ್ಲ ವಸ್ತುಗಳು ಸುಟ್ಟು ಕರಕಲಾಗಿವೆ. ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನಲ್ಲಿ ಡಾ.ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಅಭಿಮತ

‘ಬೌದ್ಧ ದೇಶ ಗುರಿ: ಜನಗಣತಿಯಲ್ಲಿ ಸೇರಿಸಿ’

ಪ್ರಜಾವಾಣಿ ವಾರ್ತೆ



ಮೈಸೂರಿನಲ್ಲಿ ಭಾನುವಾರ ಭಾರತೀಯ ಬೌದ್ಧ ಮಹಾಸಭಾ ಆಯೋಜಿಸಿದ್ದ ರಾಜ್ಯ ಮಟ್ಟದ ಬೌದ್ಧ ಮಹಾಸಮ್ಮೇಳನದ ‘ಧಮ್ಮ ನಡಿಗೆ’ಯಲ್ಲಿ ಡಾ.ಭೀಮರಾವ್ ಯಶವಂತರಾವ್ ಅಂಬೇಡ್ಕರ್, ಬಂತೇಜಿಗಳು ಮತ್ತು ಸಮತಾ ಸೈನಿಕ ದಳದವರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮೈಸೂರು: ‘ಧರ್ಮ ಪ್ರಚಾರ, ಪರಿವರ್ತನೆ ಮೂಲಕ ಭಾರತವನ್ನು ಬೌದ್ಧ ದೇಶವಾಗಿಸುವುದೇ ನಮ್ಮ ಗುರಿ’ ಎಂದು ಡಾ.ಬಿಆರ್.ಅಂಬೇಡ್ಕರ್ ಮೊಮ್ಮಗ ಡಾ.ಭೀಮರಾವ್ ಯಶವಂತ ರಾವ್ ಅಂಬೇಡ್ಕರ್ ಹೇಳಿದರು.

ಇಲ್ಲಿನ ಲಲಿತಮಹಲ್ ಅರಮನೆ ಸಮೀಪದ ಮೈದಾನದಲ್ಲಿ ಭಾನುವಾರ ನಡೆದ ‘ರಾಜ್ಯ ಮಟ್ಟದ ಬೌದ್ಧ ಮಹಾಸಮ್ಮೇಳನ’ ಉದ್ಘಾಟಿಸಿ ಮಾತನಾಡಿದರು.

‘ಪರಿಶಿಷ್ಟರು, ಹಿಂದುಳಿದವರು ಮುಂದಿನ ಜನಗಣತಿ ವೇಳೆ ಧರ್ಮ ಎಂಬಲ್ಲಿ ‘ಬೌದ್ಧ ಧರ್ಮ’ ಎಂದು ದಾಖಲಿಸಬೇಕು. ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ, ಗೋವಾ ಸೇರಿದಂತೆ ದಕ್ಷಿಣದ ರಾಜ್ಯಗಳಲ್ಲಿ ಬೌದ್ಧ ಧರ್ಮ ದುರ್ಬಲವಾಗಿದೆ. 1956 ರಲ್ಲಿ ಡಾ.ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರಗೊಂಡಾಗ ದೇಶವನ್ನೇ ಬೌದ್ಧದೇಶವಾಗಿ ಪರಿವರ್ತಿಸುವ ಗುರಿ ಇರಿಸಿಕೊಂಡಿದ್ದರು. ಅವರ ಆಶಯವನ್ನು ಈಡೇರಿಸಬೇಕು’ ಎಂದು ಅವರು ಹೇಳಿದರು.

‘ಬೌದ್ಧಧರ್ಮವೇ ದೇಶದ ಬುನಾದಿ. ಸಂಸತ್ ಭವನ, ರಾಷ್ಟ್ರಪತಿ ಭವನಗಳಲ್ಲಿ ಭಗವಾನ್ ಬುದ್ಧನ ಪ್ರತಿಮೆ, ರಾಷ್ಟ್ರಧ್ವಜದಲ್ಲಿ ಧರ್ಮಚಕ್ರ, ಧ್ವಜಸ್ತಂಭದಲ್ಲಿ ಸ್ತೂಪದ ಸಿಂಹಮುಖಗಳು ಹೀಗೆ... ಎಲ್ಲದರಲ್ಲೂ ಹಲವರ ವಿರೋಧದ ನಡುವೆಯೂ ಡಾ.ಅಂಬೇಡ್ಕರ್ ಬೌದ್ಧ ಧರ್ಮದ ಲಾಂಛನ ದಾಖಲಿಸಿದ್ದಾರೆ’ ಎಂದು ತಿಳಿಸಿದರು.

ಮೈಸೂರಿನಲ್ಲಿ ಬುದ್ಧ ವಿಹಾರ: ‘ಬೆಂಗಳೂರಿನಲ್ಲಿ ಮೈಸೂರು ಅರಸರು ಡಾ.ಅಂಬೇಡ್ಕರ್ ಅವರಿಗೆ ಉಡುಗೊರೆಯಾಗಿ ನೀಡಿದ್ದ 5 ಎಕರೆ ಜಾಗವನ್ನು ಅವರು ಬುದ್ಧ ವಿಹಾರ ನಿರ್ಮಿಸಲು ಮೀಸಲಿರಿಸಿದ್ದರು. ಅಲ್ಲಿ ಬುದ್ಧ ಬಿಕ್ಕು, ಬಂತೇಜಿಗಳ ವಿಹಾರ, ಶಾಲೆ, ತರಬೇತಿ ಕೇಂದ್ರಗಳಿವೆ. ಜಾಗದಲ್ಲಿ ವ್ಯಾಜ್ಯವೂ ಇದೆ. ಇವೆಲ್ಲವನ್ನೂ ಪುನರುತ್ಥಾನಗೊಳಿಸಬೇಕು. ಮೈಸೂರಿನಲ್ಲಿ ಬುದ್ಧವಿಹಾರ ಇಲ್ಲ. ಇಲ್ಲಿ ನಿವೇಶನ ಲಭ್ಯವಿದ್ದರೆ ಭಾರತೀಯ ಬುದ್ಧ ಮಹಾಸಭಾದ ಮೂಲಕ ವಿಹಾರ, ಶಾಲೆ, ತರಬೇತಿ ಕೇಂದ್ರ ನಿರ್ಮಿಸಬೇಕು. ಬೌದ್ಧ ಧರ್ಮದತ್ತ ಜನರ ಮನ ಪರಿವರ್ತನೆಗೆ ಮುಂದಾಗಬೇಕು ಹಾಗೂ ಪ್ರಚಾರವನ್ನೂ ನಡೆಸಬೇಕು’ ಎಂದರು.

ಉರಿಲಿಂಗ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಬಂತೇಜಿಗಳು, ಮುಖಂಡರು ಇದ್ದರು.

ಧಮ್ಮ ನಡಿಗೆ: ಇದಕ್ಕೂ ಮುನ್ನ ಪುರಭವನದ ಎದುರಿನ ಅಂಬೇಡ್ಕರ್ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ಯಶವಂತರಾವ್ ಅಂಬೇಡ್ಕರ್ ನೂರಾರು ಮಂದಿ ಯೊಂದಿಗೆ ಸಮಾರಂಭದ ವೇದಿಕೆಯವರೆಗೂ (5.ಕಿ.ಮೀ.) ‘ಧಮ್ಮ ನಡಿಗೆ’ಯಲ್ಲಿ ಪಾಲ್ಗೊಂಡರು.

ವಿಪಕ್ಷ ಒಗ್ಗಟ್ಟು: ‘ಕೈ’ ಸಂಕಲ್ಪ

ಒಂದನೇ ಪುಟದಿಂದ...

ಬಿಜೆಪಿ ವಿರೋಧಿ ಪಕ್ಷಗಳು ಒಟ್ಟಾದರೆ ಅದರ ನೇತೃತ್ವ ವಹಿಸಿಕೊಳ್ಳುವುದರ ಕುರಿತು ಖಚಿತವಾಗಿ ಏನನ್ನೂ ಹೇಳಿಲ್ಲ. ಆದರೆ, ಬಿಜೆಪಿ-ಆರ್‌ಎಸ್‌ಎಸ್ ಹಾಗೂ ಅವುಗಳ ತುಚ್ಛ ರಾಜಕಾರಣದ ಜೊತೆಗೆ ಯಾವತ್ತೂ ರಾಜಿ ಮಾಡಿಕೊಳ್ಳದ ಏಕೈಕ ಪಕ್ಷ ಕಾಂಗ್ರೆಸ್ ಮಾತ್ರ ಎಂಬುದನ್ನು ಒತ್ತು ನೀಡಿ ಹೇಳಲಾಗಿದೆ. ಬಿಜೆಪಿಯ ಸರ್ವಾಧಿಕಾರಿ, ಕೋಮುವಾದಿ ಮತ್ತು ಸ್ವಜನಪಕ್ಷಪಾತದ ವಿರುದ್ಧ ಸದಾ ಹೋರಾಡಿ ರಾಜಕೀಯ ಮೌಲ್ಯಗಳನ್ನು ಸಂರಕ್ಷಿಸುವ ಭರವಸೆಯನ್ನೂ ನೀಡಿದೆ.

‘ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ತೀವ್ರಗೊಳ್ಳುತ್ತಿರುವ ಸಾಮಾಜಿಕ ಧ್ರುವೀಕರಣ ಮತ್ತು ದಟ್ಟವಾಗುತ್ತಿರುವ ರಾಜಕೀಯ ನಿರಂಕುಶತ್ವವು ದೇಶ ಎದುರಿಸುತ್ತಿರುವ ಪ್ರಮುಖ ಸವಾಲುಗಳಾಗಿವೆ’ ಎಂದು ಗುರುತಿಸಿರುವ ಕಾಂಗ್ರೆಸ್, ಸಂವಿಧಾನದ ರಕ್ಷಣೆಗೆ ಕಟಿಬದ್ಧ ಎಂದಿದೆ.

ಕರ್ನಾಟಕ, ಛತ್ತೀಸಗಢ, ಮಧ್ಯ ಪ್ರದೇಶ, ಮಿಜೋರಾಂ, ರಾಜಸ್ಥಾನ ಮತ್ತು ತೆಲಂಗಾಣ ವಿಧಾನಸಭೆಗಳಿಗೆ ‘ಮಹತ್ವ’ದ ಚುನಾವಣೆ ನಡೆಯಲಿದೆ. ಹಾಗಾಗಿ, ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ‘ಶಿಸ್ತು ಮತ್ತು ಸಂಪೂರ್ಣ ಒಗ್ಗಟ್ಟಾಗಿ ಇರಬೇಕು’. ಈ ಚುನಾವಣೆಗಳು ಲೋಕಸಭೆಗೆ 2024ರಲ್ಲಿ ನಡೆಯಲಿರುವ ಚುನಾವಣೆ ಮೇಲೆ ಪರಿಣಾಮ ಬೀರಬಹುದು ಎಂದೂ ಘೋಷಣೆಯು ಹೇಳಿದೆ.

ವಯನಾಡ್ ಸಂಸದ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ ‘ಭಾರತ್ ಜೋಡೊ ಯಾತ್ರೆ’ಗೆ ರಾಯಪುರ ಘೋಷಣೆಯಲ್ಲಿ ಹೆಚ್ಚಿನ ಮಹತ್ವ ಸಿಕ್ಕಿದೆ. ಎಲ್ಲರನ್ನೂ ಒಳಗೊಳ್ಳುವ ಮತ್ತು ಪ್ರಗತಿಪರವಾದ ದೃಷ್ಟಿಕೋನವನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆದ ಯಾತ್ರೆಯು ಮುನ್ನೆಲೆಗೆ ತಂದಿದೆ ಎಂದು ಘೋಷಣೆಯು ಹೇಳಿದೆ.

ಸ್ವಜನ ಪಕ್ಷಪಾತದ ಅತ್ಯಂತ ಕೆಟ್ಟ ಉದಾಹರಣೆಯನ್ನು ಇಡೀ ದೇಶ ಮತ್ತು ಜಗತ್ತು ನೋಡುತ್ತಿದೆ. ಅದರ ವಿರುದ್ಧ ಜನಜಾಗೃತಿ ಅಭಿಯಾನವನ್ನು ನಡೆಸುವುದಾಗಿ ಪಕ್ಷವು ಘೋಷಿಸಿದೆ. ಅದಾನಿ ಸಮೂಹಕ್ಕೆ ಸಂಬಂಧಿಸಿದ ಪ್ರಕರಣವನ್ನು ಪರೋಕ್ಷವಾಗಿ ಉಲ್ಲೇಖಿಸಿ ಈ ಘೋಷಣೆ ಮಾಡಲಾಗಿದೆ.

‘ಪುನಶ್ಚೇತನಗೊಂಡ ಕಾಂಗ್ರೆಸ್‌ನ ನಿರೀಕ್ಷೆಯಲ್ಲಿ ಭಾರತವು ಇದೆ. ಜನರ ನಿರೀಕ್ಷೆಗಳನ್ನು ಪೂರೈಸುವ ಹೊಣೆಗಾರಿಕೆ ನಮ್ಮದಾಗಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ವಿಭಜಕ ರಾಜಕಾರಣವನ್ನು, ‘ಭಾರತ್ ಜೋಡೊ ಯಾತ್ರೆ’ಯು ಸೃಷ್ಟಿಸಿರುವ ಆಶಾಭಾವನೆಯ ಮೂಲಕ ಸೋಲಿಸಬೇಕು. ಹೆಚ್ಚು ಬಲವಾದ ಮತ್ತು ಒಗ್ಗಟ್ಟಿನಿಂದ ಕೂಡಿದ ದೇಶ ನಿರ್ಮಾಣದ ಸಾಮಾನ್ಯ ಗುರಿ ಮತ್ತು ದೃಢ ನಿಶ್ಚಯದೊಂದಿಗೆ ರಾಯಪುರ ಮಹಾಧಿವೇಶನ ಸಮಾರೋಪಗೊಳ್ಳುತ್ತಿದೆ’ ಎಂದು ಘೋಷಣೆಯಲ್ಲಿ ಹೇಳಲಾಗಿದೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಅವರು ಘೋಷಣೆಯನ್ನು ಓದಿದರು.

ಆಡಳಿತದ ಕುರಿತು...

ಒಂದನೇ ಪುಟದಿಂದ...

ಸಣ್ಣ ವರ್ತಕರಿಗೆ ಅನುಕೂಲವಾಗುವಂತೆ ಜಿಎಸ್‌ಟಿಯಲ್ಲಿ ಆಮೂಲಾಗ್ರ ಸುಧಾರಣೆ ತರಬೇಕು. ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರವನ್ನು ಇನ್ನೂ ಐದು ವರ್ಷ ವಿಸ್ತರಿಸಬೇಕು. ಉತ್ಪಾದನಾ ಗುರಿಗಳ ಜೊತೆಗೆ, ರೈತರು ಮತ್ತು ಕೃಷಿ ಕಾರ್ಮಿಕರನ್ನು ಕೇಂದ್ರ ಸ್ಥಾನದಲ್ಲಿ ಇರಿಸಿ ಕೃಷಿ ನೀತಿ ಮತ್ತು ಸುಧಾರಣೆಗಳನ್ನು ಜಾರಿಗೊಳಿಸಬೇಕು. ಸಾಲ ಪರಿಹಾರ, ಕನಿಷ್ಠ ಬೆಂಬಲ ಬೆಲೆ ಖಾತರಿಯಂತಹ ಕ್ರಮಗಳ ಮೂಲಕ ರೈತರ ಹಿತರಕ್ಷಣೆ ಮಾಡಬೇಕು. ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಗೆ ಕೃಷಿ ಉತ್ಪನ್ನ ಖರೀದಿಯನ್ನು ಶಿಕ್ಷಾರ್ಹ ಅಪರಾಧವಾಗಿಸಬೇಕು. ಬೆಂಬಲ ಬೆಲೆಯು ರೈತರ ಕಾನೂನುಬದ್ಧವಾದ ಹಕ್ಕಾಗಬೇಕು ಎಂದು ಘೋಷಣೆಯು ಪ್ರತಿಪಾದಿಸಿದೆ.



ಸಾಂದರ್ಭಿಕ ಚಿತ್ರ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ



ಎಸ್ಸೆಸ್ಸೆಲ್ಸಿ

ಸಾಂದರ್ಭಿಕ ಚಿತ್ರ

14) ಕಾರಣ ಕೊಡಿ

ಎ) ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಉತ್ತರ: ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣದಿಂದ ಮಿಶ್ರಣ ಹೊರಸಿಡಿದು ಸುಟ್ಟ ಗಾಯಗಳಾಗುವ ಅಪಾಯವಿದೆ, ಹಾಗೂ ಅತಿಯಾದ ತಾಪದಿಂದ ಗಾಜಿನ ಸಂಗ್ರಾಹಕ ಒಡೆಯುವ ಸಾಧ್ಯತೆ ಇದೆ, ಆದ್ದರಿಂದ ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಬಿ) ಪ್ಲಾಸ್ಟಿಕ್ ಉತ್ಪನ್ನಗಳ ಮರುಬಳಕೆಯು ಮರುಚಕ್ರೀಕರಣ ವಿಧಾನಕ್ಕಿಂತಲೂ ಉತ್ತಮ

ಉತ್ತರ:- ಮರುಚಕ್ರೀಕರಣದಲ್ಲಿ ಶಕ್ತಿಯ ಬಳಕೆಯಾಗುತ್ತದೆ, ಮರು ಬಳಕೆಯಲ್ಲಿ ಶಕ್ತಿಯ ಉಪಯೋಗವಾಗುವುದಿಲ್ಲ.

15) ಲೈಂಗಿಕ ರೀತಿಯ ಸಂತಾನೋತ್ಪತ್ತಿ ಏಕೆ ಅಗತ್ಯ?

ಉತ್ತರ:- ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ, ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟುಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು, ಅದರಲ್ಲಿ ಹೆಚ್ಚು ಸಂಕೀರ್ಣ ಜೀವಿಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಉತ್ತಮವಾದದ್ದು ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ. ಆದ್ದರಿಂದ, ರೂಪಾಂತರಗಳನ್ನು ಉಂಟುಮಾಡುವ ಪ್ರಕ್ರಿಯೆಯ ವೇಗ ಹೆಚ್ಚು ಅನಿವಾರ್ಯ.

ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟುಮಾಡುತ್ತದೆ. ಹೀಗೆ, ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ. ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ. ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ. ಆದರೆ ಇದು ದೊಡ್ಡ ತೊಂದರೆಯನ್ನು ಉಂಟುಮಾಡುತ್ತದೆ. ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎ ಯನ್ನು ಹೊಂದಿರಬೇಕಾಗುತ್ತದೆ. ಇದು ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವಿದೆ. ಈ ತೊಂದರೆಯನ್ನು ನಿವಾರಿಸಲು ಎಷ್ಟೋ ಮಾರ್ಗೋಪಾಯಗಳಿವೆ.

ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟ್ಯತೆಯು ಹೆಚ್ಚುತ್ತಾ ಹೋಗುತ್ತದೆ. ಸಂತಾನೋತ್ಪತ್ತಿ ನಡೆಸದ ದೇಹದಲ್ಲಿನ ಜೀವಕೋಶಗಳಿಗೆ ಹೋಲಿಸಿದರೆ ಕೇವಲ ಅರ್ಧದಷ್ಟು ಸಂಖ್ಯೆಯ ಕ್ರೋಮೋಸೋಮ್‌ಗಳನ್ನು ಮತ್ತು ಅರ್ಧದಷ್ಟು ಪ್ರಮಾಣದ ಡಿಎನ್‌ಎ ಯನ್ನು ಹೊಂದಿರುವ ಭಿನ್ನವಾದ ವಂಶಾವಳಿಯನ್ನು ಹೊಂದಿರುವ ಜೀವಕೋಶಗಳನ್ನು ವಿಶಿಷ್ಟ ಅಂಗಗಳಲ್ಲಿ ಹೊಂದುವುದು. ಮಿಯಾಸಿಸ್ ಕೋಶವಿಭಜನೆಯ ಮೂಲಕ ಇದನ್ನು ಸಾಧಿಸಲಾಗುತ್ತದೆ. ಲೈಂಗಿಕ ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ಜೀವಿಗಳ ಲಿಂಗ ಕೋಶಗಳು ಸಂಯೋಜಿಸಿ ಹೊಸ ಜೀವಿ ಉಂಟಾಗುತ್ತದೆ. ಇದರ ಪರಿಣಾಮವಾಗಿ ಹೊಸ ಪೀಳಿಗೆಯಲ್ಲಿ ಕ್ರೋಮೋಸೋಮ್‌ಗಳ ಸಂಖ್ಯೆಯಲ್ಲಿ ಮತ್ತು ಡಿಎನ್‌ಎ ಪ್ರಮಾಣದಲ್ಲಿ ಮರುಹೊಂದಾಣಿಕೆ ಉಂಟಾಗುತ್ತದೆ.

ಒಂದು ಯುಗ್ಮಜವು ಬೆಳೆದು ಹೆಚ್ಚು ವೈಶಿಷ್ಟ್ಯತೆಯನ್ನು ಹೊಂದಿರುವ ಅಂಗಾಂಶಗಳು ಮತ್ತು ಅಂಗಗಳಿರುವ ಜೀವಿಯಾಗಿ ಬೆಳವಣಿಗೆ (ಅಭಿವರ್ಧನೆ) ಹೊಂದಬೇಕಾದರೆ ಅದು ಸಾಕಷ್ಟು ಸಂಗ್ರಹಿತ ಶಕ್ತಿಯನ್ನು ಇದಕ್ಕಾಗಿ ಹೊಂದಿರಬೇಕು. ಅತ್ಯಂತ ಸರಳ ಜೀವಿಗಳಲ್ಲಿ ಎರಡು ಲಿಂಗಾಣುಗಳು ಪರಸ್ಪರ ಹೆಚ್ಚು ಭಿನ್ನತೆಯನ್ನು ಅಥವಾ ಸಾಮ್ಯತೆಯನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ದೇಹ ವಿನ್ಯಾಸ ಹೆಚ್ಚು ಸಂಕೀರ್ಣವಾದಂತೆ, ಲಿಂಗಾಣುಗಳೂ ಕೂಡಾ ವೈಶಿಷ್ಟ್ಯತೆಯನ್ನು ಪಡೆಯುತ್ತವೆ. ಒಂದು ಲಿಂಗಾಣುವು ದೊಡ್ಡದಾಗಿದ್ದು ಸಂಗ್ರಹಿತ ಆಹಾರ ಹೊಂದಿದ್ದರೆ ಇನ್ನೊಂದು ಚಿಕ್ಕದಾಗಿದ್ದು ಚಲನಶೀಲವಾಗಿರುತ್ತದೆ. ಸಾಂಪ್ರದಾಯಿಕವಾಗಿ ಚಲನಶೀಲ ಲಿಂಗಾಣುವನ್ನು ಗಂಡುಲಿಂಗಾಣು ಮತ್ತು ಸಂಗ್ರಹಿತ ಆಹಾರವನ್ನು ಹೊಂದಿರುವ ಲಿಂಗಾಣುವನ್ನು ಹೆಣ್ಣು ಲಿಂಗಾಣು ಎಂದು ಕರೆಯಲಾಗುತ್ತದೆ. ಇದರ ಮೂಲಕ ಹೊಸ ಜೀವಿಯ ಸೃಷ್ಟಿ ಕಾರ್ಯ ನಡೆಯುತ್ತದೆ.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತ ಶಾಸ್ತ್ರ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು.

ಪಿಯುಸಿ

54) $A = \begin{bmatrix} 5 \\ 4 \\ 3 \end{bmatrix}, B = \begin{bmatrix} 3 \\ -1 \\ 2 \end{bmatrix}$; ಆದರೆ $AB^T \neq A^T B$ ಎಂದು ತೋರಿಸಿ

ಪರಿಹಾರ: ದತ್ತ $A = \begin{bmatrix} 5 \\ 4 \\ 3 \end{bmatrix}$ and $B = \begin{bmatrix} 3 \\ -1 \\ 2 \end{bmatrix}$

$\therefore B^T = [3 \quad -1 \quad 2]$

$\Rightarrow AB^T = \begin{bmatrix} 5 \\ 4 \\ 3 \end{bmatrix} [3 \quad -1 \quad 2] \downarrow$

$= \begin{bmatrix} 15 & -5 & 10 \\ 12 & -4 & 8 \\ 9 & -3 & 6 \end{bmatrix}$

ಮತ್ತು $A^T = [5 \quad 4 \quad 3]$

$\Rightarrow A^T B = [5 \quad 4 \quad 3] \begin{bmatrix} 3 \\ -1 \\ 2 \end{bmatrix} \downarrow$

$= [15 - 4 + 6] = [17]$

ಹೀಗಾಗಿ $AB^T \neq A^T B$

55) R (2, 5, –3), S(–2, –3, 5), T(5, 3, –3) ಮೂಲಕ ಹಾದು ಹೋಗುವ ಸಮತಲದ ಸದಿಶ ರೂಪದ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ :

$\bar{a} = 2\hat{i} + 5\hat{j} - 3\hat{k}, \; \bar{b} = -2\hat{i} - 3\hat{j} + 5\hat{k}, \; \bar{c} = 5\hat{i} + 3\hat{j} - 3\hat{k}$ ಆಗಿರಲಿ

ಆಗ $\vec{a}, \vec{b}, \vec{c}$ ಗಳ ಮೂಲಕ ಹಾದು ಹೋಗುವ ಸಮತಲದ ಸದಿಶರೂಪವು,

$(\bar{r} - \bar{a}).(\overline{RS} \times \overline{RT}) = 0$

ಅಥವಾ

$(\bar{r} - \bar{a}).[(\bar{b} - \bar{a}) \times (\bar{c} - \bar{a})] = 0$

$$\left[\vec{r} - (2\hat{i} + 5\hat{j} - 3\hat{k})\right].\left[(-4\hat{i} - 8\hat{j} + 8\hat{k}) \times (3\hat{i} - 2\hat{j})\right] = 0$$

56) X = {1, 2, 3, 4, 5, 6, 7, 8, 9} ಎಂದಿರಲಿ. X ನ ಮೇಲೆ R1 = {(x, y) : x - y, 3ರಿಂದ ಭಾಗಿಸಲ್ಪಡುತ್ತದೆ} ಮತ್ತು ಇನ್ನೊಂದು ಸಂಬಂಧ X ನ ಮೇಲೆ R2 = {(x, y) : {x - y}⊂ {1,4,7} ಅಥವಾ {x, y} ⊂ {4, 5, 8} ಅಥವಾ {x, y} ⊂ {3,6,9} ಆಗಿರಲಿ. R1 = R2ಎಂದು ತೋರಿಸಿ.

ಪರಿಹಾರ: ಗಣಗಳಾದ {1,4,7}, {2,5,8} ಮತ್ತು {3,6,9}ಗಳ ಯಾವುದೇ ಎರಡು ಗಣಾಂಶಗಳ ವ್ಯತ್ಯಾಸವು 3 ರಿಂದ ಭಾಗಿಸಲ್ಪಡುತ್ತದೆ ಹೀಗಾಗಿ $(x, y) \in R1 \Rightarrow x - y$ ಯು 3ರ ಗುಣಲಬ್ಧವಾಗಿದೆ. $\Rightarrow \{x, y\} \subset \{1,4,7\}$. ಅಥವಾ

$\{x, y\} \subset \{2, 5, 8\}$ ಅಥವಾ

$\{x, y\} \subset \{3, 6, 9\} \Rightarrow \{x, y\} \in R2$

ಆದ್ದರಿಂದ R1 C R2

ಇದೇ ರೀತಿ $\{x, y\} \in R2 \Rightarrow \{x, y\} \subset \{1,4,7\}$ ಅಥವಾ $\{x, y\} \subset \{2, 5, 8\}$ ಅಥವಾ $\{x, y\} \subset \{3, 6, 9\} \Rightarrow x - y$ ಯು 3ರಿಂದ ಭಾಗಿಸಲ್ಪಡುತ್ತದೆ $\Rightarrow \{x, y\} \in R1 \Rightarrow R2 \subset R1$ ಎಂದು ತೋರಿಸುತ್ತದೆ.

ಆದ್ದರಿಂದ **R1 = R2** ಆಗುತ್ತದೆ.

57) ಕೆಳಗೆ ತೋರಿಸಿರುವ ಪಟ್ಟಿಯಲ್ಲಿ ಬಣ್ಣದ ಚೆಂಡಗಳನ್ನು 4 ಪ್ರತ್ಯೇಕ ಡಬ್ಬಗಳಲ್ಲಿ ಹಂಚಿಕೆ ಮಾಡಿದೆ

ಡಬ್ಬ	ಬಣ್ಣ			
	ಕಪ್ಪು	ಬಿಳಿಪು	ಕೆಂಪು	ನೀಲಿ
I	3	4	5	6
II	2	2	2	2
III	1	2	3	1
IV	4	3	1	5

ಒಂದು ಡಬ್ಬಿಯನ್ನು ಯಾದೃಚ್ಛಿಕವಾಗಿ ಆಯ್ಕೆಮಾಢಿದ ನಂತರ, ಆಯ್ಕೆಯಾದ ಡಬ್ಬದಿಂದ ಒಂದು ಚಂಡನ್ನು ಯಾದೃಚ್ಛಿಕವಾಗಿ ತೆಗೆಯಲಾಗಿದೆ. ಆ ಚೆಂಡಿನ ಬಣ್ಣ ಕಪ್ಪು ಆಗಿದ್ದು, ತೆಗೆದ ಚೆಂಡು 3ನೇ ಡಬ್ಬದಿಂದ ಆಗಿರುವ ಸಂಭವನೀಯತೆ ಎಷ್ಟು?

ಪರಿಹಾರ: A, E_1 , E_2 , E_3 ಮತ್ತು E_4 ಘಟನೆಗಳು ಕೆಳಗಿನಂತೆ ವ್ಯಾಖ್ಯಾನಿಸಲ್ಪಟಿವೆ:– A : ಕಪ್ಪು ಚಂಡನ್ನು ಆಯ್ಕೆ ಮಾಡಲಾಗಿದೆ

E_1 : ಡಬ್ಬ I ನ್ನು ಆಯ್ಕೆ ಮಾಡಿದೆ

E_2 : ಡಬ್ಬ II ನ್ನು ಆಯ್ಕೆ ಮಾಡಿದೆ

E_3 : ಡಬ್ಬ III ನ್ನು ಆಯ್ಕೆ ಮಾಡಿದೆ

E_4 : ಡಬ್ಬ IV ನ್ನು ಆಯ್ಕೆ ಮಾಡಿದೆ ಡಬ್ಬಗಳನ್ನು ಯಾದೃಚ್ಛಿಕವಾಗಿ ಆಯ್ಕೆಮಾಡಿದ್ದರಿಂದ,

$$P(E_1) = P(E_2) = P(E_3) = P(E_4) = \frac{1}{4}$$

$$P(A|E_1) = \frac{3}{18}, P(A|E_2) = \frac{2}{8}, P(A|E_3) = \frac{1}{7} \text{ ಮತ್ತು } P(A|E_4) = \frac{4}{13}$$

P (ಡಬ್ಬಿ III ಅನ್ನು ಆಯ್ಕೆಮಾಡಿದೆ, ತೆಗೆದ ಚಂಡು ಕಪ್ಪು ಎಂದು ಕೊಡಲಾಗಿದೆ) = $P(E_3 /A)$. ಬೆಯಸ್‌ನ ಪ್ರಮೇಯದಿಂದ,

$$P(E_3|A) = \frac{P(E_3) \cdot P(A|E_3)}{P(E_1) \cdot P(A|E_1) + P(E_2) \cdot P(A|E_2) + P(E_3) \cdot P(A|E_3) + P(E_4) \cdot P(A|E_4)}$$


$$= \frac{\frac{1}{4} \times \frac{1}{7}}{\frac{1}{4} \times \frac{3}{18} + \frac{1}{4} \times \frac{1}{4} + \frac{1}{4} \times \frac{1}{7} + \frac{1}{4} \times \frac{4}{13}} = 0.165.$$

ಪ್ರಜಾವಾಣಿ ನೋಡಿಯೊ

ಪಿಯುಸಿ ರಸಾಯನ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಸಿವಿಲ್ ಜಡ್ಜ್ ಪರೀಕ್ಷೆಗೆ ಸಿದ್ಧತೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ನಾನು ಅಂತಿಮ ವರ್ಷದ ಎಲ್‌ಎಲ್‌ಬಿ ಪದವಿ ಓದುತ್ತಿದ್ದೇನೆ. ವಿದ್ಯಾಭ್ಯಾಸದ ಜೊತೆಗೆ ನ್ಯಾಯಾಧೀಶರ ಹುದ್ದೆಗೆ ಪರೀಕ್ಷೆ ಬರೆಯಬಹುದೇ?**

ಹೆಸರು, ಊರು ತಿಳಿಸಿಲ್ಲ.

- **ಕಾನೂನು ಪದವಿಯನ್ನು ಮಾಡಿದ್ದೇನೆ. ಸಿವಿಲ್ ನ್ಯಾಯಾಧೀಶರಾಗಲು ಅರ್ಹತೆಯೇನು? ಮತ್ತು ಜಿಲ್ಲಾ ನ್ಯಾಯಧೀಶರಾಗಲು ಇರುವ ಅರ್ಹತೆಯೇನು?**

ಹೆಸರು, ಊರು ತಿಳಿಸಿಲ್ಲ.

ಕಾನೂನು ಪದವಿಯ ನಂತರ ಕಡ್ಡಾಯವಾಗಿ ವಕೀಲರಾಗಿ ನೋಂದಣಿ ಆಗಿರಬೇಕು ಹಾಗೂ ಹೈಕೋರ್ಟ್‌ಗಳು, ಸಿವಿಲ್ ನ್ಯಾಯಾಧೀಶರ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಭಾಗವಹಿಸಬೇಕು. ಈ ಪರೀಕ್ಷೆಯಲ್ಲಿ ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಯಿರುತ್ತದೆ. ಪೂರ್ವಭಾವಿ ಪರೀಕ್ಷೆಯ ಅಂಕಗಳನ್ನು ಮುಖ್ಯ ಪರೀಕ್ಷೆಯ ಅರ್ಹತೆಗಾಗಿ ಮಾತ್ರ ಪರಿಗಣಿಸಲಾಗುತ್ತದೆ. ಜಿಲ್ಲಾ ನ್ಯಾಯಾಧೀಶರ ನೇಮಕಾತಿ ಮತ್ತು ಹೆಚ್ಚಿನ ಮಾಹಿತಿಗಾಗಿ ಗಮನಿಸಿ:

https://karnatakajudiciary.kar.nic.in/recruitmentNotification.php

- **ನಾನು ಬಿಎ 2ನೇ ವರ್ಷದ ವಿದ್ಯಾರ್ಥಿ. ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಆಗಬೇಕೆಂದುಕೊಂಡಿದ್ದೇನೆ. ಇದಕ್ಕಾಗಿ ತಯಾರಿ ಹೇಗೆ? ಸಮಯದ ನಿರ್ವಹಣೆ ಹೇಗೆ ಮತ್ತು ಯಾವ ರೀತಿ ಓದಬೇಕು? ನಾನು ಕನ್ನಡ ಮಾಧ್ಯಮದಲ್ಲಿ ಓದಿರುವುದರಿಂದ ಇಂಗ್ಲಿಷ್ ಕಷ್ಟವೆನಿಸುತ್ತದೆ. ಯಾವ ರೀತಿ ಇಂಗ್ಲಿಷ್ ಕಲಿಯಬೇಕು ತಿಳಿಸಿ**

ಜೆ.ಬಿ. ಕಟ್ಟಿಮನಿ, ಊರು ತಿಳಿಸಿಲ್ಲ.

ಪೊಲೀಸ್ ಸಬ್‌ಇನ್‌ಸ್ಪೆಕ್ಟರ್(ಪಿಎಸ್‌ಐ) ಆಗಲು ಯಾವುದಾದರೂ ಪದವಿಯ ಜೊತೆ ನಾಯಕತ್ವದ ಕೌಶಲ, ದಿಟ್ಟತನ, ಸಹಭಾಗಿತ್ವದ ಕೌಶಲ, ಉತ್ತಮ ಸಂವಹನ, ಪರಿಶೋಧನಾ ಕೌಶಲ, ಸಮಸ್ಯೆಗಳನ್ನು ಪರಿಹರಿಸುವ ಕೌಶಲಗಳ ಜೊತೆ ಸಕಾರಾತ್ಮಕ ಧೋರಣೆಯಿರಬೇಕು. ಮಾನಸಿಕ ಮತ್ತು ದೈಹಿಕ ಸದೃಢತೆಯಿರಬೇಕು.

ಪ್ರಮುಖವಾಗಿ ಈ ವೃತ್ತಿ ನಿಮಗೆ ಒಪ್ಪುತ್ತದೆಯೇ ಎಂದು ಖಚಿತವಾಗಬೇಕು. ಕರ್ನಾಟಕ ಪೊಲೀಸ್ ನೇಮಕಾತಿ ಪ್ರಕ್ರಿಯೆ, ಪರೀಕ್ಷೆಗಳ ವಿವರ ಮತ್ತು ವಿಷಯಸೂಚಿಗೆ ಗಮನಿಸಿ: https://prepp.in/karnataka-police-exam

ಇಂಗ್ಲಿಷ್ ಭಾಷೆಯನ್ನು ಕಲಿಯುವುದರ ಬಗ್ಗೆ ಕಳೆದ ವರ್ಷದ ಅಕ್ಟೋಬರ್ 3ರ ಪ್ರಶ್ನೋತ್ತರದಲ್ಲಿ ಉತ್ತರಿಸಲಾಗಿದೆ. ದಯವಿಟ್ಟು ಓದಿಕೊಳ್ಳಿ. ಪರಿಣಾಮಕಾರಿ ಓದುವಿಕೆ ಮತ್ತು ಸಮಯದ ನಿರ್ವಹಣೆ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊಗಳನ್ನು ವೀಕ್ಷಿಸಿ: https://www.youtube.com/@ExpertCareerConsultantAuthor https://www.youtube.com/watch?v=AnAbzbLsFvM

> **ನಾನು ಸರ್ಕಾರಿ ಪ್ರೌಢ ಶಾಲಾ ಶಿಕ್ಷಕನಾಗಿದ್ದು ದಾಖಲೆಗಳಲ್ಲಿ ನನ್ನ ಹೆಸರು ತಪ್ಪಾಗಿದೆ. ಈಗ ಇದನ್ನು ಸರಿಪಡಿಸಿಕೊಳ್ಳುವ ಪ್ರಕ್ರಿಯೆ ಬಗ್ಗೆ ತಿಳಿಸಿ.**
>
> **ಹೆಸರು, ಊರು ತಿಳಿಸಿಲ್ಲ.**
>
> ನಮ್ಮ ಅಭಿಪ್ರಾಯದಂತೆ, ಸಣ್ಣ ತಪ್ಪುಗಳಿದ್ದಲ್ಲಿ ಸರಿಯಾದ ಹೆಸರಿನಲ್ಲಿ ದೃಢೀಕರಿಸಿದ ಪ್ರಮಾಣ ಪತ್ರವನ್ನು ಮಾಡಬೇಕು. ಸರ್ಕಾರಿ ದಾಖಲೆಗಳಲ್ಲಿ ಹೆಸರನ್ನು ಸರಿಪಡಿಸಲು ಪ್ರಮಾಣಪತ್ರದೊಂದಿಗೆ ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿ. ಆದರೆ, ಪ್ರಮುಖ ಬದಲಾವಣೆಗಳಿದ್ದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಾಗಿ https://schooleducation.kar.nic.in/pdffiles/Forms_Proc/ChangeOfNameGovtServants.pdf

- **ನಾನು ಪ್ರಥಮ ವರ್ಷದ ಎಂಎ (ಅರ್ಥಶಾಸ್ತ್ರ) ಓದುತ್ತಿದ್ದೇನೆ. ಇದನ್ನು ಬಿಟ್ಟು ಬಿ.ಇಡಿ ಮಾಡಬೇಕು ಅಂದುಕೊಂಡಿದ್ದೀನಿ. ಯಾವುದು ಮಾಡಿದರೆ ಸೂಕ್ತ?**

ಹೆಸರು, ಊರು ತಿಳಿಸಿಲ್ಲ.

ಖಚಿತವಾದ ವೃತ್ತಿಯೋಜನೆಯಿಲ್ಲದೆ ಕೋರ್ಸ್‌ಗಳನ್ನು ಮಾಡಿದರೆ ಇಂತಹ ಗೊಂದಲಗಳು ಸಾಮಾನ್ಯ. ಜೀವನದಲ್ಲಿ ನಿರ್ದಿಷ್ಟವಾದ, ಸ್ಪಷ್ಟವಾದ, ಸಾಧಿಸಬಹುದಾದ, ಮತ್ತು ಅಳೆಯಬಹುದಾದ ಗುರಿಯಿರಬೇಕು. ಬಾಳಿಗೊಂದು ಗುರಿ ಇದ್ದರೆ, ನಮ್ಮಲ್ಲಿರುವ ಸುಪ್ತ ಶಕ್ತಿಗಳನ್ನು ಆ ಗುರಿಯೆಡೆಗೆ ಕೇಂದ್ರೀಕರಿಸಿ, ವೃತ್ತಿಯಲ್ಲಿ ಯಶಸ್ಸು ಮತ್ತು ಜೀವನದಲ್ಲಿ ಸಂತೃಪ್ತಿಯನ್ನು ಪಡೆಯಬಹುದು. ಎಂಎ (ಅರ್ಥಶಾಸ್ತ್ರ) ಮತ್ತು ಬಿ.ಇಡಿ ಸಂಬಂಧಿತ ವೃತ್ತಿಗಳ ಯಶಸ್ಸಿಗೆ ಬೇಕಾಗುವ ಜ್ಞಾನ, ಆಸಕ್ತಿ, ಅಭಿರುಚಿ, ಸಾಮರ್ಥ್ಯ ಮತ್ತು ಕೌಶಲಗಳು ವಿಭಿನ್ನ. ಹಾಗಾಗಿ, ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆತ್ಮಸಂತೃಪ್ತಿಯನ್ನು ತಂದುಕೊಡುವ ವೃತ್ತಿಯೋಜನೆಯನ್ನು ಮಾಡಿ ಅದರಂತೆ ಮುಂದಿನ ನಿರ್ಧಾರವನ್ನು ಮಾಡುವುದು ನಿಮ್ಮ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ವೀಕ್ಷಿಸಿ: https://www.youtube.com/watch?v=oyUMPrEKPPU

- **ನಾನು ಅಂತಿಮ ವರ್ಷದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮಾಡುತ್ತಿದ್ದೇನೆ. ಇದಾದ ನಂತರ ಏನು ಮಾಡಬೇಕು ತಿಳಿಯುತ್ತಿಲ್ಲ. ಸಲಹೆ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಸಾಮಾನ್ಯವಾಗಿ ನಿಮ್ಮ ಆಸಕ್ತಿ, ಅಭಿರುಚಿ ಮತ್ತು ಪ್ರತಿಭೆಯನ್ನು ಆಧರಿಸಿ ವೃತ್ತಿಯೋಜನೆಯನ್ನು ಮಾಡಿ, ಅದರಂತೆ ಕೋರ್ಸ್ ಆಯ್ಕೆ ಮಾಡಬೇಕು. ವೃತ್ತಿಯೋಜನೆಯನ್ನು ಮಾಡದೆ, ಕೋರ್ಸ್ ಆಯ್ಕೆ ಮಾಡಿದರೆ ಇಂತಹ ಗೊಂದಲಗಳು ಸಾಮಾನ್ಯ.

ಮೆಕ್ಯಾನಿಕಲ್ ಎಂಜಿನಿಯರಿಂಗ್ ನಂತರವಿರುವ ಈ ಆಯ್ಕೆಗಳನ್ನು ಪರಿಶೀಲಿಸಬಹುದು:

- ಕ್ಯಾಂಪಸ್ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
- ನಿಮಗೆ ಆಸಕ್ತಿಯಿರುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅಲ್ಪಾವಧಿ ವೃತ್ತಿಪರ ಡಿಪ್ಲೊಮಾ/ ಸರ್ಟಿಫಿಕೆಟ್ ಕೋರ್ಸ್‌ಗಳನ್ನು ಮಾಡಿ ವೃತ್ತಿಯ ಅವಕಾಶಗಳನ್ನು ಬಳಸಿಕೊಳ್ಳಬಹುದು.
- ಹೆಚ್ಚಿನ ತಜ್ಞತೆಗಾಗಿ ಎಂಟೆಕ್/ಎಂಇ (ಮೆಕ್ಯಾನಿಕಲ್, ಆಟೊಮೊಬೈಲ್, ಏರೊನಾಟಿಕಲ್ ಇತ್ಯಾದಿ) ಮಾಡಿ, ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದು.

- **ನಾನು ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಇದಾದ ನಂತರ ಬಿ.ಎ, ಎಲ್‌ಎಲ್‌ಬಿ ಮಾಡಬೇಕೆಂದು ಕೊಂಡಿದ್ದೇನೆ. ದಯವಿಟ್ಟು ಆಯ್ಕೆ ಪ್ರಕ್ರಿಯೆ, ಶುಲ್ಕಗಳ ಬಗ್ಗೆ ಮಾರ್ಗದರ್ಶನ ನೀಡಿ.**

ಹೆಸರು, ಊರು ತಿಳಿಸಿಲ್ಲ.

ವಕೀಲಿ ವೃತ್ತಿಯನ್ನು ಅನುಸರಿಸಬೇಕೆನ್ನುವ ನಿಮ್ಮ ವೃತ್ತಿಯೋಜನೆ ಖಚಿತವಾಗಿದ್ದಲ್ಲಿ, ಐದು ವರ್ಷದ ಇಂಟಗ್ರೇಟೆಡ್ ಬಿಎ, ಎಲ್‌ಎಲ್‌ಬಿ ಕೋರ್ಸ್ ಮಾಡುವುದು ಸೂಕ್ತ. ಸಿಎಲ್‌ಎಟಿ, ಎಲ್‌ಎಸ್‌ಎಟಿ, ಎಐಎಲ್‌ಇಟಿ ಮುಂತಾದ ಪರೀಕ್ಷೆಗಳ ಮೂಲಕ ಕೆಲವು ಸರ್ಕಾರಿ ಕಾಲೇಜುಗಳೂ ಸೇರಿದಂತೆ ಪ್ರತಿಷ್ಠಿತ ಕಾಲೇಜು/ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶವನ್ನು ಪಡೆಯಬಹುದು. ಕಾಲೇಜು ಶುಲ್ಕ, ಹಾಸ್ಟೆಲ್ ವೆಚ್ಚ ಇತ್ಯಾದಿಗಳು ನೀವು ಯಾವ ಕಾಲೇಜು (ಸರ್ಕಾರಿ, ಖಾಸಗಿ) ಸೇರುತ್ತೀರಿ ಎನ್ನುವುದನ್ನು ಅವಲಂಬಿಸಿರುತ್ತದೆ. ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿ ವೇತನಗಳು ಮತ್ತು ಸ್ಕಾಲರ್‌ಶಿಪ್ ಸೌಲಭ್ಯಗಳಿವೆ. ಶೈಕ್ಷಣಿಕ ಸಾಲದ ಅವಶ್ಯಕತೆಯಿದ್ದಲ್ಲಿ, ಆಕರ್ಷಕ ಬಡ್ಡಿ ದರ ಮತ್ತು ವಿದ್ಯಾರ್ಥಿ ಸ್ನೇಹಿ ನಿಯಮಗಳೊಂದಿಗೆ ದೇಶದಲ್ಲಿರುವ ಎಲ್ಲಾ ಬ್ಯಾಂಕ್‌ಗಳು ನೀಡುತ್ತವೆ.

ಹೆಚ್ಚಿನ ಪ್ರಶ್ನೋತ್ತರಗಳಿಗೆ ಓದಿ www.prajavani.net/education-career

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಕ್ರೀಡಾ ಪಟುಗಳಿಗೆ ಸ್ಕಾಲರ್‌ಶಿಪ್

ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡಲು ರೂಪಸಿರುವ ಸ್ಕಾಲರ್‌ಶಿಪ್ ಕಾರ್ಯಕ್ರಮ ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಶನಲ್ ಸ್ಕಾಲರ್‌ಶಿಪ್ ಆ್ಯಂಡ್ ಮೆಂಟರ್‌ಶಿಪ್ ಪ್ರೋಗ್ರಾಂ.

ಆರ್ಥಿಕ ಸಂಕಷ್ಟದ ಕಾರಣದಿಂದ ವಿದ್ಯಾಭ್ಯಾಸ ಮುಂದುವರಿಸಲು ಅಶಕ್ತರಾಗಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮೂಲಕ ಆರ್ಥಿಕ ಬೆಂಬಲ ನೀಡಲು ಕೋಲ್ಗೇಟ್ - ಪಾಮೊಲಿವ್ (ಇಂಡಿಯಾ) ಲಿಮಿಟೆಡ್ ಕಂಪನಿ ಈ ಕಾರ್ಯಕ್ರಮ ರೂಪಿಸಿದೆ.

ಅರ್ಹತೆ: ಅರ್ಜಿದಾರರು ಪದವಿಧರರಾಗಿದ್ದು, ದುರ್ಬಲ ವರ್ಗದ ಮಕ್ಕಳಿಗೆ ಪಾಠ ಮಾಡುವ ಅಥವಾ ಕ್ರೀಡಾ ತರಬೇತಿಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು.

ಅರ್ಜಿದಾರರು ಕ್ರೀಡಾಪಟುಗಳಾಗಿದ್ದರೆ, ಕಳೆದ ಎರಡು–ಮೂರು ವರ್ಷಗಳಲ್ಲಿ ರಾಜ್ಯ/ ರಾಷ್ಟ್ರ/ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ/ ರಾಷ್ಟ್ರವನ್ನು ಪ್ರತಿನಿಧಿಸಿರಬೇಕು. ರಾಷ್ಟ್ರೀಯ ಶ್ರೇಯಾಂಕದಲ್ಲಿ 500 ಒಳಗೆ / ರಾಜ್ಯ ಶ್ರೇಯಾಂಕದಲ್ಲಿ100 ಒಳಗೆ ಸ್ಥಾನಪಡೆದಿರಬೇಕು. 9 ವರ್ಷಗಳಿಂದ 20 ವರ್ಷಗಳೊಳಗಿನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಎಲ್ಲ ಮೂಲಗಳಿಂದ ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷ ಮೀರಿರಬಾರದು.

ಆರ್ಥಿಕ ನೆರವು: ಆಯ್ದ ವಿದ್ಯಾರ್ಥಿಗಳಿಗೆ 3 ವರ್ಷಗಳವರೆಗೆ ವರ್ಷಕ್ಕೆ ₹75,000ದಂತೆ ವಿದ್ಯಾರ್ಥಿವೇತನ ಪಡೆಯಬಹುದು.

ಅರ್ಜಿ ಸಲ್ಲಿಸಲು ಕೊನೆ ದಿನ: 31-03-2023

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/praja/KSSI2

ಕೃಪೆ: www.buddy4study.com



ಸುಭಾಷಿತ

ನಮ್ಮನ್ನು ಎಲ್ಲ ಮರೆವು, ಪಾಪಗಳಿಂದ ಮುಕ್ತಗೊಳಿಸುವುದೇ ವಿದ್ಯೆ.

-ಚಂದ್ರಶೇಖರ ಕಂಬಾರ

ನಿಲ್ಲದ ಯುದ್ಧ: ಉಕ್ರೇನ್– ರಷ್ಯಾಕ್ಕೆ ಮಾತ್ರವಲ್ಲ, ಜಗತ್ತಿಗೇ ದೊಡ್ಡ ಹೊರೆ

ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿ ವರ್ಷ ಕಳೆದಿದೆ. ಯುದ್ಧದಿಂದಾಗಿ ಅಪಾರವಾದ ನಷ್ಟ ಉಂಟಾಗಿದೆ. ಒಂದು ಅಂದಾಜಿನ ಪ್ರಕಾರ, ಉಕ್ರೇನ್‌ನ ಒಂದು ಲಕ್ಷದಷ್ಟು ಸೈನಿಕರು ಗಾಯಗೊಂಡಿದ್ದಾರೆ ಅಥವಾ ಮೃತಪಟ್ಟಿದ್ದಾರೆ. ಉಕ್ರೇನ್ ನಗರಗಳ ಮೇಲೆ ರಷ್ಯಾ ನಡೆಸಿದ ಬಾಂಬ್ ಮತ್ತು ಕ್ಷಿಪಣಿ ದಾಳಿಗಳಿಂದಾಗಿ ಬಲಿಯಾದ ನಾಗರಿಕರ ಸಂಖ್ಯೆಯೂ ದೊಡ್ಡದಾಗಿಯೇ ಇದೆ. 80 ಲಕ್ಷಕ್ಕೂ ಹೆಚ್ಚು ಉಕ್ರೇನ್ ಪೌರರು ನಿರಾಶ್ರಿತರಾಗಿದ್ದಾರೆ. ಸಾವಿರಾರು ಕಟ್ಟಡಗಳು, ನೂರಾರು ಸೇತುವೆಗಳು, ವಿದ್ಯುತ್ ವಿತರಣೆ ಜಾಲ ಮತ್ತು ರಸ್ತೆಗಳು ನಾಶವಾಗಿವೆ. ತನಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ರಷ್ಯಾ ಈವರೆಗೆ ಹೇಳಿಕೊಂಡಿಲ್ಲ. ಈವರೆಗೆ ಆಗಿರುವ ನಷ್ಟ ಸಣ್ಣದೇನಲ್ಲ. ಅಫ್ಗಾನಿಸ್ತಾನದ ಮೇಲೆ ರಷ್ಯಾ ನಡೆಸಿದ ದಾಳಿಯ ಸಂದರ್ಭದಲ್ಲಿ ಆಗಿರುವ ನಷ್ಟಕ್ಕಿಂತ ಈಗ ಆಗಿರುವ ನಷ್ಟವು ಬಹಳ ದೊಡ್ಡದಾಗಿದೆ. ಅಫ್ಗಾನಿಸ್ತಾನವನ್ನು ಸುಮಾರು ಒಂದು ದಶಕ ಕಾಲ ರಷ್ಯಾ ತನ್ನ ಅಧೀನದಲ್ಲಿ ಇರಿಸಿಕೊಂಡಿತ್ತು. ಆ ಸಂದರ್ಭದಲ್ಲಿ ರಷ್ಯಾದ ಸುಮಾರು 15 ಸಾವಿರ ಸೈನಿಕರು ಬಲಿಯಾಗಿದ್ದರು. ಆದರೆ, ಉಕ್ರೇನ್ ಮೇಲೆ ದಾಳಿ ನಡೆಸಿದ ಒಂದು ವರ್ಷದಲ್ಲಿಯೇ ರಷ್ಯಾದ 80 ಸಾವಿರದಿಂದ 1.5 ಲಕ್ಷ ಸೈನಿಕರು ಮೃತಪಟ್ಟಿರಬಹುದು ಎಂದು ಅಂದಾಜಿಸಲಾಗಿದೆ. ಯುದ್ಧದ ಪ್ರತಿಕೂಲ ಪರಿಣಾಮಗಳು ಯುದ್ಧದಲ್ಲಿ ತೊಡಗಿರುವ ಎರಡು ದೇಶಗಳು ಮತ್ತು ಅವುಗಳ ನೆರೆಯ ದೇಶಗಳಿಗಷ್ಟೇ ಸೀಮಿತವಾಗಿಲ್ಲ. ಈ ಯುದ್ಧದಿಂದಾಗಿ ಇಡೀ ಜಗತ್ತು ಕಷ್ಟ ನಷ್ಟ ಅನುಭವಿಸಿದೆ. ಜಾಗತಿಕ ಪೂರೈಕೆ ಸರಪಣಿಯನ್ನು ಈ ಸಂಘರ್ಷವು ಹಾಳುಗೆಡವಿದೆ. ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಆಹಾರಧಾನ್ಯಗಳ ದರವು ಗಗನಕ್ಕೇರಿದೆ. ದಕ್ಷಿಣ ಏಷ್ಯಾದ ದೇಶಗಳು ಸೇರಿದಂತೆ ಹಲವು ದೇಶಗಳಲ್ಲಿ ಭಾರಿ ಹಣದುಬ್ಬರ ಮತ್ತು ಆರ್ಥಿಕ ಬಿಕ್ಕಟ್ಟಿಗೆ ಇದು ಕಾರಣವಾಗಿದೆ. ಒಂದು ವರ್ಷದಲ್ಲಿ ಜಾಗತಿಕ ಆರ್ಥಿಕತೆಗೆ ಆಗಿರುವ ನಷ್ಟ 1.6 ಲಕ್ಷ ಕೋಟಿ ಡಾಲರ್ (ಸುಮಾರು ₹132 ಲಕ್ಷ ಕೋಟಿ) ಎಂದು ಅಂದಾಜಿಸಲಾಗಿದೆ.



ಯುದ್ಧದ ಪ್ರತಿಕೂಲ ಪರಿಣಾಮಗಳು ಯುದ್ಧದಲ್ಲಿ ತೊಡಗಿರುವ ಎರಡು ದೇಶಗಳು ಮತ್ತು ಅವುಗಳ ನೆರೆಯ ದೇಶಗಳಿಗಷ್ಟೇ ಸೀಮಿತವಾಗಿಲ್ಲ. ಈ ಯುದ್ಧದಿಂದಾಗಿ ಇಡೀ ಜಗತ್ತು ಕಷ್ಟ ನಷ್ಟ ಅನುಭವಿಸಿದೆ

ರಷ್ಯಾ ದೇಶವು ಉಕ್ರೇನ್ ಮೇಲೆ 2022ರ ಫೆಬ್ರುವರಿ 24ರಂದು ದಾಳಿ ಆರಂಭಿಸಿದಾಗ ಯುದ್ಧವು ಬಹಳ ದಿನಗಳೇನೂ ನಡೆಯುವುದಿಲ್ಲ ಎಂದೇ ಭಾವಿಸಲಾಗಿತ್ತು. ಇದು ಆಶಾವಾದದ ಚಿಂತನೆಯಾಗಿಯಷ್ಟೇ ಉಳಿಯಿತು. ಒಂದು ವರ್ಷದ ಬಳಿಕವೂ ಸಂಘರ್ಷ ಕೊನೆಗೊಳ್ಳುವ ಸುಳಿವು ಗೋಚರಿಸುತ್ತಿಲ್ಲ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಯುದ್ಧದಿಂದ ಹಿಂದಕ್ಕೆ ಹೋಗಲೂ ಆಗದೆ, ಸಂಧಾನವೂ ಸಾಧ್ಯವಾಗದೆ ತಾವೇ ಹೆಣೆದುಕೊಂಡ ಬಲೆಯಲ್ಲಿ ಸಿಲುಕಿಕೊಂಡಿದ್ದಾರೆ. ಹಾಗಾಗಿ, ಯುದ್ಧವು ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರಗೊಳ್ಳಬಹುದು. ರಷ್ಯಾವು ಉಕ್ರೇನ್‌ಗೆ ಹೆಚ್ಚು ಹೆಚ್ಚು ಸೈನಿಕರನ್ನು ಕಳುಹಿಸುತ್ತಲೇ ಇದೆ ಮತ್ತು ಹೆಚ್ಚು ಹೆಚ್ಚು ಅಪಾಯಕಾರಿಯಾದ ಶಸ್ತ್ರಾಸ್ತ್ರವನ್ನೂ ಬಳಸುತ್ತಿದೆ. ಉಕ್ರೇನ್‌ಗೆ ಪಶ್ಚಿಮದ ದೇಶಗಳು ಅತ್ಯಾಧುನಿಕ ಫಿರಂಗಿಗಳು, ಟ್ಯಾಂಕ್‌ಗಳು, ವಾಯುಪ್ರದೇಶ ರಕ್ಷಣಾ ವ್ಯವಸ್ಥೆಗಳು ಮತ್ತು ಕ್ಷಿಪಣಿ ಗಳನ್ನು ಪೂರೈಸುತ್ತಿವೆ. ಕೋಟ್ಯಂತರ ಡಾಲರ್ ನೆರವು ಕೂಡ ನೀಡಿವೆ. ಇದರಿಂದಾಗಿ ಯುದ್ಧದಲ್ಲಿ ಉಕ್ರೇನ್ ಕೈಮೇಲಾಗುವಂತಹ ಸನ್ನಿವೇಶ ಸೃಷ್ಟಿಯಾಗಬಹುದು. ಅಂತಹ ಸ್ಥಿತಿ ಸೃಷ್ಟಿಯಾದರೆ, ಪುಟಿನ್ ಅವರು ಇನ್ನಷ್ಟು ಅಪಾಯಕಾರಿಯಾದ ಹೆಜ್ಜೆ ಇರಿಸಬಹುದು. ಅಣ್ವಸ್ತ್ರ ಬಳಸುವುದಕ್ಕೂ ಅವರು ಹೇಸದಿರಬಹುದು.

ಉಕ್ರೇನ್‌ನಲ್ಲಿ ನಿಜವಾಗಿ ನಡೆಯುತ್ತಿರುವುದು ಪಶ್ಚಿಮದ ದೇಶಗಳು ಮತ್ತು ರಷ್ಯಾ ನಡುವಣ ಮೇಲಾಟ. ಈ ಯುದ್ಧದಲ್ಲಿ ಹೆಚ್ಚಿನ ಲಾಭ ಚೀನಾಕ್ಕೆ ಆಗಬಹುದು. ಯುದ್ಧಕ್ಕೆ ಸಂಬಂಧಿಸಿ, ವಿಶ್ವಸಂಸ್ಥೆಯಲ್ಲಿ ಮಂಡಿಸಲಾದ ನಿರ್ಣಯಗಳ ಪರವಾಗಿ ಚೀನಾ ಮತ ಹಾಕಿಲ್ಲ. ಆದರೆ, ಮತದಾನದಿಂದ ದೂರ ಉಳಿಯುವ ಮೂಲಕ ರಷ್ಯಾಕ್ಕೆ ನೆರವಾಗಿದೆ. ಚೀನಾದ ನಾಯಕರು ರಷ್ಯಾಕ್ಕೆ ಭೇಟಿ ನೀಡಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಯುದ್ಧವು ನಿಲ್ಲದೇ ಇರುವುದರ ಕುರಿತು ಚೀನಾಕ್ಕೆ ಕಳವಳ ಇದೆ. ಯುದ್ಧದಿಂದಾಗಿ ರಷ್ಯಾ ತೀರಾ ದುರ್ಬಲವಾಗಬಹುದು ಎಂಬುದರ ಅರಿವು ಚೀನಾಕ್ಕೆ ಇದೆ. ಹಾಗೆ ಆದರೆ, ಅಮೆರಿಕದ ಯಜಮಾನಿಕೆಗೆ ಸವಾಲೆಸೆಯುವ ಚೀನಾದ ಪ್ರಯತ್ನಕ್ಕೆ ರಷ್ಯಾದಿಂದ ಹೆಚ್ಚೇನೂ ಪ್ರಯೋಜನ ಆಗದಿರಬಹುದು. ಇಂತಹ ಕಳವಳಗಳಿಂದಾಗಿಯೇ ಚೀನಾವು ಸಂಧಾನಕಾರನಾಗುವ ವಿಚಾರದಲ್ಲಿ ಆಸಕ್ತಿ ತೋರುತ್ತಿದೆ. ಆದರೆ, ಚೀನಾವನ್ನು ಪ್ರಾಮಾಣಿಕ ಸಂಧಾನಕಾರ ಎಂದು ಉಕ್ರೇನ್ ಒಪ್ಪಬಹುದೇ ಎಂಬ ಪ್ರಶ್ನೆಯೂ ಇದೆ. ಹಾಗಿದ್ದರೂ ಪುಟಿನ್ ಅವರ ಮನವೊಲಿಸುವ ಸಾಮರ್ಥ್ಯವಿರುವ ಒಂದೇ ದೇಶ ಚೀನಾ ಮಾತ್ರ.

ಮುಂದಿನ ಚುನಾವಣೆ ವೇಳೆಗೆ ಈಗಿನ ಎಲ್ಲ ಪ್ರಮುಖ ನಾಯಕರ ನಿವೃತ್ತಿ

ಹೊಸ ಹುರಿಯಾಳು ಹುಟ್ಟುವ ಹೊತ್ತು!



ಅನುಸಂಧಾನ

ರವೀಂದ್ರ ಭಟ್ಟ

ಹದಿನೈದನೇ ವಿಧಾನಸಭೆಯ ಅವಧಿ ಮುಗಿಯುತ್ತಾ ಬಂದಿದೆ. ವಿಧಾನಮಂಡಲದ ಕೊನೆಯ ಅಧಿವೇಶನಕ್ಕೆ ತೆರೆಬಿದ್ದಿದೆ. ಹದಿನಾರನೇ ವಿಧಾನಸಭೆ ಆಯ್ಕೆಗೆ ವೇದಿಕೆ ಸಿದ್ಧವಾಗುತ್ತಿದೆ. ಈಗ ಬರುವ ಚುನಾವಣೆ ಕರ್ನಾಟಕದ ಮಟ್ಟಿಗೆ ಅತ್ಯಂತ ಮಹತ್ವದ್ದು. ಇದು ರಾಜಕಾರಣಿಗಳಿಗೆ ಎಷ್ಟು ಮುಖ್ಯವೋ ಮತದಾರರಿಗೂ ಅಷ್ಟೇ ಮುಖ್ಯ.

ಕರ್ನಾಟಕದಲ್ಲಿ 'ಮಾಸ್ ಲೀಡರ್' ಎಂಬ ಹಣೆಪಟ್ಟಿ ಹಚ್ಚಿಕೊಂಡ ಬಹುತೇಕ ನಾಯಕರಿಗೆ ಇದು ಕೊನೆಯ ಚುನಾವಣೆ. ಕೆಲವರು ಕಣದಲ್ಲಿ ಇರುತ್ತಾರೆ. ಇನ್ನು ಕೆಲವರು ಅಖಾಡದ ಹೊರಗೆ ನಿಲ್ಲುತ್ತಾರೆ. ಕಣದಲ್ಲಿ ಇದ್ದವರಿಗೂ ಇದು ಕೊನೆಯ ಚುನಾವಣೆ. ಕಣದ ಹೊರಕ್ಕೆ ಇದ್ದು ಪಕ್ಷದ ಗೆಲುವಿಗೆ ಶ್ರಮಿಸುವ ನಾಯಕರಿಗೂ ಇದು ಕೊನೆಯ ಚುನಾವಣೆ. ಅಂದರೆ, 2028ರ ಚುನಾವಣೆ ವೇಳೆಗೆ ಅವರೆಲ್ಲಾ ನೇಪಥ್ಯಕ್ಕೆ ಸರಿದಿರುತ್ತಾರೆ. ಹಾಗಾಗಿ ಈ ಚುನಾವಣೆ ಹೊಸ ನಾಯಕನ ಉದಯಕ್ಕೂ ನಾಂದಿ ಹಾಡಲಿದೆ. 2023ರ ವಿಧಾನಸಭೆ ಚುನಾವಣೆ ಬರೀ ಆಡಳಿತ ಪಕ್ಷ, ವಿರೋಧ ಪಕ್ಷವನ್ನು ಆಯ್ಕೆ ಮಾಡುವ ಚುನಾವಣೆಯಲ್ಲ. ಸಮಗ್ರ ಕರ್ನಾಟಕವನ್ನು ಮುನ್ನಡೆಸುವ ನಾಯಕನೊಬ್ಬನನ್ನು ಹುಟ್ಟುಹಾಕುವ ಚುನಾವಣೆಯೂ ಹೌದು. ಆ ಜವಾಬ್ದಾರಿಯೂ ಈ ಬಾರಿ ರಾಜ್ಯದ ಮತದಾರರಿಗೆ ಲಭಿಸಿದೆ. ಅದನ್ನು ಸರಿಯಾಗಿ ನಿಭಾಯಿಸಬೇಕು ಅಷ್ಟೆ.

ಜಾತ್ಯತೀತ ಜನತಾದಳದ ಅತ್ಯುನ್ನತ ನಾಯಕ ಎಚ್.ಡಿ.ದೇವೇಗೌಡ, ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಈ ವಿಧಾನಸಭೆ ಚುನಾವಣೆ ಕಣದಲ್ಲಿ ಇರುವುದಿಲ್ಲ. ಆದರೆ ಈ ಮೂವರು ನಾಯಕರೂ ತಮ್ಮ ಪ್ರಭಾವವನ್ನು ಬೀರುತ್ತಾರೆ. ದೇವೇಗೌಡರು ದೇಶದ ಪ್ರಧಾನಿಯಾಗಿದ್ದವರು. ಮುಖ್ಯಮಂತ್ರಿಯೂ ಆಗಿದ್ದರು. ಆದರೆ ಈಗ ವಯಸ್ಸಿನ ಕಾರಣಕ್ಕಾಗಿ ಕೊಂಚ ಹಿಂದೆ ಸರಿದಿದ್ದಾರೆ. ಆದರೂ ಅವರ ನಾಮದ ಬಲ ಜಾತ್ಯತೀತ ಜನತಾದಳಕ್ಕೆ ಇದೆ. ಮನೆಯಲ್ಲಿಯೇ ಕುಳಿತು 'ಮ್ಯಾಜಿಕ್' ಮಾಡುವ ಶಕ್ತಿಯಂತೂ ಅವರಿಗೆ ಇದೆ. ಇಷ್ಟಾದರೂ ಆ ಪಕ್ಷದ ಶಿಥಿಲತೆ ಅಲ್ಲಲ್ಲಿ ಗೋಚರಿಸುತ್ತಿದೆ. ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅದನ್ನು ಮೀರುವ ಭರವಸೆ ತೋರುತ್ತಿದ್ದಾರೆ.

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದಲ್ಲಿ ತಮ್ಮದೇ ಪ್ರಭಾವ ಉಳಿಸಿಕೊಂಡವರು. ಮುಖ್ಯಮಂತ್ರಿಯಾಗುವ ಅವಕಾಶ ಅವರಿಗೆ ಲಭ್ಯವಾಗದೆ ಇದ್ದರೂ ಕರ್ನಾಟಕದ ರಾಜಕೀಯದಲ್ಲಿ ಹಲವಾರು ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ದಕ್ಷ ಆಡಳಿತಗಾರ ಎಂದು ಹೆಸರಾದವರು. ಈಗ ಪಕ್ಷದ ಅತ್ಯುನ್ನತ ಪದವಿಗೆ ಏರಿದವರು. ಈ ಬಾರಿ ಪಕ್ಷದ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸುವುದು ಅವರಿಗೆ ಪ್ರತಿಷ್ಠೆಯ ಪ್ರಶ್ನೆಯೂ ಹೌದು.

ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ವಿಧಾನಸೌಧದ ಮೂರನೇ ಮಹಡಿಯಲ್ಲಿ ಅದನ್ನು ಸ್ಥಾಪಿಸುವಲ್ಲಿ ಶಕ್ತಿಮೀರಿ ಶ್ರಮಿಸಿದ ಬಿ.ಎಸ್.ಯಡಿಯೂರಪ್ಪ ಈ ಬಾರಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ. ವಿಧಾನಸಭೆಯಲ್ಲಿ ವಿದಾಯದ ಭಾಷಣವನ್ನೂ ಮಾಡಿ ಮುಗಿಸಿದ್ದಾರೆ. ಆದರೆ ರಾಜ್ಯದ ಮೂಲೆ ಮೂಲೆಗೂ ಓಡಾಡಿ ಪಕ್ಷವನ್ನು ಅಧಿಕಾರಕ್ಕೆ ತರುತ್ತೇನೆ ಎಂದು ಶಪಥ ಮಾಡಿದ್ದಾರೆ. ಅವರ ಪ್ರಭಾವವಂತೂ ಈ ಚುನಾವಣೆಯ ಮೇಲೆ ಇದ್ದೇ ಇರುತ್ತದೆ. ಹೋರಾಟದಿಂದಲೇ ರಾಜಕೀಯವಾಗಿ ಮೇಲೆ ಬಂದ ಯಡಿಯೂರಪ್ಪ ಕೊನೆಯ ಕಾಲದವರೆಗೂ ಹೋರಾಡುವುದಾಗಿ ಪ್ರಕಟಿಸಿದ್ದಾರೆ. ಆದರೂ ಈ ಮೂವರೂ ನಾಯಕರು ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಏರುವುದಿಲ್ಲ ಎನ್ನುವುದು ಸ್ಪಷ್ಟ. ಇವರೆಲ್ಲಾ ಹಿಂದಿನ ಶಕ್ತಿಯಾಗಿರುತ್ತಾರೆಯೇ ವಿನಾ ನೇರವಾಗಿ ಕಣದಲ್ಲಿ ಹೋರಾಡುವುದಿಲ್ಲ. ಆಯಾ ಪಕ್ಷಗಳಿಗೆ ಈ ನಾಯಕರ ನಾಮದ ಬಲ ಇರುತ್ತದೆ ಅಷ್ಟೆ. ಕಣದಲ್ಲಿ ಇದ್ದು ಹೋರಾಡುವುದಕ್ಕೂ ಹೊರಗಿನಿಂದ ಹೋರಾಡುವುದಕ್ಕೂ ಬಹಳಷ್ಟು ವ್ಯತ್ಯಾಸ ಇದ್ದೇ ಇರುತ್ತದೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಣದಲ್ಲಿಯೇ ಇರುವ ಮಾಸ್ ಲೀಡರ್. ಅವರಿಗೂ ವಯಸ್ಸಾಗಿದೆ. ಆದರೂ ಈ ಬಾರಿ ಹೋರಾಟದ ಹಾದಿ ತುಳಿದಿದ್ದಾರೆ. ಅವರನ್ನು ಇನ್ನೊಮ್ಮೆ ಮುಖ್ಯಮಂತ್ರಿಯನ್ನಾಗಿ ನೋಡಬೇಕು ಎನ್ನುವ ಅಭಿಲಾಷೆ ಅವರ ಬೆಂಬಲಿಗರಿಗೆ ಇದೆ. ಮುಂದಿನ ಚುನಾವಣೆ ವೇಳೆಗೆ ಅವರೂ ನೇಪಥ್ಯಕ್ಕೆ ಸರಿಯಬಹುದು. ಕಾಂಗ್ರೆಸ್ ಪಕ್ಷದಲ್ಲಿ ಇನ್ನೂ ಕೆಲವು ಮಂದಿ ವಯಸ್ಸಾದ ಮುಖಂಡರಿದ್ದಾರೆ. ಆದರೆ ಅವರಲ್ಲಿ ಯಾರೂ ಕಣಕ್ಕಿಳಿದು ಹೋರಾಡುವ ಚೈತನ್ಯ ಉಳಿಸಿಕೊಂಡಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೋರಾಟದ ಮುಂಚೂಣಿಯಲ್ಲಿ ಇದ್ದಾರಾದರೂ ಇಡೀ ರಾಜ್ಯ ಒಪ್ಪುವ ನಾಯಕ ತಾನು ಎನ್ನುವುದನ್ನು ಅವರು ಇನ್ನಷ್ಟೇ ಸಾಬೀತುಪಡಿಸಬೇಕಾಗಿದೆ. ಅದಕ್ಕೆ ಅವರಿಗೆ ಅವಕಾಶವಂತೂ ಇದೆ. ಈ ಚುನಾವಣೆ ಅದಕ್ಕೊಂದು ಮುನ್ನುಡಿಯಾಗಬಹುದು.

ಸದ್ಯ ಮುಖ್ಯಮಂತ್ರಿಯಾಗಿರುವ ಬಸವರಾಜ ಬೊಮ್ಮಾಯಿ ಅವರಿಗೆ ನಾಯಕತ್ವದ ಪರೀಕ್ಷೆಯಲ್ಲಿ ಗೆಲ್ಲುವ ಸುವರ್ಣ ಅವಕಾಶ ಇದೆ. ಆಡಳಿತ ಯಂತ್ರ ಅವರ ಕೈಯಲ್ಲಿಯೇ ಇದೆ. ಜನಪ್ರಿಯತೆಯ ಉತ್ತುಂಗದಲ್ಲಿ ಇರುವ ಪ್ರಧಾನಿ ನರೇಂದ್ರ ಮೋದಿ ಅವರ ಬೆಂಬಲವೂ ಇದೆ. ಬೇಕಾದಷ್ಟು ಬಾರಿ ರಾಜ್ಯಕ್ಕೆ ಬಂದು ತಮ್ಮ ಪ್ರಭಾವವನ್ನು ಬೀರುವುದಕ್ಕೆ ಅವರು ಮುಂದಾಗಿದ್ದಾರೆ. ಚುನಾವಣಾ ತಂತ್ರ ನಿಪುಣ ಎಂದೇ ಖ್ಯಾತರಾಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಬೊಮ್ಮಾಯಿ ಬೆನ್ನಿಗಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೂ ಜೊತೆಯಾಗಿದ್ದಾರೆ. ಹಿಂದುತ್ವದ ಅಸ್ತ್ರವಿದೆ. ಆರ್‌ಎಸ್‌ಎಸ್ ಬೆಂಬಲವಿದೆ. ಇಷ್ಟೆಲ್ಲ ಇದ್ದೂ ಅವರು ಪಕ್ಷವನ್ನು ದಡಕ್ಕೆ ಸೇರಿಸದಿದ್ದರೆ ಅವರಿಗೆ ರಾಜಕೀಯವಾಗಿ ಹಿನ್ನಡೆಯಾಗುತ್ತದೆ.

ಬಿಜೆಪಿ ಸ್ವಂತ ಬಲದಲ್ಲಿ ರಾಜ್ಯದಲ್ಲಿ ಈವರೆಗೆ ಬಹುಮತ ಪಡೆದಿಲ್ಲ. ಎರಡು ಬಾರಿ ಸರ್ಕಾರ ನಡೆಸಿದರೂ ಅವೆಲ್ಲಾ ಹಿಂಬಾಗಿಲ ಪ್ರವೇಶವೇ ಆಗಿದ್ದವು. ಆಪರೇಷನ್ ಕಮಲವೇ ಬಿಜೆಪಿಗೆ ಅಧಿಕಾರವನ್ನು ತಂದುಕೊಟ್ಟಿತ್ತು. ಈ ಬಾರಿ ಪಕ್ಷವನ್ನು ಬಹುಮತದ ಗಡಿ ದಾಟಿಸುವ ಅವಕಾಶವಂತೂ ಬೊಮ್ಮಾಯಿ ಅವರಿಗೆ ಇದೆ. ತಮಗಿರುವ ಅವಕಾಶವನ್ನು ಬಳಸಿಕೊಂಡು ಬೊಮ್ಮಾಯಿ ಬಿಜೆಪಿಗೆ ಬಹುಮತ ತಂದುಕೊಟ್ಟರೆ ಆ ಪಕ್ಷಕ್ಕೆ ಅದೊಂದು ದಾಖಲೆಯೇ ಆಗುತ್ತದೆ. ಅಷ್ಟರಮಟ್ಟಿಗೆ ಅವರು ಆಪರೇಷನ್ ಕಮಲದಂತಹ ಅನಾಚಾರವನ್ನು ತಡೆದಂತಾಗುತ್ತದೆ.

ರಾಜ್ಯದಲ್ಲಿ ಈಗ ಇರುವ ಮಾಸ್ ಲೀಡರ್‌ಗಳೆಲ್ಲಾ ಹಿಂದಕ್ಕೆ ಸರಿಯುತ್ತಾರೆ ಎಂಬ ಮುನ್ಸೂಚನೆಯಂತೂ ಸಿಕ್ಕಿದೆ. ಆದರೆ ರಾಜ್ಯದ ಎಲ್ಲ ಭಾಗಗಳ ಮತದಾರರನ್ನು ಪ್ರಭಾವಿಸುವ, ರಾಜ್ಯವನ್ನು ಸರಿಯಾದ ದಾರಿಯಲ್ಲಿ ಮುಂದಕ್ಕೆ ಕೊಂಡೊಯ್ಯುವ ನಾಯಕನ ಚಿತ್ರಣ ಸದ್ಯಕ್ಕಂತೂ ಗೋಚರಿಸುತ್ತಿಲ್ಲ. ಕರ್ನಾಟಕದ ಸದ್ಯದ ರಾಜಕೀಯ ಅಷ್ಟೊಂದು ಬರಡಾಗಿದೆ. ಜನರ ಮಧ್ಯದಿಂದ ಅಂತಹ ನಾಯಕನೊಬ್ಬ ಹುಟ್ಟಿ ಬರಬೇಕು. ಆ ನಾಯಕ ನಾಡಿನ ನಾಯಕನಾಗಬೇಕೆ ವಿನಾ ಪಕ್ಷದ ನಾಯಕನಾಗಬಾರದು. ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಪಕ್ಷ ಅನಿವಾರ್ಯವೇ ವಿನಾ ರಾಜ್ಯದ ಅಭಿವೃದ್ಧಿಗೆ ಪಕ್ಷದ ನಾಯಕ ಅನಿವಾರ್ಯವಲ್ಲ. ಅಂತಹ ನಾಯಕನೊಬ್ಬನನ್ನು ಹುಟ್ಟುಹಾಕುವ ಜವಾಬ್ದಾರಿ ಈಗ ಮತದಾರರ ಮೇಲೆ ಇದೆ.

ಹೊಲ ಸಿದ್ಧವಾಗಿದೆ. ಬೀಜ ಬಿತ್ತುವ ಕೆಲಸ ಬಾಕಿ ಇದೆ. ಆದರೆ ಹಣಕ್ಕೆ ಮಾರಾಟವಾದರೆ, ಕೊಡುಗೆಗಳಿಗೆ ಮಾರುಹೋದರೆ, ಜಾತಿಯ ಸಂಕೋಲೆಗೆ ಸಿಲುಕಿಕೊಂಡರೆ, ಮಠಾಧೀಶರ ಮಾತಿಗೆ ಮರುಳಾದರೆ ಬಿತ್ತುವ ಬೀಜವೂ ವಿಫಲವಾಗುತ್ತದೆ. ಮೊಳಕೆ ಯೊಡೆಯುವುದಿಲ್ಲ. ಚಿಗುರೊಡೆಯುವುದೂ ಇಲ್ಲ. ಫಲ ನೀಡುವುದೂ ಇಲ್ಲ.

ಜಾತಿ ಆಧಾರದಲ್ಲಿ ಇವ ನಮ್ಮವ, ಇವ ನಮ್ಮವ ಎಂದು ಮತ ಹಾಕಬೇಡಿ. ಬಸವಣ್ಣ ಹೇಳಿದಂತೆ, ನಿಜವಾದ ಅರ್ಥದಲ್ಲಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸುವ ವ್ಯಕ್ತಿಯನ್ನು ಗುರುತಿಸಿ, ಅವನನ್ನು ಇವ ನಮ್ಮವ ಇವ ನಮ್ಮವ ಎನ್ನಿ. ಹೊಸ ನಾಯಕ ಹುಟ್ಟಿಬರಲಿ.



ಚುರುಮುರಿ



ಸಾಧನಾ ಪಟ್ಟಿ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆಯಿಂದ ಒಂದು ಟೈಮರ್ ಇಟ್ಟುಕೊಂಡು, ಸೆಲ್ಫಿ ತೆಗೆದುಕೊಳ್ಳುವುದು, ಎಷ್ಟು ಎಂದು ಲೆಕ್ಕಹಾಕುವುದು, ಮತ್ತೆ ಸೆಲ್ಫಿ ತೆಗೆದುಕೊಳ್ಳುವುದು, ಹೀಗೆ ಮಾಡುತ್ತಲೇ ಇತ್ತು.

'ಏನು ಕಾರುಬಾರು ನಡಸೀಯಲೇ... ಫೇಸ್‌ಬುಕ್ಕಿಗಾಗಿ ಇಷ್ಟಕೊಂದು ಸೆಲ್ಫಿ ತೆಕ್ಕೊಳಾಕೆ ಹತ್ತೀಯೇನ್' ಎಂದು ಅಚ್ಚರಿಯಿಂದ ಕೇಳಿದೆ.

'ಎಲ್ಲಾದಕ್ಕೆ ಏನು ಏನು ಅಂತ ಅಡ್ಡಬಾಯಿ ಹಾಕ್ತೀ, ನಂದು ಒಂದೂ ಕೆಲಸ ಸುದ್ದ ನಡಿಯಂಗಿಲ್ಲ. ನಮ್ಮ ಅಕ್ಷಯ ಅಂಕಲ್ಲು 3 ನಿಮಿಷಕ್ಕೆ 184 ಸೆಲ್ಫಿ ತೆಗಿಸ್ಕಂಡು ಗಿನ್ನೆಸ್ ಮಾಡ್ಯಾನ. ನಾ 3 ನಿಮಿಷಕ್ಕೆ 186 ಸೆಲ್ಫಿ ತೆಕ್ಕಂಡು ಅವನ ಗಿನ್ನೆಸ್ ದಾಖಲೆ ಮುರಿಯೋದಕ್ಕೆ ಪ್ರಾಕ್ಟೀಸ್ ಮಾಡಾಕತ್ತೀನಿ' ಎಂದು ಮೆತ್ತಗೆ ಉಲಿಯಿತು.

'ಸೆಲ್ಫಿ ತಗಂಡು ರೆಕಾರ್ಡ್ ಮಾಡಿದಂಗೆ, ಅವನ ಸೆಲ್ಫಿ ಸಿನಿಮಾ ಬಾಕ್ಸಾಫೀಸಿನಾಗೆ ಪೂರಾ ತೋಪಾಗಿದ್ದೂ ಒಂದು ದಾಖಲೇನೇ ಇರಬಕು'.

'ಆದ್ರೂ ಇಷ್ಟ್ ನಟ-ನಟಿಯರೊಳಗೆ ವಿಶಿಷ್ಟ ದಾಖಲೆ ಮಾಡಿದ್ದು ಅಂವಾ ಒಬ್ಬನೇ... ಪ್ರಧಾನಿ ಸಂದರ್ಶನ ಮಾಡಿದ ಏಕಮಾತ್ರ ನಟ-ಪತ್ರಕರ್ತ ಅಂವಾ' ಬೆಕ್ಕಣ್ಣ ಅಭಿಮಾನದಿಂದ ಹೇಳಿತು.

'ಹಿಂತಾ ಎಲ್ಲ ಸಾಧನೆಗಳಿಗೆ ಗಿನ್ನೆಸ್, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಥರಾ ನಾವೇ ಒಂದು ರೆಕಾರ್ಡ್ ಬುಕ್ ಶುರು ಮಾಡಬೇಕು, ಹೌದಿಲ್ಲೋ?' ಬೆಕ್ಕಣ್ಣ ಮತ್ತೆ ಭಾರೀ ಗಂಭೀರವಾಗಿ ಕೇಳಿತು.

'ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಅಂತ ಶುರು ಮಾಡಬೌದು. ರಾಜಕಾರಣಿಗಳಲ್ಲಿ ಭಯಂಕರ ಜೋರು ಉರಿನಾಲಗೆ ರೆಕಾರ್ಡ್, ಚುನಾವಣೆ ಬರತಿದ್ದಂಗೆ ಯಾರು ಎಷ್ಟ್ ನಿಮಿಷದಲ್ಲಿ ಎಷ್ಟ್ ಭರವಸೆ ಕೊಡತಾರ ಅಂತ ಒಂದು ರೆಕಾರ್ಡ್...' ನಾನು ಪಟ್ಟಿ ಮಾಡತೊಡಗಿದೆ.

'ಎಷ್ಟ್ ಫಟಾಫಟ್ ಆಪರೇಶನ್ ಕಮಲ ಮಾಡಿದ್ರು ಅಂತ ಒಂದು ರೆಕಾರ್ಡ್. ಚುನಾವಣೆ ಬರತಿದ್ದಂಗೆ ಯಾವ ರಾಜ್ಯದ ಆಡಳಿತ ಪಕ್ಷ ಎಷ್ಟು ಕೋಟಿ ರೂಪಾಯಿ ಯೋಜನೆ ಶುರು ಮಾಡಿತು ಅಂತ ರೆಕಾರ್ಡ್. ಪ್ರಧಾನಿ- ಗೃಹ ಮಂತ್ರಿಗಳ ರಾಜ್ಯ ಭೇಟಿಗಳ ರೆಕಾರ್ಡ್...' ಬೆಕ್ಕಣ್ಣ ವಿವಿಧ ಸಾಧನೆಗಳ ಪಟ್ಟಿ ಮಾಡುತ್ತಲೇ ಇದೆ!

ದಿನದ ಟ್ವೀಟ್

ಮಹಿಳೆಯರ ಪ್ರಮಾಣ ಹೆಚ್ಚಲಿ



ಕರ್ನಾಟಕವು ಚುನಾವಣೆಗೆ ಸಜ್ಜಾಗುತ್ತಿರುವ ಈ ಹೊತ್ತಿನಲ್ಲಿ, ರಾಜಕೀಯ ಪಕ್ಷಗಳು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಚುನಾವಣಾ ಕಣಕ್ಕೆ ಇಳಿಸುತ್ತವೆ ಎಂದು ಭಾವಿಸುತ್ತೇನೆ. ಪ್ರಾತಿನಿಧಿಕ ರಾಜಕಾರಣದಲ್ಲಿ ಮಹಿಳೆಯರ ಪ್ರಮಾಣ ತೀರಾ ಕಡಿಮೆ ಇದೆ. ಇದು, ತಕ್ಷಣದಿಂದಲೇ ಬದಲಾಗಬೇಕಿದೆ.

ಪ್ರಣೀತಾ ಸುಭಾಷ್, ಚಿತ್ರನಟಿ

ಕಿಡಿನುಡಿ

ಎಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಕುಟುಂಬದ ಎಲ್ಲ ಸದಸ್ಯರಿಗೂ ಟಿಕೆಟ್ ಕೊಟ್ಟರೂ ಅವರಲ್ಲಿ ಬಡಿದಾಟ ಸಾಮಾನ್ಯ. ಮೊದಲು ಕುಟುಂಬ ಸರಿ ಮಾಡಿಕೊಳ್ಳಲಿ. ಆಮೇಲೆ ರಾಜ್ಯ ಆಳಲು ಬರಲಿ.



ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 27-2-1998

• **ಬಲಾಬಲ ಪರೀಕ್ಷೆ: ಕಲ್ಯಾಣ್ ಸಿಂಗ್‌ಗೆ ಜಯ**

ಲಖನೌ, ಫೆ. 26 (ಪಿಟಿಐ, ಯುಎನ್‌ಐ)– ಉತ್ತರಪ್ರದೇಶದ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸ್ಥಾನದ ಬಲಾಬಲ ಪರೀಕ್ಷೆಯಲ್ಲಿ ಬಿಜೆಪಿಯ ಕಲ್ಯಾಣ್ ಸಿಂಗ್ ಅವರು ಲೋಕತಾಂತ್ರಿಕ ಕಾಂಗ್ರೆಸ್‌ನ ಜಗದಾಂಬಿಕ ಪಾಲ್ ಅವರನ್ನು 29 ಮತಗಳ ಅಂತರದಿಂದ ಪರಾಭವಗೊಳಿಸಿದರು.

ವಿಧಾನಸಭೆಯ ಒಟ್ಟು 424 ಸದಸ್ಯರಲ್ಲಿ ಮತದಾನದಲ್ಲಿ 422 ಮಂದಿ ಭಾಗವಹಿಸಿದ್ದರು. ಅವರಲ್ಲಿ ಕಲ್ಯಾಣ್ ಸಿಂಗ್ ಅವರಿಗೆ 225 ಮತಗಳು ಬಂದವು.

ಬೆಳಿಗ್ಗೆ 11.55ಕ್ಕೆ ಪ್ರಾರಂಭವಾದ ಮತದಾನ ಸಂಜೆ 6.50ಕ್ಕೆ ಅಂತ್ಯಗೊಂಡಿತು. ಸ್ಪೀಕರ್ ಕೇಸರಿನಾಥ್ ತ್ರಿಪಾಠಿ ಮತ್ತು ಇನ್ನೊಬ್ಬ ಸದಸ್ಯರು ಮತ ಚಲಾಯಿಸಲಿಲ್ಲ. ಇದಾದ ತಕ್ಷಣ ಎಣಿಕೆ ಪ್ರಾರಂಭವಾಯಿತು.

ಮತದಾನ ಇನ್ನೇನು ಅಂತ್ಯವಾಯಿತು ಎನ್ನುವಾಗ ರಾಷ್ಟ್ರೀಯ ಭದ್ರತಾ ಕಾಯ್ದೆಯ ಅನ್ವಯ ಬಂಧಿತರಾಗಿರುವ ಐವರು ಶಾಸಕರನ್ನು ಸದನಕ್ಕೆ ಕರೆತರಲಾಯಿತು. ಅವರೂ ಮತ ಚಲಾಯಿಸಿದರು.

• **ಪ್ರಜಾವಾಣಿ ಇಂಟರ್‌ನೆಟ್ ಆವೃತ್ತಿ ಇಂದಿನಿಂದ**

ಪ್ರಿಯ ವಾಚಕರಿಗೆ,

ಫೆಬ್ರುವರಿ 27, ಶುಕ್ರವಾರದಿಂದ ಪ್ರಜಾವಾಣಿ ಇಂಟರ್‌ನೆಟ್ ಆವೃತ್ತಿಯನ್ನು ಪ್ರಾರಂಭಿಸುತ್ತಿದ್ದೇವೆ ಎಂದು ತಿಳಿಸಲು ಸಂತೋಷವಾಗುತ್ತದೆ.

ನಮ್ಮ ಇಂಟರ್‌ನೆಟ್ ವಿಳಾಸ: http:// www.prajavani.net

-ಸಂಪಾದಕ

50 ವರ್ಷಗಳ ಹಿಂದೆ

ಮಂಗಳವಾರ, 27-2-1973

• **ಎಷ್ಟು ಮಂದಿಗಾದರೂ ಕೆಲಸ ಒದಗಿಸಲು ಕೇಂದ್ರದ ಸಂಪೂರ್ಣ ನೆರವು**

ಬೆಂಗಳೂರು, ಫೆ. 26– ಘಟಪ್ರಭಾ, ಮಲಪ್ರಭಾ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳ ಮಣ್ಣಿನ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಹಾಗೂ ಅಭಾವಪೀಡಿತ ಪ್ರದೇಶಗಳಲ್ಲಿ ಎಷ್ಟು ಮಂದಿಗಾದರೂ ಉದ್ಯೋಗ ಒದಗಿಸುವ ರಾಜ್ಯ ಸರ್ಕಾರದ ಪ್ರಯತ್ನಗಳಿಗೆ ಪೂರ್ಣ ನೆರವು ನೀಡುವ ಬಗ್ಗೆ ಕೇಂದ್ರ ಸರ್ಕಾರ ಆಶ್ವಾಸನೆ ನೀಡಿದೆ.

ಅಭಾವ ಪರಿಸ್ಥಿತಿ ಪುನರಾವರ್ತನೆಯಾಗುವುದನ್ನು ತಪ್ಪಿಸಲು, ಶಾಶ್ವತ ಸೊತ್ತುಗಳನ್ನು ನಿರ್ಮಿಸುವುದಕ್ಕಾಗಿ, ಭೂಸಾರ ಸಂರಕ್ಷಣೆ, ಬಾವಿಗಳನ್ನು ಆಳ ಮಾಡುವುದು, ಸಣ್ಣ ನೀರಾವರಿ ಅಥವಾ ರಾಜ್ಯ ಸರ್ಕಾರಕ್ಕೆ ಸರಿಯೆಂದು ತೋರುವ ಯಾವುದೇ ಯೋಜನೆಗಳನ್ನು ಎತ್ತಿಕೊಳ್ಳುವುದಕ್ಕೂ ಕೇಂದ್ರದ ನೆರವಿನ ಭರವಸೆ ದೊರೆತಿದೆ.

• **'ಪಾಕ್ ಯುದ್ಧ ಕೈದಿಗಳ ಬಿಡುಗಡೆ ನಂತರವೇ ಬಾಂಗ್ಲಾದೇಶಕ್ಕೆ ಮನ್ನಣೆ'**

ನವದೆಹಲಿ, ಫೆ. 26– ಬಾಂಗ್ಲಾದೇಶಕ್ಕೆ ಮನ್ನಣೆ ನೀಡಬೇಕಾದಲ್ಲಿ ಭಾರತದಲ್ಲಿರುವ ಪಾಕಿಸ್ತಾನಿ ಯುದ್ಧ ಕೈದಿಗಳ ಬಿಡುಗಡೆಯಾಗಬೇಕೆಂದು ಅಧ್ಯಕ್ಷ ಭುಟ್ಟೊ ಅವರು ಹೊಸ ಷರತ್ತು ಹಾಕಿದ್ದಾರೆ.

ಪಾಕ್ ಯುದ್ಧ ಕೈದಿಗಳನ್ನು ವಿಚಾರಣೆಗೆ ಗುರಿಪಡಿಸಬಾರದು ಮತ್ತು ಬಾಂಗ್ಲಾದೇಶದಲ್ಲಿ ಪಾಕಿಸ್ತಾನೀಯರ ಜತೆ ಸಹಕರಿಸಿದವರನ್ನು ಶಿಕ್ಷಿಸಬಾರದೆಂದು ಅಮೆರಿಕನ್ ವಾರಪತ್ರಿಕೆ 'ಟೈಮ್'ಗೆ ನೀಡಿದ ಸಂದರ್ಶನ ಒಂದರಲ್ಲಿ ತಿಳಿಸಿದರೆಂದು ಪಾಕ್ ರೇಡಿಯೊ ಇಂದು ಬಿತ್ತರಿಸಿತು.

ಸಂಗತ

ಕಾಳ್ಗಿಚ್ಚು ತಡೆ: ಇದೆಂಥಾ ವಿಧಾನ?

ಕಾಳ್ಗಿಚ್ಚು ನಂದಿಸಲು ಅರಣ್ಯ ಇಲಾಖೆ ಸಿಬ್ಬಂದಿ ಪ್ರಸ್ತುತ ಅನುಸರಿಸುತ್ತಿರುವ ಕೆಲವು ಕ್ರಮಗಳು ಅವೈಜ್ಞಾನಿಕ ಮತ್ತು ಅಸುರಕ್ಷಿತವೇ ಸರಿ

• ಡಾ. ವಿನಯ ಶ್ರೀನಿವಾಸ್

ಸಕಲೇಶಪುರದ ಬಳಿ ಅರಣ್ಯ ಇಲಾಖೆ ನೌಕರರೊಬ್ಬರು ಇತ್ತೀಚೆಗೆ ಕಾಳ್ಗಿಚ್ಚನ್ನು ನಂದಿಸಲು ಹೋಗಿ ಮೃತಪಟ್ಟ ಸುದ್ದಿ ತಿಳಿದು ಮನಸ್ಸಿಗೆ ನೋವಾಯಿತು. 'ಕಾಡಿದ್ದರೆ ನಾಡು, ನಾಡಿದ್ದರೆ ನಾವು' ಎಂಬುದೇನೋ ನಿಜ, ಆದರೆ ಈ ಪ್ರಕ್ರಿಯೆಯಲ್ಲಿ ಮನುಷ್ಯನೊಬ್ಬನಿಗೆ ಪ್ರಾಣಾಪಾಯ ಇದೆ ಎಂದರೆ ಅದು ಖಂಡಿತಾ ಒಪ್ಪುವಂತಹದ್ದಲ್ಲ.

ಪ್ರತಿವರ್ಷವೂ ಜನವರಿ ಮಧ್ಯಭಾಗದಿಂದ ಏಪ್ರಿಲ್ ಮಧ್ಯಭಾಗದವರೆಗೆ ಕಾಳ್ಗಿಚ್ಚು ಕಾಣಿಸಿಕೊಳ್ಳುವ ಸಮಯ. ಕಾರಣಗಳು ಅನೇಕ. ಮೊದಲನೆಯದು, ಕಾಡುಗಳಿಂದ ಆವೃತವಾದ ಜಮೀನಿನ ಮಾಲೀಕರು ಕಾಡುಪ್ರಾಣಿಗಳ ಹಾವಳಿಯಿಂದ ಬೇಸತ್ತು ಈ ರೀತಿ ಬೆಂಕಿ ಹಚ್ಚಬಹುದು. ಬೆಂಕಿ ಕಂಡು ಪ್ರಾಣಿಗಳು ಬೆದರಿ ಓಡುತ್ತವೆ ಎಂಬುದು ಅವರ ಲೆಕ್ಕಾಚಾರ.

ಎರಡನೆಯದು, ಕೆಲವು ಕೃಷಿಕ ಕುಟುಂಬಗಳು ತಮ್ಮ ಜಾನುವಾರುಗಳ ಮೇವಿಗೆ ಕಾಡನ್ನೇ ಆಶ್ರಯಿಸಿರುತ್ತವೆ. ಬೆಳೆದುನಿಂತ ಬಲಿತ-ಒರಟು ಹುಲ್ಲು ಹಸುಕರುಗಳಿಗೆ ಸೂಕ್ತವಲ್ಲ ಎಂಬುದು ಕೆಲವರ ಅನಿಸಿಕೆ. ಹಾಗಾಗಿ ಈ ಒಣಗಿದ ಹುಲ್ಲಿಗೆ ಬೆಂಕಿ ಹಾಕಿ ಉರಿಸಿಬಿಟ್ಟರೆ, ಮಳೆ ಬಂದು ಹೊಸದಾಗಿ ಬೆಳೆಯುವ ಎಳೆ ಹುಲ್ಲು ಮೃದುವಾಗಿಯೂ ಹುಲುಸಾಗಿಯೂ ಇದ್ದು, ಜಾನುವಾರುಗಳಿಗೆ ಸ್ವಾದಿಷ್ಟ ಭೋಜನವಾಗಬಹುದು ಎನ್ನುವ ಆಸೆ.

ಮೂರನೆಯದು, ಕೆಲವು ಕಿಡಿಗೇಡಿಗಳ ಚೇಷ್ಟೆ ಮತ್ತು ಅಚಾತುರ್ಯದಿಂದ ಆಗುವಂತಹದ್ದು. ವಾರಾಂತ್ಯದ ಮೋಜು, ಮಸ್ತಿಗಾಗಿ ನಗರಗಳಿಂದ ಕಾಡಂಚಿನ ಪ್ರದೇಶಗಳಿಗೆ ಬರುವ ಕೆಲವರು ಸೇದಿ ಮುಗಿಸಿದ ಸಿಗರೇಟು, ಬೀಡಿಯ ತುಂಡುಗಳನ್ನು ಎಲ್ಲೆಂದರಲ್ಲಿ ಎಸೆಯುವುದುಂಟು. ರಾತ್ರಿ ವೇಳೆ ಹಾಕಿಕೊಳ್ಳುವ ಕ್ಯಾಂಪ್‌ಫೈರ್ ಅನ್ನು ಸಮರ್ಪಕವಾಗಿ ನಂದಿಸದೇ ಜಾಗ ಖಾಲಿ ಮಾಡುವುದುಂಟು. ಇಂತಹ ಹತ್ತು ಹಲವು ಕಾರಣಗಳಿಂದ ಅರಣ್ಯದಲ್ಲಿ ಅಗ್ನಿ ಕಾಣಿಸಿಕೊಳ್ಳಬಹುದು.

ಇನ್ನೂ ಅಪರೂಪದ ಕೆಲವು ಸಂದರ್ಭಗಳಲ್ಲಿ ಏರಿದ ಉಷ್ಣತೆ, ವೇಗವಾಗಿ ಬೀಸುವ ಗಾಳಿಯಂತಹ ಕಾರಣಗಳಿಂದ, ಎತ್ತರಕ್ಕೆ ಬೆಳೆದುನಿಂತ ಬಿದಿರು ಬೊಂಬುಗಳು ಒಂದಕ್ಕೊಂದು ಘರ್ಷಣೆಗೆ ಒಳಗಾಗಿ ಬೆಂಕಿ ಹತ್ತಿಕೊಳ್ಳಬಹುದು. ಬೆಂಕಿ ಹೇಗಾದರೂ ಹತ್ತಲಿ ಆದರೆ ಅದರಿಂದಾಗುವ ನಷ್ಟ ಅಪಾರ. ಗಿಡ ಮರಗಳು, ಪ್ರಾಣಿ ಪಕ್ಷಿಗಳು, ಮುಖ್ಯವಾಗಿ ನಿಧಾನವಾಗಿ ಚಲಿಸುವ ಮತ್ತು ನೆಲದ ಮಟ್ಟದಲ್ಲಿಯೇ ವಾಸಿಸುವ ಮೊಲ, ಮುಂಗುಸಿ, ಹಾವು, ಉಡದಂತಹವು ಕ್ಷಣಮಾತ್ರದಲ್ಲಿ ಅಸುನೀಗುತ್ತವೆ.

ಕಾಳ್ಗಿಚ್ಚಿನಲ್ಲಿ ಹಲವು ಬಗೆ. ಮೊದಲನೆಯದು, ಹುಲ್ಲುಗಾವಲಿನ ಮೇಲ್ಮೈಯಲ್ಲಷ್ಟೇ ಬೆಂಕಿ ಉರಿದು, ಒಣಗಿದ ಎಲೆಗಳು ಮತ್ತು ಹುಲ್ಲು ನಾಶವಾಗಬಹುದು. ಎರಡನೆಯದು, ಎತ್ತರದ ಮರಗಳಲ್ಲಿ ಕಂಡುಬರುವ ಬೆಂಕಿ. ಇದು ಮರವನ್ನು ಸಂಪೂರ್ಣವಾಗಿ ಸುಡುತ್ತಾ, ಹರಡುತ್ತಾ ಸಾಗಬಹುದು. ಮೂರನೆಯ ಬಗೆಯದು, ನೆಲದ ಮಟ್ಟದಲ್ಲಿಯೇ ಉರಿಯುತ್ತಾ ಹೋಗುವಂತಹದ್ದು.

ಹೀಗೆ ಬೆಂಕಿ ಕಂಡಾಗ ನಂದಿಸಲು ಮುಂದಾಗುವ ಅರಣ್ಯ ಇಲಾಖೆ ಸಿಬ್ಬಂದಿಗೆ ಸೂಕ್ತ ರಕ್ಷಣಾ ವ್ಯವಸ್ಥೆ ಇದೆಯೇ ಎಂಬುದನ್ನು ಅಧಿಕಾರಿಗಳು ಖಾತರಿ ಮಾಡಿಕೊಳ್ಳಬೇಕು. ಪ್ರಸ್ತುತ, ಬೆಂಕಿಯನ್ನು ನಂದಿಸಲು ನೀರು ಸಿಂಪಡಿಸುವುದು, ಮಣ್ಣು ಎರಚುವುದು, ದೊಡ್ಡ ಬಡಿಗೆಯಿಂದ ಬಡಿಯುವಂತಹ ವಿಧಾನಗಳಿವೆ. ಆದರೆ ಇವೆಲ್ಲವೂ ಅವೈಜ್ಞಾನಿಕ ಮತ್ತು ಅಸುರಕ್ಷಿತವೇ ಸರಿ. ಒಬ್ಬರೋ ಇಬ್ಬರೋ ಸಿಬ್ಬಂದಿ ಬೆಂಕಿ ಆರಿಸಲು ತೆರಳುವುದು ಎಂದಿಗೂ ಅಪಾಯಕರ. ಏಳೆಂಟು ಜನರ ಗುಂಪು ಸಮರ್ಪಕ ಯೋಜನೆಯೊಂದಿಗೆ ಕಾರ್ಯೋನ್ಮುಖ ಆಗಬೇಕು. ಒಬ್ಬರು ನೀರು ಸಿಂಪಡಿಸುವುದು, ಇನ್ನೊಬ್ಬರು ಬಡಿಗೆಯಲ್ಲಿ ಬಡಿಯುವುದು, ಮಗದೊಬ್ಬರು ಬೆಂಕಿ ಯಾವ ದಿಕ್ಕಿನಲ್ಲಿ ಪಸರಿಸುತ್ತಿದೆ ಎಂಬ ಸೂಚನೆಯನ್ನು ಕೊಡುವುದು ಮತ್ತೂ ಕೆಲವರು, ಬೆಂಕಿಯ ಕಾವಿಗೆ ಬಲು ಬೇಗನೇ ನಿರ್ಜಲೀಕರಣಕ್ಕೊಳಗಾಗುವ ಸಿಬ್ಬಂದಿಗೆ ಕುಡಿಯಲು ನೀರು ಪೂರೈಸುವುದನ್ನು ಮಾಡಬೇಕು.



ಇಂತಹ ಅಪಾಯಕರ ವೃತ್ತಿಯಲ್ಲಿ ತೊಡಗಿರುವವರಿಗೆ ಸುಲಭವಾಗಿ ಬೆಂಕಿ ತಗುಲದಂತಹ ಬಟ್ಟೆ, ಕೈಗವಸು, ಮುಖಗವಸು, ಸುರಕ್ಷಿತ ಬೂಟುಗಳು, ಸೂಕ್ತ ರಕ್ಷಣಾ ಕವಚಗಳಂತಹ ಸಾಮಗ್ರಿಗಳನ್ನು ಒದಗಿಸಬೇಕು. ಆದರೆ, ಇವೆಲ್ಲವನ್ನು ಅಳವಡಿಸಿಕೊಂಡರೂ ಇದೊಂದು ಅಸುರಕ್ಷಿತ ವಿಧಾನವೇ ಸರಿ. ಸುರಕ್ಷಿತ ತಂತ್ರಜ್ಞಾನ ಮತ್ತು ಸಲಕರಣೆಗಳನ್ನು ಬಳಸುವ ಬಗ್ಗೆ ಸರ್ಕಾರ ವಿಚಾರ ಮಾಡಬೇಕು. ಸುಧಾರಿತ, ಅತ್ಯಾಧುನಿಕ ಕ್ರಮವಾದ ವೈಮಾನಿಕ ಅಗ್ನಿಶಾಮಕ ವಿಧಾನಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಗಮನಹರಿಸಬೇಕು. ಇದರಿಂದ ಅಗ್ನಿ ಅನಾಹುತಗಳ ಜೊತೆಯಲ್ಲಿ ಸಿಬ್ಬಂದಿಯ ಪ್ರಾಣಹಾನಿಯನ್ನೂ ತಪ್ಪಿಸಬಹುದು. ಇದಕ್ಕಾಗಿ ವಿನಿಯೋಗಿಸುವ ಹಣವು ಪರೋಕ್ಷವಾಗಿ ರಾಷ್ಟ್ರದ ಅಭಿವೃದ್ಧಿಗಾಗಿಯೇ ಎಂಬ ಸತ್ಯಾಂಶವನ್ನು ಮನವರಿಕೆ ಮಾಡಿಕೊಳ್ಳಬೇಕು.

'ಯಾವುದೇ ಅವಘಡ ಬರದಂತೆ ತಡೆಯುವುದೇ ಮೇಲು' ಎಂಬಂತೆ, ಕಾಳ್ಗಿಚ್ಚು ಹುಟ್ಟದಂತೆ ಎಲ್ಲಾ ರೀತಿಯ ಬಿಗಿ ಕ್ರಮಗಳನ್ನೂ ಇಲಾಖೆ ತೆಗೆದುಕೊಳ್ಳಬೇಕು. ಮುಖ್ಯವಾಗಿ ಬೇಸಿಗೆಯ ದಿನಗಳಲ್ಲಿ ಜನರು ಅರಣ್ಯದ ಸುತ್ತಮುತ್ತಲ ಪ್ರದೇಶಗಳನ್ನು ವೀಕ್ಷಿಸಲು ಬರುವುದನ್ನು ಕಡ್ಡಾಯವಾಗಿ ನಿಷೇಧಿಸಬೇಕು. ಒಂದು ವೇಳೆ ಅನುಮತಿ ಪಡೆದು ಬಂದರೂ ಅಂತಹವರ ಮೇಲೆ ಸೂಕ್ಷ್ಮ ಕಣ್ಗಾವಲಿಡಬೇಕು. ಅಲ್ಲಿ ಕ್ಯಾಂಪ್‌ಫೈರ್ ನಂತಹ ಚಟುವಟಿಕೆಗಳಿಗೆ ಎಂದೂ ಅನುಮತಿ ಕೊಡಬಾರದು. ಇದೆಲ್ಲದರ ಜೊತೆಗೆ ನಾವೆಲ್ಲರೂ ನೆನಪಿಡಬೇಕಾದ ಸಂಗತಿಯೆಂದರೆ, ಕಾಳ್ಗಿಚ್ಚು ಸಂಭವಿಸದಂತೆ ತಡೆಯುವುದು ಬರೀ ಅರಣ್ಯ ಇಲಾಖೆಯ ಹೊಣೆಯಲ್ಲ, ಅದು ಪ್ರತಿಯೊಬ್ಬರ ಕರ್ತವ್ಯ.

ವಾಚಕರ ವಾಣಿ

ವಧು ಬೇಕಾಗಿದ್ದರೆ...

ಮಂಡ್ಯ ಜಿಲ್ಲೆಯಲ್ಲಿ ಅವಿವಾಹಿತ ಪುರುಷರು ಮದುವೆಗೆ ಹೆಣ್ಣು ಕರುಣಿಸುವಂತೆ ಪ್ರಾರ್ಥಿಸಿ ಮಲೆ ಮಾದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಮಾಡಿರುವುದು ಗಮನಾರ್ಹ ಸಂಗತಿ. ಆದರೆ ಸಮಾಜವು ಹೆಣ್ಣನ್ನು ಭ್ರೂಣಾವಸ್ಥೆಯಲ್ಲಿಯೇ ಚಿವುಟಿ ಈಗ ಮದುವೆಯಾಗಲು ಹುಡುಕಿದರೆ ಸಿಗುವುದೇ? ನಮ್ಮ ಮನೆಯಲ್ಲಿ ಹೆಣ್ಣು ಹುಟ್ಟುವುದು ಬೇಡ, ಆದರೆ ನನಗೆ ಮದುವೆಯಾಗಲು ಹೆಣ್ಣು ಬೇಕು ಎಂಬ ತತ್ವದಂತೆ ನಡೆದುಕೊಂಡರೆ ಹೆಣ್ಣು ಸಂತಾನ ಬೆಳೆಯುವುದು ಹೇಗೆ?

ಮೊದಲು ನಾವು ನಮ್ಮ ಮನೆಯಲ್ಲಿರುವ ಹೆಣ್ಣುಮಕ್ಕಳಿಗೆ ಹಾಗೂ ಹೆಣ್ಣು ಸಂತಾನದ ಹುಟ್ಟುವಿಕೆಗೆ ಪ್ರೋತ್ಸಾಹ ನೀಡಬೇಕು. ಆಗ ಮಾತ್ರ ಇಂತಹ ಸಮಸ್ಯೆಗಳಿಗೆ ಪರಿಹಾರ ಸಾಧ್ಯ.

ಚನ್ನಬಸವ, ರಾಯಚೂರು

ದ್ವೇಷಮಯ ವಾತಾವರಣ ಮೂಡಿಸುವುದಿಲ್ಲವೇ?

ಭಾರತದ ಸಂವಿಧಾನದ ಅನ್ವಯ, ಪ್ರಜೆಗಳು ಗುಪ್ತವಾಗಿ ಮತ ಚಲಾಯಿಸುವ ಮೂಲಕ ಜನಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಚುನಾವಣೆ ಸಮೀಪಿಸುತ್ತಿದ್ದಂತೆಯೇ ನಮ್ಮ ಸುದ್ದಿವಾಹಿನಿಗಳು ಊರೂರಿಗೆ ತೆರಳಿ 'ನೀವು ಯಾರಿಗೆ ಮತ ಹಾಕುತ್ತೀರಿ' ಎಂದು ಪ್ರಶ್ನಿಸುತ್ತಾ ಜನಸಾಮಾನ್ಯರ ಮೂತಿಗೆ ಮೈಕ್ ಹಿಡಿಯುತ್ತಿವೆ. ಹೀಗೆ ಪ್ರಶ್ನಿಸುವುದು ಸಂವಿಧಾನಬಾಹಿರ. ಇಂತಹ ಪ್ರಶ್ನೆಯನ್ನು ಕೇಳಬಾರದು ಎಂಬ ಸಾಮಾನ್ಯ ಜ್ಞಾನ ಇಲ್ಲದಿರುವುದು ವಿಷಾದಕರ. ಈ ಬಗೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದಾಗ, ತಾವು ಯಾರಿಗೆ ಮತ ಹಾಕುತ್ತೇವೆ ಎಂಬುದನ್ನು ಮತದಾರರು ಡಂಗೂರ ಸಾರಿದಂತಾಗಿ, ಊರಿನಲ್ಲಿ ದ್ವೇಷಮಯ ವಾತಾವರಣ ಮೂಡುವುದಿಲ್ಲವೇ?

ಪಿ.ಜೆ.ರಾಘವೇಂದ್ರ, ಮೈಸೂರು

ವರುಣನಿಗೊಂದು ಕೋರಿಕೆ...

ಇತ್ತೀಚೆಗೆ ಬೆಂಗಳೂರಿಗೆ ಭೇಟಿ ಇತ್ತ ನಾನು, ನಾನಿದ್ದ ಬಡಾವಣೆ ಸೇರಿದಂತೆ ಇತರೆಡೆ ರಾತ್ರಿ ಬೆಳಗಾಗುವುದರಲ್ಲಿ ಹೊಸದಾಗಿ ಡಾಂಬರು ಹಾಕಿದ ರಸ್ತೆಗಳನ್ನು ಗಲ್ಲಿಗಲ್ಲಿಗಳಲ್ಲಿ ಕಂಡೆ! ಹೌದು, ವಿಧಾನಸಭೆ, ಬಿಬಿಎಂಪಿಯ ಮುಂಬರುವ ಚುನಾವಣೆಗಳ ಡಾಂಬರು ಇದಾಗಿರಬಹುದು! ಈಗ ವರುಣ ದೇವನಲ್ಲಿ ನನ್ನದೊಂದು ಕೋರಿಕೆ: ಈ ಚುನಾವಣೆಗಳು ಮುಗಿಯುವವರೆಗೂ ಬೆಂಗಳೂರಿಗೆ ತಲೆ ಹಾಕದಿರು, ದಯವಿಟ್ಟು... ಇನ್ನು ಕೆಲದಿನಗಳ ಮಟ್ಟಿಗಾದರೂ ಈ ಡಾಂಬರು ರಸ್ತೆಗಳು ಉಳಿಯಲಿ!

ಪೂರ್ಣಿಮಾ ಎಚ್.ಎನ್., ಹೊಸನಗರ

ಭ್ರಷ್ಟಾಚಾರ ಅಳಿಸಲಿಲ್ಲವೇಕೆ?

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಳ್ಳಾರಿ ಜಿಲ್ಲೆಯಲ್ಲಿನ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾತನಾಡುತ್ತಾ 'ಪ್ರಧಾನಿ ನರೇಂದ್ರ ಮೋದಿ ಮತ್ತು ಯಡಿಯೂರಪ್ಪ ಅವರ ಮೇಲೆ ಒಂದು ಸಲ ವಿಶ್ವಾಸವಿಟ್ಟು ಬಿಜೆಪಿಗೆ ಬಹುಮತ ಕೊಡಿ, ಕರ್ನಾಟಕದಲ್ಲಿ ಭ್ರಷ್ಟಾಚಾರಮುಕ್ತ ಆಡಳಿತ ಕೊಡುತ್ತೇವೆ' ಎಂಬ ಭರವಸೆ ನೀಡಿದ್ದಾರೆ. ರಾಜ್ಯದಲ್ಲಿ ಭ್ರಷ್ಟಾಚಾರ ಇನ್ನೂ ವ್ಯಾಪಕವಾಗಿ ಇದೆ ಮತ್ತು ಅದನ್ನು ಈವರೆಗೂ ಅಳಿಸಲಾಗಿಲ್ಲ ಎಂಬುದು ಇವರ ಮಾತಿನಿಂದ ನಮಗೆ ಅರ್ಥವಾಗುತ್ತದೆ. ನರೇಂದ್ರ ಮೋದಿಯವರು ಈಗಾಗಲೇ ಎರಡು ಅವಧಿಗೆ ಪ್ರಧಾನಿಯಾಗಿ ಮತ್ತು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದಾರೆ ಹಾಗೂ ಈಗ ಅವರದೇ ಪಕ್ಷ ಎರಡೂ ಕಡೆ ಅಧಿಕಾರದಲ್ಲಿದೆ. ಮತ್ತೇಕೆ ಭ್ರಷ್ಟಾಚಾರವನ್ನು ಅಳಿಸಲಾಗಿಲ್ಲ ಎಂಬ ಪ್ರಶ್ನೆ ನಾಗರಿಕರನ್ನು ಕಾಡುತ್ತದೆ (ನನ್ನ ಮೇಲೆ ದೇಶದ್ರೋಹದ ಮೊಕದ್ದಮೆ ಹಾಕುವುದಿಲ್ಲವೆಂದು ನಂಬುತ್ತೇನೆ).

ಮಂತ್ರಿಮಹೋದಯರ ಮಟ್ಟದ ಭ್ರಷ್ಟಾಚಾರ ಹೋಗಲಿ ಆಡಳಿತಾತ್ಮಕ ಭ್ರಷ್ಟಾಚಾರವನ್ನೂ ಇವರ ಪಕ್ಷದ ನೇತೃತ್ವದ ಸರ್ಕಾರಗಳು ಈವರೆಗೆ ಹೋಗಲಾಡಿಸಿಲ್ಲ. ರಾಜ್ಯದ ಯಾವುದೇ ಕಚೇರಿಯಲ್ಲೂ ಲಂಚವಿಲ್ಲದೆ ಯಾವ ಕೆಲಸವೂ ನಡೆಯುತ್ತಿಲ್ಲವೆಂಬುದು ಗೃಹ ಸಚಿವರಿಗೆ ತಿಳಿಯದಿರುವುದು ಆಶ್ಚರ್ಯಕರ. ಕರ್ನಾಟಕದ ಹೊರತಾಗಿ ಬಿಜೆಪಿ ಅಧಿಕಾರದಲ್ಲಿರುವ ಇತರ ರಾಜ್ಯಗಳಲ್ಲೂ ಭ್ರಷ್ಟಾಚಾರ ತನ್ನ ಕಬಂಧಬಾಹುಗಳನ್ನು ದಶದಿಕ್ಕುಗಳಿಗೂ ಹರಡಿದೆ. ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಭ್ರಷ್ಟಾಚಾರವನ್ನು ಬುಡಮೇಲು ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂಬುದು ಅಕ್ಷರಶಃ ನಿಜ. ಬಹುಶಃ ಭಾರತದಲ್ಲಿ ಭ್ರಷ್ಟಾಚಾರಮುಕ್ತ ಆಡಳಿತದ ಕನಸನ್ನು ಬಿತ್ತುತ್ತಿರುವವರಲ್ಲಿ ಶಾ ಮೊದಲಿಗರೂ ಅಲ್ಲ, ಕಡೆಯವರೂ ಅಲ್ಲ. ನಿತ್ಯ ಗೋಳು ಅನುಭವಿಸುವವರು ಪ್ರಜೆಗಳು ಮಾತ್ರ.

ಮೋದೂರು ಮಹೇಶಾರಾಧ್ಯ, ಕಲ್ಲುಣಿಕೆ, ಹುಣಸೂರು

ಬೇಕು ಮತದಾರರಿಗೆ ಹೊಸ ಭರವಸೆ

ಈಗೇನು ಎಲ್ಲ ಪಕ್ಷಗಳೂ ಮತದಾರರಿಗೆ ಅಕ್ಕಿ-ಬೇಳೆ, ಸೀರೆ-ಪಂಚೆ, ಸಾಲಮನ್ನಾ ಭರವಸೆಗಳನ್ನು ನೀಡಲು ಪೈಪೋಟಿಯ ಮೇಲೆ ಹೊರಟಿವೆ. ಅದರ ಜೊತೆಗೆ ಈ ಭರವಸೆಗಳನ್ನೂ ನೀಡುವತ್ತ ಯೋಚಿಸಬೇಕಾಗಿ ವಿನಂತಿಸುತ್ತೇನೆ. ಸರ್ಕಾರಿ ಸಂಬಳ ಸವಲತ್ತು ಪಡೆಯುವ ಎಲ್ಲರ ಮಕ್ಕಳು ಮೊಮ್ಮಕ್ಕಳೂ ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲೇ ಓದುವಂತೆ ಮಾಡುತ್ತೇವೆ. ಎಲ್ಲ ಪಟ್ಟಣಗಳಲ್ಲೂ ಎರಡು ಕಿಲೊಮೀಟರ್ ಸುತ್ತಳತೆಯಲ್ಲೇ ಪ್ರಾಥಮಿಕ ಶಾಲೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇರುವಂತೆ ಮಾಡುತ್ತೇವೆ. ಎಲ್ಲ ಸರ್ಕಾರಿ ಶಾಲೆಗಳಿಗೂ ಮಕ್ಕಳು ಸೈಕಲ್‌ನಲ್ಲೇ ಹೋಗಿಬರುವಂತೆ ಸುರಕ್ಷಿತ ಮಾರ್ಗಗಳನ್ನು ರೂಪಿಸುತ್ತೇವೆ.

ಕೆರೆಗಳಿಂದ ಮೇಲೆತ್ತಿ ತರುವ ಪ್ರತಿ ಕಿಲೊಗ್ರಾಮ್ ಹೂಳಿಗೂ ತಲಾ ಒಂದು ರೂಪಾಯಿ ಮತ್ತು ತಿಪ್ಪೆಯಿಂದ ಹೆಕ್ಕಿ ತರುವ ಪ್ರತಿ ಕಿಲೊ ಪ್ಲಾಸ್ಟಿಕ್ಕಿಗೂ ಐದು ರೂಪಾಯಿ ನೀಡುತ್ತೇವೆ. ಪ್ರತೀ ಪಂಚಾಯಿತಿಯಲ್ಲೂ ಗ್ರಾಮಸಭೆಯ ಶಿಫಾರಸಿನ ಮೇರೆಗೆ ತಲಾ 50 ಮನೆಗಳಿಗೆ ಸೋಲಾರ್ ವಿದ್ಯುತ್ ಮತ್ತು ಮಳೆಸಂಗ್ರಹದ ಮಾದರಿಗಳನ್ನು ನಿರ್ಮಿಸಿಕೊಡುತ್ತೇವೆ. 2029ರ ಲೋಕಸಭಾ ಚುನಾವಣೆಯ ವೇಳೆಗೆ ಪ್ರತೀ ಮತದಾರ ತನ್ನಷ್ಟೆತ್ತರ ಬೆಳೆಸಿದ ಒಂದೊಂದು ಗಿಡಕ್ಕೂ ತಲಾ ನೂರು ರೂಪಾಯಿ ನೀಡುತ್ತೇವೆ.

ನಾಗೇಶ ಹೆಗಡೆ, ಕೆಂಗೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕನ್ನಡನಾಡಿನ ಕ್ರೀಡಾ ಕಲ್ಪವೃಕ್ಷ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ 1972ರಲ್ಲಿ ಡೆಕ್ಕನ್ ಅಥ್ಲೆಟಿಕ್ಸ್ ಕೂಟಕ್ಕೆ ಜೇನಾಬಾಯಿ ದಾಸ್, ಬಿ.ಡಿ. ಮಾನಸಿಂಗ್ ಹಾಗೂ ಕೆ.ಎ. ನೆಟ್ಟಕಲ್ಲಪ್ಪ ಅವರು ಆಗಮಿಸಿದ ಸಂದರ್ಭ



1974ರಲ್ಲಿ ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿದ ಕರ್ನಾಟಕ ಕ್ರಿಕೆಟ್ ತಂಡವನ್ನು ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿರುವ ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಕಚೇರಿಯಲ್ಲಿ ಸನ್ಮಾನಿಸಿದ ಸಂದರ್ಭ



ಚಿಕ್ಕಬಳ್ಳಾಪುರದಲ್ಲಿ 2017ರಲ್ಲಿ ನಡೆದ ಕೆ.ಎ. ನೆಟ್ಟಕಲ್ಲಪ್ಪ ಸ್ಮಾರಕ ರಸ್ತೆ ಓಟದಲ್ಲಿ ಅಥ್ಲೀಟ್‌ಗಳು



1972ರ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ವಿಜೇತ ರಾಜ್ಯ ತಂಡವು ರೈಲು ನಿಲ್ದಾಣಕ್ಕೆ ಬಂದಿಳಿದಾಗ ಡೆಕ್ಕನ್ ಅಥ್ಲೆಟಿಕ್ ಕ್ಲಬ್ ಅಧ್ಯಕ್ಷರಾದ ಕೆ.ಎ. ನೆಟ್ಟಕಲ್ಲಪ್ಪ ಮತ್ತು ಪದಾಧಿಕಾರಿಗಳು ಸ್ವಾಗತಿಸಿದರು

• ಗಿರೀಶ ದೊಡ್ಡಮನಿ

ಪ್ರಜಾವಾಣಿ ಪತ್ರಿಕಾ ಸಂಸ್ಥೆಯು ಹಲವಾರು ಸಾಮಾಜಿಕ ಕಾರ್ಯಗಳಲ್ಲಿಯೂ ತನ್ನನ್ನು ತೊಡಗಿಸಿಕೊಂಡಿದೆ. ಕರ್ನಾಟಕ ಏಕೀಕರಣದ ನಂತರ ಹಾಗೂ ಅದಕ್ಕೂ ಮುನ್ನ ನಾಡಿನ ಬಹಳಷ್ಟು ಕ್ಷೇತ್ರಗಳಿಗೆ ತನ್ನದೇ ಆದ ಕೊಡುಗೆ ನೀಡಿದ ಶ್ರೇಯ ಈ ಸಂಸ್ಥೆಯದ್ದು. ಅದರಲ್ಲೂ ಕ್ರೀಡಾರಂಗಕ್ಕೆ ನೀಡಿದ ಕೊಡುಗೆಗಳು ಅನನ್ಯವಾಗಿವೆ.

ಕನ್ನಡ ಭಾಷೆಯಲ್ಲಿ ಕ್ರೀಡಾ ಪತ್ರಿಕೋದ್ಯಮಕ್ಕೆ ಅಡಿಪಾಯ ಹಾಕಿ ಭವ್ಯ ಸೌಧ ನಿರ್ಮಿಸಿದ ಶ್ರೇಯವೂ 'ಪ್ರಜಾವಾಣಿ'ಗೆ ಸಲ್ಲಬೇಕು. ಪ್ರಜಾವಾಣಿಯಲ್ಲಿ 50ರ ದಶಕದಿಂದಲೇ ಕ್ರೀಡಾ ಚಟುವಟಿಕೆಗಳ ಸುದ್ದಿಗಳ ಪ್ರಕಟಣೆಗೆ ಆದ್ಯತೆ ನೀಡಲಾಗಿದೆ. 1960ರ ದಶಕದಲ್ಲಿ ಕ್ರೀಡೆಗಾಗಿಯೇ ಒಂದು ಪುಟ ಆರಂಭಿಸಿದ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆ ಪ್ರಜಾವಾಣಿಗೆ ಸಲ್ಲುತ್ತದೆ.

ಇದಲ್ಲದೇ ವಿವಿಧ ಕ್ರೀಡೆಗಳ ಅಭಿವೃದ್ಧಿಗಾಗಿ ನೀಡಿದ ಕೊಡುಗೆಗಳು ಕಲ್ಪವೃಕ್ಷಗಳಾಗಿವೆ. ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಸಂಸ್ಥಾಪಕರಾದ ಕೆ.ಎನ್. ಗುರುಸ್ವಾಮಿ ಹಾಗೂ ಕಾರ್ಯನಿರ್ವಾಹಕ ವ್ಯವಸ್ಥಾಪಕರಾಗಿದ್ದ ಕೆ.ಎ. ನೆಟ್ಟಕಲ್ಲಪ್ಪ ಅವರ ಕ್ರೀಡಾಪ್ರೇಮ ಅಪಾರವಾದದ್ದು. ಕ್ರೀಡೆಗಳ ಆಯೋಜನೆ, ಕ್ರೀಡಾ ಸಂಸ್ಥೆಗಳ ಸ್ಥಾಪನೆ ಹಾಗೂ ಬೆಳವಣಿಗೆ, ಕ್ರೀಡಾಪ್ರತಿಭೆಗಳ ಪೋಷಣೆಗೆ ಅವರು ತೋರಿದ ಆಸಕ್ತಿಯು ನಾಡಿನ ಆಸ್ತಿಯಾಗಿ ಉಳಿದಿವೆ. ಹತ್ತು ಹಲವು ಪ್ರಥಮಗಳ ದಾಖಲೆಗಳೂ ಇದರಲ್ಲಿ ಸೇರಿವೆ.

ಒಲಿಂಪಿಕ್ ಆಂದೋಲನಕ್ಕೆ ಅಡಿಪಾಯ

ಮನುಕುಲದ ಸೌಹಾರ್ದದ ಪ್ರತೀಕ ಒಲಿಂಪಿಕ್ ಕೂಟ. ಜಗತ್ತಿನ ಅತ್ಯಂತ ದೊಡ್ಡ ಹಾಗೂ ಪ್ರತಿಷ್ಠಿತ ಕ್ರೀಡಾಕೂಟ. ಇಂತಹದೊಂದು ಆಂದೋಲನಕ್ಕೆ ಕರ್ನಾಟಕದ ಪಾಲೂ ದೊಡ್ಡದು. ಅದಕ್ಕೆ ಕಾರಣಕರ್ತರಲ್ಲಿ ಕೆ.ಎ. ನೆಟ್ಟಕಲ್ಲಪ್ಪನವರು ಪ್ರಮುಖರು.

ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಹುಟ್ಟು ಪಡೆದಿದ್ದು ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪ್ರಜಾವಾಣಿ ಕಚೇರಿಯಲ್ಲಿ.

1960ರ ದಶಕದಲ್ಲಿ ಕ್ರೀಡಾ ಪ್ರೋತ್ಸಾಹಕರಾಗಿ ಅಪಾರ ಜನಮನ್ನಣೆ ಪಡೆದಿದ್ದ ನೆಟ್ಟಕಲ್ಲಪ್ಪ ಅವರನ್ನು ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ಮಹಾರಾಜ ಯದವೇಂದ್ರ ಸಿಂಗ್ ಅವರು ಸಂಪರ್ಕಿಸಿ ಅಧಿಕೃತವಾಗಿ ಒಲಿಂಪಿಕ್ ಸಂಸ್ಥೆಯನ್ನು ಸ್ಥಾಪಿಸಲು ಸಲಹೆ ನೀಡಿದರು.

1958ರ ಫೆಬ್ರುವರಿ 23ರಂದು ಸಭೆ ನಡೆಯಿತು. ಅದರಲ್ಲಿ ರಾಜ್ಯ ಫುಟ್‌ಬಾಲ್ ಸಂಸ್ಥೆಯ ಪಿ.ಐ.ಜೋಸೆಫ್, ವಾಲಿಬಾಲ್ ಸಂಸ್ಥೆಯ ಆರ್.ಕೃಷ್ಣಪ್ಪ, ಕೊಕ್ಕೊ ಸಂಸ್ಥೆಯ ಜಯರಾಮ ರೆಡ್ಡಿ, ಕಬಡ್ಡಿ ಸಂಸ್ಥೆಯ ಸಿ.ಎಂ.ರಾಮಕೃಷ್ಣ ರಾವ್, ವೇಟ್‌ಲಿಫ್ಟಿಂಗ್ ಸಂಸ್ಥೆಯ ಪಿ.ಎಂ.ನಾರಾಯಣ ಸ್ವಾಮಿ, ಅಥ್ಲೆಟಿಕ್ ಸಂಸ್ಥೆಯ ಎ.ಆರ್.ಚಿಕ್ಕಪಾಪಯ್ಯ, ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಎನ್.ಗಂಗಯ್ಯ, ಕುಸ್ತಿ ಸಂಸ್ಥೆಯ ಎಂ.ವಿ.ಕೃಷ್ಣಮೂರ್ತಿ ಪಾಲ್ಗೊಂಡಿದ್ದರು.

ಆ ಸಭೆಯಲ್ಲಿಯೇ ಮೈಸೂರು ರಾಜ್ಯ ಒಲಿಂಪಿಕ್ ಸಂಸ್ಥೆ ಹುಟ್ಟು ಪಡೆಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಆರ್. ಶ್ರೀನಿವಾಸನ್ ಅಧ್ಯಕ್ಷರಾಗಿಯೂ, ಮೇಯರ್ ಜೀನಾಬಾಯ್ ದೇವಿದಾಸ್ ಉಪಾಧ್ಯಕ್ಷರಾಗಿಯೂ, ಚಿಕ್ಕಪಾಪಯ್ಯ ಮಹಾ ಕಾರ್ಯದರ್ಶಿಯಾಗಿಯೂ, ವಿ.ಬೈರಪ್ಪ ಖಜಾಂಚಿಯಾಗಿಯೂ ನೇಮಕಗೊಂಡರು. ಮೈಸೂರು ಪ್ರಾಂತ್ಯದ ಕೊನೆಯ ಮಹಾರಾಜರೂ, ಆ ಕಾಲದಲ್ಲಿ ಮೈಸೂರು ರಾಜ್ಯದ ರಾಜ್ಯಪಾಲರೂ ಆಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಈ ಸಂಸ್ಥೆಗೆ ಮಹಾಪೋಷಕರಾಗಿರಲು ಒಪ್ಪಿಕೊಂಡರು.

ಅದೇ ಸಂದರ್ಭದಲ್ಲಿ ರಾಜ್ಯ ಒಲಿಂಪಿಕ್ ಸಂಸ್ಥೆಯ ನೀತಿ ನಿಯಮಾವಳಿ ರಚನಾ ಸಮಿತಿಯಲ್ಲಿದ್ದ ನೆಟ್ಟಕಲ್ಲಪ್ಪ, ಪಿ.ಶಿವಶಂಕರ್, ಕ್ಯಾಪ್ಟನ್ ಎಂ.ಜಿ.ವಿಜಯಸಾರಥಿ ಮತ್ತು ಪಿ.ಐ.ಜೋಸೆಫ್ ರಾಜ್ಯದಲ್ಲಿ ಈ ಸಂಘಟನೆಗೆ ಭದ್ರ ಅಡಿಪಾಯ ಹಾಕಿದರು. ನೆಟ್ಟಕಲ್ಲಪ್ಪನವರು 'ಪ್ರಜಾವಾಣಿ'ಯ ಕಟ್ಟಡದಲ್ಲೇ ನೂತನ ಒಲಿಂಪಿಕ್ ಸಂಸ್ಥೆಯ ಕಚೇರಿಗಾಗಿ ಒಂದು ಕೊಠಡಿಯನ್ನು ನೀಡಿದರು.

ರಾಜ್ಯ ಒಲಿಂಪಿಕ್ ಸಂಸ್ಥೆ ಬಹುಕಾಲ 'ಪ್ರಜಾವಾಣಿ'ಯ ಕಟ್ಟಡದಲ್ಲೇ ತನ್ನ ಚಟುವಟಿಕೆಗಳನ್ನು ನಡೆಸಿತು. ನಂತರ ಅದರ ಕಚೇರಿ ಮೇಯೊಹಾಲ್‌ನಲ್ಲಿ, ಹಲಸೂರಿನಲ್ಲಿದ್ದ ಜೀನಾಬಾಯ್ ದೇವಿದಾಸ್ ಅವರ ಮಾಲೀಕತ್ವದ ಕಟ್ಟಡದಲ್ಲಿ ಕೆಲಕಾಲ ಇತ್ತು. ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಕಂಠೀರವ ಕ್ರೀಡಾಂಗಣದಲ್ಲಿ ಕೆಒಎ ಕಚೇರಿ ಕಾರ್ಯನಿರ್ವಹಿಸುತ್ತಿದೆ. ಕೆಲವು ವರ್ಷಗಳ ಹಿಂದೆ ಒಲಿಂಪಿಕ್ ಭವನ ಕೂಡ ನಿರ್ಮಾಣಗೊಂಡಿತು.

ನೆಟ್ಟಕಲ್ಲಪ್ಪ ಅವರು ರಾಜ್ಯ ಒಲಿಂಪಿಕ್ ಸಂಸ್ಥೆಯ ಮಹಾ ಕಾರ್ಯದರ್ಶಿಯಾಗಿದ್ದರಲ್ಲದೆ, ಭಾರತ ಒಲಿಂಪಿಕ್ ಸಂಸ್ಥೆಯ ಉಪಾಧ್ಯಕ್ಷರೂ ಆಗಿದ್ದರು. ರಾಜ್ಯ ವೇಟ್‌ಲಿಫ್ಟಿಂಗ್ ಸಂಸ್ಥೆ, ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ, ರಾಜ್ಯ ಮೌಂಟನೇರಿಂಗ್ ಸಂಸ್ಥೆಗಳಿಗೆ ಅಧ್ಯಕ್ಷರಾಗಿದ್ದರಲ್ಲದೆ, ರಾಜ್ಯ ಅಥ್ಲೆಟಿಕ್ ಸಂಸ್ಥೆಯ ಕಾರ್ಯದರ್ಶಿಯಾಗಿದ್ದರು. ಡೆಕ್ಕನ್ ಅಥ್ಲೆಟಿಕ್ ಕ್ಲಬ್‌ನ ಅಧ್ಯಕ್ಷರಾಗಿದ್ದರು.

ಇದಲ್ಲದೆ ಹಣಕಾಸಿನ ತೊಂದರೆಯಲ್ಲಿ ಸಿಲುಕಿದ್ದ ಇತರ ಕ್ರೀಡಾ ಸಂಸ್ಥೆಗಳಿಗೂ ಅವರು ನೆರವಿನಹಸ್ತ ಚಾಚಿದ್ದಕ್ಕೆ ಹಲವಾರು ನಿದರ್ಶನಗಳಿವೆ

'ನಾನು ಆಗಿನ್ನೂ ಬ್ಯಾಸ್ಕೆಟ್‌ಬಾಲ್ ಆಡುತ್ತಿದ್ದೆ. ನೆಟ್ಟಕಲ್ಲಪ್ಪನವರು ನನಗೆ ಹಲವು ಬಾರಿ ಸಹಾಯ ಮಾಡಿದ್ದಾರೆ. ಪ್ರಜಾವಾಣಿ ಕಚೇರಿಗೆ ಬಂದು ಅವರನ್ನು ಭೇಟಿಯಾದಾಗಲೆಲ್ಲ ಸಲಹೆ, ಸಹಾಯಗಳನ್ನು ನೀಡಿ ಬೆನ್ನುತಟ್ಟುತ್ತಿದ್ದರು' ಎಂದು ಪ್ರಸ್ತುತ ಥ್ರೋಬಾಲ್ ಸಂಸ್ಥೆ ಅಧ್ಯಕ್ಷರಾಗಿರುವ ರಾಮಣ್ಣ ಸ್ಮರಿಸುತ್ತಾರೆ.

ಈಜುಕೇಂದ್ರ: ಬೆಂಗಳೂರಿನಲ್ಲಿ ಕಳೆದ ಹತ್ತುವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೆಟ್ಟಕಲ್ಲಪ್ಪ ಈಜುಕೇಂದ್ರವು ಹಲವು ಅಂತರರಾಷ್ಟ್ರೀಯ ಈಜುಪಟುಗಳ ಬೆಳವಣಿಗೆಗೆ ವೇದಿಕೆ ಆಗಿದೆ.

ಡಿಎಸಿ ಸ್ಥಾಪನೆ

ನೆಟ್ಟಕಲ್ಲಪ್ಪನವರ ದೂರದೃಷ್ಟಿ ಮತ್ತು ಕ್ರೀಡಾಪ್ರೇಮದ ಪ್ರತೀಕವಾಗಿ ಡೆಕ್ಕನ್ ಅಥ್ಲೆಟಿಕ್ ಕ್ಲಬ್ 1972ರಲ್ಲಿ ಆರಂಭವಾಯಿತು. ಒಲಿಂಪಿಯನ್ ಕೆನೆತ್ ಪೋವೆಲ್, ಅಥ್ಲೀಟ್ ಲಿಂಗಪ್ಪ, ಉದಯ ಕೆ ಪ್ರಭು, ಸುನೀಲ್ ಅಬ್ರಹಾಂ, ಡೇವಿಡ್ ಪ್ರೇಮನಾಥ್ ಅವರಂತಹ ಪ್ರಮುಖರು ಈ ಕ್ಲಬ್‌ನಲ್ಲಿದ್ದವರು.

ಕಂಠೀರವ ಕ್ರೀಡಾಂಗಣದಲ್ಲಿ ಪ್ರಮುಖ ಅಥ್ಲೆಟಿಕ್ಸ್ ಕೂಟಗಳನ್ನು ಆಯೋಜಿಸಲಾಯಿತು. ಅಲ್ಲದೇ ಶಾಲೆಯ ಮಕ್ಕಳಿಗೆ ವಾರಾಂತ್ಯದ ಅಥ್ಲೆಟಿಕ್ಸ್ ಕೂಡ ನಡೆಯುತ್ತಿತ್ತು.

'ನಾನು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದವನು. ಆಗ ಬೆಂಗಳೂರಿಗೆ 18 ರೂಪಾಯಿ ಬಸ್ ಚಾರ್ಜ್ ಇತ್ತು. 80ರ ದಶಕದಲ್ಲಿ ಡೆಕ್ಕನ್ ಅಥ್ಲೆಟಿಕ್ ಕ್ಲಬ್ ನಡೆಸುತ್ತಿದ್ದ ಕೂಟಗಳಲ್ಲಿ ಭಾಗವಹಿಸುತ್ತಿದ್ದೆ. ಅಲ್ಲಿಂದಲೇ ನಾನು ಬೆಳಕಿಗೆ ಬಂದಿದ್ದು. ಪ್ರತಿ ಬಾರಿ ಕೂಟ ಮುಗಿದ ನಂತರ ನೆಟ್ಟಕಲ್ಲಪ್ಪನವರ ಮನೆಗೆ ಭೇಟಿ ನೀಡುವುದು ನಮ್ಮ ರೂಢಿಯಾಗಿತ್ತು. ಅವರು ನಮ್ಮನ್ನು ಆತ್ಮೀಯವಾಗಿ ಮಾತನಾಡಿಸಿ ಅಗತ್ಯ ಹಣಸಹಾಯ ಮಾಡುತ್ತಿದ್ದರು. ಓಟದ ಕುರಿತು ಮಾರ್ಗದರ್ಶನ ಕೂಡ ನೀಡುತ್ತಿದ್ದರು' ಎಂದು ಮಾಜಿ ಅಂತರರಾಷ್ಟ್ರೀಯ ಅಥ್ಲೀಟ್ ಉದಯ ಕೆ. ಪ್ರಭು ನೆನಪಿಸಿಕೊಳ್ಳುತ್ತಾರೆ.

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸ್ಕೋರ್‌ಬೋರ್ಡ್

ಬೇರೆ ಕ್ರೀಡೆಗಳ ಜೊತೆಗೆ ಕ್ರಿಕೆಟ್ ಬೆಳವಣಿಗೆಯಲ್ಲಿಯೂ 'ಪ್ರಜಾವಾಣಿ' ಬಳಗದ ಕೊಡುಗೆ ಇದೆ. 60–70ರ ದಶಕದಲ್ಲಿ ದೇಶದಲ್ಲಿ ಕ್ರಿಕೆಟ್ ಈಗಿನಷ್ಟು ಜನಪ್ರಿಯವಾಗಿರಲಿಲ್ಲ. 70ರ ದಶಕದಲ್ಲಿ ಬೆಂಗಳೂರಿನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ನಿರ್ಮಾಣವಾಯಿತು.

ಅಲ್ಲಿ 1973ರಲ್ಲಿ ಈ ಕ್ರೀಡಾಂಗಣದಲ್ಲಿ ಮೊದಲ ಬಾರಿಗೆ ಇಂಗ್ಲೆಂಡಿನ ಎಂ.ಸಿ.ಸಿ ಹಾಗೂ ಭಾರತದ ದಕ್ಷಿಣ ವಲಯ ತಂಡಗಳ ನಡುವಣ ಪಂದ್ಯ ನಡೆಯಿತು. ಈ ಸಂದರ್ಭದಲ್ಲಿ ಪ್ರಜಾವಾಣಿ ಬಳಗದಿಂದ ದೊಡ್ಡ ಸ್ಕೋರ್‌ಬೋರ್ಡ್ ಕೊಡುಗೆ ನೀಡಲಾಯಿತು. ಅದನ್ನು ಪ್ರಜಾವಾಣಿ ಮಾಲೀಕರಾದ ಕೆ.ಎನ್. ಗುರುಸ್ವಾಮಿ ಅವರು ಉದ್ಘಾಟಿಸಿದರು.

ಆಗ ದಕ್ಷಿಣ ವಲಯ ತಂಡದಲ್ಲಿ ಜಿ.ಆರ್. ವಿಶ್ವನಾಥ್, ಮನ್ಸೂರ್ ಅಲಿ ಖಾನ್ ಪಟೌಡಿ, ಅಬಿದ್ ಅಲಿ, ಸೈಯದ್ ಕಿರ್ಮಾನಿ, ಎಸ್. ವೆಂಕಟರಾಘವನ್ ಮತ್ತು ಬಿ.ಎಸ್. ಚಂದ್ರಶೇಖರ್ ಅವರು ಆಡಿದ್ದರು. ಮೈದಾನದ ಆಯಕಟ್ಟಿನ ಸ್ಥಳದಲ್ಲಿ ಅಳವಡಿಸಲಾಗಿರುವ ಈ ಸ್ಕೋರ್ ಬೋರ್ಡ್ ಇವತ್ತಿಗೂ ಕಾರ್ಯನಿರ್ವಹಣೆಯಲ್ಲಿದೆ. 1974ರಲ್ಲಿ ಕ್ರೀಡಾಂಗಣದಲ್ಲಿ ಟೆಸ್ಟ್ ಕ್ರಿಕೆಟ್ ಆಯೋಜನೆಗೆ ಮಾನ್ಯತೆ ಲಭಿಸಿತ್ತು. ಮೊದಲ ಟೆಸ್ಟ್‌ನಲ್ಲಿ ಭಾರತ ಹಾಗೂ ವೆಸ್ಟ್ ಇಂಡೀಸ್ ಮುಖಾಮುಖಿಯಾಗಿದ್ದವು. ವಿಂಡೀಸ್ ತಂಡದ ಗಾರ್ಡನ್ ಗ್ರಿನೀಜ್, ವಿವಿಯನ್ ರಿಚರ್ಡ್ಸ್ ಮತ್ತು ಭಾರತ ತಂಡದ ಹೇಮಂತ್ ಕಾನಿಟ್ಕರ್ ಪದಾರ್ಪಣೆ ಮಾಡಿದ್ದರು. ಅಲ್ಲಿಂದ ಇಲ್ಲಿಯವರೆಗೂ ಹಲವಾರು ತಾರಾ ಕ್ರಿಕೆಟಿಗರ ಹೆಸರು ಮತ್ತು ಸ್ಕೋರ್‌ಗಳನ್ನು ಈ ಫಲಕದ ಮೂಲಕ ಅಭಿಮಾನಿಗಳ ಕಣ್ಮನಗಳಿಗೆ ಉಣಬಡಿಸಲಾಗಿದೆ.


2011ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ ಆರಂಭಕ್ಕೂ ಮುನ್ನ ಬೃಹತ್ ಕ್ಯಾನ್ವಾಸ್ ಮೇಲೆ ಒಂದು ಲಕ್ಷ ಅಭಿಮಾನಿಗಳ ಶುಭಹಾರೈಕೆ ಹಾಗೂ ಹಸ್ತಾಕ್ಷರಗಳನ್ನು ದಾಖಲಿಸುವ ಅಭಿಯಾನವನ್ನು ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಬಳಗವು ಮಾಡಿತ್ತು. ನಂತರ ಆ ಕ್ಯಾನ್ವಾಸ್ ಅನ್ನು ಭಾರತ ತಂಡದ ನಾಯಕ ಮಹೇಂದ್ರಸಿಂಗ್ ಧೋನಿಯವರಿಗೆ ಉಡುಗೊರೆಯಾಗಿ ನೀಡಲಾಗಿತ್ತು.



ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಬಳಗದ ಮಾಲೀಕರಾದ ಕೆ.ಎನ್. ಗುರುಸ್ವಾಮಿಯವರು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ 1973ರಲ್ಲಿ ಸ್ಕೋರ್ ಬೋರ್ಡ್ ಉಡುಗೊರೆ ನೀಡಿ ಉದ್ಘಾಟಿಸಿದರು. ಅಂದು ಎಂ.ಸಿ.ಸಿ ಹಾಗೂ ದಕ್ಷಿಣ ವಲಯ ತಂಡಗಳ ನಡುವಣ ಪಂದ್ಯ ನಡೆಯಿತು

ಬಿಟಿಸಿಗೆ ಆಧಾರಸ್ತಂಭ

ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಬೆಳವಣಿಗೆಯಲ್ಲಿ ಕೆ.ಎನ್. ಗುರುಸ್ವಾಮಿಯವರ ಪಾತ್ರ ಬಹಳ ದೊಡ್ಡದು. ರೇಸ್ ಚಟುವಟಿಕೆಗಳ ಬಗ್ಗೆ ಅವರಿಗೆ ಅಪಾರವಾದ ಅಕ್ಕರೆ ಇತ್ತು. ಸುಮಾರು ಮೂರು ದಶಕ ಅವರು ಬಿಟಿಸಿಯಲ್ಲಿ ಸಕ್ರಿಯರಾಗಿದ್ದರು. ಸ್ಟುವರ್ಡ್ ಆಗಿದ್ದರು. ಎಂಟು ವರ್ಷಗಳ ಕಾಲ ಚೇರ್ಮನ್ ಮತ್ತು ಸೀನಿಯರ್ ಸ್ಟುವರ್ಡ್ ಆಗಿದ್ದರು. ಅವರ ಕಾರ್ಯನಿರ್ವಹಣೆಯ ಸಂದರ್ಭದಲ್ಲಿಯೇ ಬೆಂಗಳೂರು ರೇಸ್ ಕ್ಲಬ್ ಲಿಮಿಟೆಡ್, ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಆಯಿತು. ಇದರಿಂದಾಗಿ ದೇಶದ ಪ್ರತಿಷ್ಠಿತ ರೇಸಿಂಗ್ ಕ್ಲಬ್‌ಗಳ ಸಾಲಿಗೆ ಸೇರಿತು.



ಗುರುಸ್ವಾಮಿಯವರ ದೂರದೃಷ್ಟಿ ಮತ್ತು ರೇಸಿಂಗ್ ಪ್ರೀತಿ ಅಸಾಧಾರಣವಾದದ್ದು.

ಅದರಲ್ಲೂ ಬೆಂಗಳೂರು ಅಮೆಚೂರ್ ರೈಡಿಂಗ್ ಕ್ಲಬ್ ಪ್ರವರ್ಧಮಾನಕ್ಕೆ ಬರಲು ಅವರು ಕಾರಣ. ಯುವ ರೈಡರ್‌ಗಳನ್ನು ಪ್ರೋತ್ಸಾಹಿಸಲು ತಮ್ಮ ಸ್ವಂತ ಹಣವನ್ನು ಬಹಳಷ್ಟು ಖರ್ಚು ಮಾಡಿದ್ದಾರೆ. ಎಷ್ಟೋ ಬಾರಿ ತಮ್ಮ ಕ್ಯಾಡಿಲಾಕ್ ಕಾರ್‌ನಲ್ಲಿ ಮನೆಯಿಂದ ಊಟ, ತಿಂಡಿ ತಂದು ಎಲ್ಲರಿಗೂ ಉಣಬಡಿಸುತ್ತಿದ್ದರು. ಎಲ್ಲರಿಗೂ ನೆರವಿನ ಹಸ್ತ ಚಾಚುತ್ತಿದ್ದ ಉದಾರ ಹೃದಯಿ ಅವರಾಗಿದ್ದರು. ತಮ್ಮೊಂದಿಗೆ ಕಾರ್ಯನಿರ್ವಹಿಸುತ್ತಿದ್ದವರ ಮೇಲೆ ಸಂಪೂರ್ಣ ಭರವಸೆ ಇಡುತ್ತಿದ್ದರು. ಅಪಾರ ಶಿಸ್ತಿನ ವ್ಯಕ್ತಿತ್ವದವರಾಗಿದ್ದರು.


ಪಿ.ಜಿ. ಬೆಳ್ಳಿಯಪ್ಪ, ಮಾಜಿ ಚೇರ್ಮನ್, ಬಿಟಿಸಿ

ಶಟಲ್ ಬ್ಯಾಡ್ಮಿಂಟನ್‌ಗೆ ಬುನಾದಿ

ಪ್ರಸ್ತುತ ಭಾರತದ ಬ್ಯಾಡ್ಮಿಂಟನ್ ಆಟಗಾರರು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಅಮೋಘ ಸಾಧನೆ ಮಾಡುತ್ತಿದ್ದಾರೆ. ಒಲಿಂಪಿಕ್ ಕೂಟಗಳಲ್ಲಿಯೂ ಪದಕಗಳನ್ನು ಜಯಿಸಿದ್ದಾರೆ. ಆದರೆ, 1960ರ ದಶಕದಲ್ಲಿ ಆಗಿನ ಮೈಸೂರು ರಾಜ್ಯದಲ್ಲಿ ಬಾಲ್ ಬ್ಯಾಡ್ಮಿಂಟನ್ ಮಾತ್ರ ಜನಪ್ರಿಯವಾಗಿತ್ತು. ಶಟಲ್ ಬ್ಯಾಡ್ಮಿಂಟನ್ ಅಷ್ಟಾಗಿ ಇರಲಿಲ್ಲ.

ಮೈಸೂರು ಬ್ಯಾಡ್ಮಿಂಟನ್ ಸಂಸ್ಥೆಯನ್ನು ಕೆ.ಎ. ನೆಟ್ಟಕಲ್ಲಪ್ಪನವರು ಹಾಗೂ ರಮೇಶ್ ಪಡುಕೋಣೆ ಆರಂಭಿಸಿದರು. ನೆಟ್ಟಕಲ್ಲಪ್ಪನವರು ಅಧ್ಯಕ್ಷರಾಗಿ ರಾಜ್ಯದ ಪ್ರತಿಭೆಗಳಿಗೆ ಪ್ರೋತ್ಸಾಹದ ಧಾರೆಯನ್ನೇ ಎರೆದರು. ಅವರಲ್ಲಿ ದಿಗ್ಗಜ ಪ್ರಕಾಶ್ ಪಡುಕೋಣೆ ಕೂಡ ಒಬ್ಬರು.

ಇತ್ತೀಚೆಗೆ ನಡೆದ ಸಮಾರಂಭವೊಂದರಲ್ಲಿ ಪ್ರಕಾಶ್ ಪಡುಕೋಣೆ ಅವರು,'1962ರಲ್ಲಿ ನಾನು ಬ್ಯಾಡ್ಮಿಂಟನ್ ಆಡಲು ಆರಂಭಿಸಿದೆ. ಮದುವೆ ಸಭಾಂಗಣವೊಂದರಲ್ಲಿ ಬ್ಯಾಡ್ಮಿಂಟನ್ ಅಭ್ಯಾಸ ಮಾಡುತ್ತಿದ್ದೆ. ಆಗ ಮೈಸೂರು ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆಗೆ ನೆಟ್ಟಕಲ್ಲಪ್ಪನವರು ಅಧ್ಯಕ್ಷರು ಹಾಗೂ ನನ್ನ ತಂದೆ ರಮೇಶ್ ಕಾರ್ಯದರ್ಶಿಯಾಗಿದ್ದರು. ಇವರಿಬ್ಬರೇ ರಾಜ್ಯದಲ್ಲಿ ಬ್ಯಾಡ್ಮಿಂಟನ್ ಸಂಸ್ಥೆ ಆರಂಭಿಸಿದವರು. 19 ವರ್ಷದೊಳಗಿನವರ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಡಲು ಮೊದಲ ಬಾರಿ ಆಯ್ಕೆಯಾಗಿದ್ದೆ. ಆಗ ನನಗೆ 12 ವರ್ಷ. ಚೆನ್ನೈನಲ್ಲಿ ನಡೆದ ಆ ಟೂರ್ನಿಗೆ ಸ್ವಂತ ಖರ್ಚಿನಲ್ಲಿ ಹೋಗಬೇಕಿತ್ತು. ಅಷ್ಟೊಂದು ವೆಚ್ಚ ಭರಿಸುವ ಶಕ್ತಿ ತಮಗಿಲ್ಲ ಎಂದು ತಂದೆ ಹೇಳಿದ್ದರು. ಆಗ ನೆಟ್ಟಕಲ್ಲಪ್ಪನವರು 'ನೀನು ಆಡಲು ಹೋಗುತ್ತಿದ್ದಿ' ಎಂದು ಹೇಳಿ ಪ್ರಾಯೋಜಕತ್ವ ನೀಡಿದರು. ನನಗೆ ನೆನಪಿರುವಂತೆ ₹ 150 ಅಥವಾ ₹200 ಕೊಟ್ಟರು. ಅದರಲ್ಲಿ ನನ್ನ ಹಾಗೂ ಸಹೋದರನ ಎಲ್ಲ ವೆಚ್ಚಗಳನ್ನು ಭರಿಸಲು ಸಾಧ್ಯವಾಗಿತ್ತು' ಎಂದು ಸ್ಮರಿಸಿದರು.




ಪ್ರಕಾಶ್ ಪಡುಕೋಣೆ

ಇವತ್ತು ಕರ್ನಾಟಕದ ಪ್ರಕಾಶ್ ಅವರ ಪ್ರೇರಣೆಯಿಂದಾಗಿ ದೇಶದಾದ್ಯಂತ ಹಲವಾರು ಬ್ಯಾಡ್ಮಿಂಟನ್ ಆಟಗಾರರು ಮತ್ತು ಆಟಗಾರ್ತಿಯರು ಸಾಧನೆ ಮಾಡಿದ್ದಾರೆ. ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಪ್ರಮುಖ ಆಟಗಾರರ ಬೆಳವಣಿಗೆಗೆ ಕಾರಣವಾಗಿದೆ.

ಕರ್ನಾಟಕ ಬಿಲಿಯರ್ಡ್ಸ್ ಸಂಸ್ಥೆಗೂ ನೆಟ್ಟಕಲ್ಲಪ್ಪನವರು ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಸಂಸ್ಥೆಯ ಬೆಳವಣಿಗೆಗೆ ಮಾರ್ಗದರ್ಶನ ನೀಡಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಪ್ರಯೋಜಕ ಕೊಳೆ

ಕೊಳಕೆಂದು, ಹುಳುಕೆಂದು, ಹೇಸಿಗೆಯ ಹುಳುವೆಂದು |
ಇಳೆಯೊಳಾವುದರೊಳಮಸಹ್ಯಪಡಬೇಡ ||
ಬೆಲೆಯುಂಟು ಕೊಳೆಗಮೀ ಜೀವಸಾಮಗ್ರಿಯಲಿ |
ಕೊಳೆ ಶುಚಿಖ್ಯಾಪಕವೊ – ಮಂಕುತಿಮ್ಮ || 830 ||

ಪದ-ಅರ್ಥ: ಇಳೆಯೊಳಾವುದರೊಳಮಸಹ್ಯ-ಪಡಬೇಡ = ಇಳೆಯೊಳು + ಆವುದರೊಳಮ್ (ಯಾವುದರಲ್ಲಿಯೂ) + ಅಸಹ್ಯಪಡಬೇಡ, ಕೊಳೆಗಮೀ = ಕೊಳೆಗಂ(ಕೊಳೆಗೂ) + ಈ, ಶುಚಿ-ಖ್ಯಾಪಕ = ಶುಚಿಯನ್ನು ಜ್ಞಾಪಕಕ್ಕೆ ತರುವುದು.

ವಾಚ್ಯಾರ್ಥ: ಕೊಳಕು, ಹುಳುಕು, ಹೇಸಿಗೆಯ ಹುಳು ಎಂದು ಪ್ರಪಂಚದಲ್ಲಿ ಯಾವುದನ್ನೂ ಅಸಹ್ಯದಿಂದ ಕಾಣಬೇಡ. ಈ ಜೀವಸಾಮಗ್ರಿಯಲ್ಲಿ ಕೊಳಕಿಗೂ ಒಂದು ಬೆಲೆಯುಂಟು. ಕೊಳೆ ನಮಗೆ ಶುಚಿಯ ಜ್ಞಾಪಕ ತರುತ್ತದೆ.

ವಿವರಣೆ: ಕಸವೆಂದರೆ ಎಲ್ಲರಿಗೂ ಅಸಹ್ಯ. ಅದೊಂದು ಪೀಡೆ. ಆದರಿಂದಲೇ ರೋಗ, ರುಜಿನಗಳು ಎಂಬ ಭಾವನೆ ದಟ್ಟವಾಗಿದೆ. ಆದರೆ ಕಗ್ಗ ಹೇಳುತ್ತದೆ, ಜಗತ್ತಿನಲ್ಲಿ ಯಾವುದನ್ನೂ ಕಸವೆಂದು ಅಸಹ್ಯಪಡಬೇಡ. ಕಸಕ್ಕೂ ಒಂದು ಪ್ರಮುಖ ಸ್ಥಾನವಿದೆ.

ಕಸವೆಂದರೆ ಬೇಡವಾದದ್ದು, ಒಬ್ಬರಿಗೆ ಬೇಡವಾದದ್ದು ಮತ್ತೊಬ್ಬರಿಗೆ ಬೇಕಾಗಬಹುದಲ್ಲವೆ? ಮರದ ದಿಮ್ಮಿಯನ್ನು ಕೊರೆದು ಹಲಗೆ ಮಾಡಿದಾಗ ಉಳಿದ ಮರದ ಸಿಪ್ಪೆ, ಧೂಳು ಕಸ ನಿಜ. ಆದರೆ ಅದೇ ಉರುವಲಾಗಿ ಶಾಖ ಕೊಡುತ್ತದೆ, ಪ್ರಯೋಜನಕಾರಿಯಾಗುತ್ತದೆ. ನಮ್ಮ ಗ್ರಾಮಗಳಲ್ಲಿ, ನಗರ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸ ಕಾಣುತ್ತದೆ. ಅದು ನಗರಗಳನ್ನು ಅಸಹ್ಯಗೊಳಿಸುತ್ತದೆ. ಅದನ್ನು ನಿವಾರಿಸುವ ಬಗೆ ತಿಳಿಯದೆ ಸರಕಾರಗಳು ಒದ್ದಾಡುತ್ತವೆ, ಕೋಟಿ ಕೋಟಿ ಹಣವನ್ನು ಖರ್ಚು ಮಾಡುತ್ತವೆ. ಆದರೆ ಕೆಲವು ದೇಶಗಳಿಗೆ ಈ ಕಸವೇ ವರವಾಗಿದೆ. ಯೂರೋಪಿನ ಸ್ವೀಡನ್, ನೆದರ್ ಲ್ಯಾಂಡ್‌ಗಳಲ್ಲಿ ಕಸಕ್ಕೆ ತುಂಬ ಬೇಡಿಕೆ ಇದೆ. ಅವು ಪಕ್ಕದ ದೇಶಗಳಿಂದ ಕೋಟ್ಯಾಂತರ ಟನ್‌ಗಳಷ್ಟು ಕಸವನ್ನು ಆಮದು ಮಾಡಿಕೊಂಡು ವಿದ್ಯುತ್ ಶಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳುತ್ತವೆ. ಅವರಿಗೆ ಕಸ ತ್ಯಾಜ್ಯವಲ್ಲ, ಅತ್ಯಂತ ಅವಶ್ಯವಾದ ವಸ್ತು.

ಜರ್ಮನಿಯಲ್ಲಿ ತಾಮ್ರದ ಅದಿರನ್ನು ಶುದ್ಧಮಾಡಿ, ತಾಮ್ರವನ್ನು ತೆಗೆಯುವ ಕಾರ್ಯ ನಡೆಯುತ್ತಿತ್ತು. ಅಲ್ಲಿಯ ತಾಮ್ರದ ಅಂಶ ಮುಗಿಯಿತೆಂದು ವಿಜ್ಞಾನಿಗಳು ಆ ಗಣಿಯನ್ನು ಹಾಗೆಯೇ ಬಿಟ್ಟುಬಿಟ್ಟರು. ಮುಂದೆ ಮಳೆ ಬಂದು, ಗಣಿಯಲ್ಲಿ ನೀರು ತುಂಬಿಕೊಂಡಿತು. ಅದೊಂದು ಪರಿಸರಕ್ಕೆ ಆಪತ್ತೆಂದೇ ತೋರಿತು. ನಿಂತ ನೀರನ್ನು ಹೊರಗೆ ಪಂಪ್ ಮಾಡಿ ತೆಗೆದಾಗ ವಿಜ್ಞಾನಿಗಳಿಗೆ ಆಶ್ಚರ್ಯ! ರಾಶಿ, ರಾಶಿ ತಾಮ್ರ ಅಲ್ಲಿ ಇದೆ! ಅವರು ಕಂಡು ಹಿಡಿದದ್ದೆಂದರೆ, ನಿಂತ ನೀರಿನಲ್ಲಿದ್ದ ಬ್ಯಾಕ್ಟೀರಿಯಗಳು ತಾಮ್ರದ ಉಳಿದ ಅಂಶಗಳನ್ನು ಶುದ್ಧಮಾಡಿ ತಾಮ್ರವನ್ನು ತೆಗೆದಿದ್ದವು. ಯಾವ ಬ್ಯಾಕ್ಟೀರಿಯಾ ಒಂದು ಉಪದ್ರವ ಎಂದು ಭಾವಿಸಿದ್ದರೋ ಅದೇ ಅತ್ಯಂತ ಉಪಯೋಗಿಯಾಗಿತ್ತು.

ಆದ್ದರಿಂದ ಕೊಳಕು, ಹುಳುಕು ಎಂದು ಅಸಹ್ಯ ಬೇಡ. ಈ ಪ್ರಪಂಚದಲ್ಲಿ ಅದಕ್ಕೂ ಒಂದು ಪ್ರಮುಖ ಸ್ಥಾನವಿದೆ. ಕೊಳಕಿನ ಇನ್ನೊಂದು ಪ್ರಯೋಜನವೆಂದರೆ, ಅದಿರುವುದರಿಂದಲೇ ಶುಚಿ ಎಂದರೆ ಏನೆಂಬುದು ಅರ್ಥವಾಗುವುದು. ರಾತ್ರಿಯಿಂದ ಹಗಲಿಗೆ ಅರ್ಥವಿರುವಂತೆ, ಸಾವಿನಿಂದ ಬದುಕಿಗೊಂದು ಘನತೆ ಇರುವಂತೆ, ಕೊಳೆಯಿಂದ ಶುಚಿತ್ವದ ಅರಿವು ನಮಗಾಗುತ್ತದೆ. ಕೊಳೆ, ಶುಚಿಯನ್ನು ನೆನಪು ಮಾಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಫೆಬ್ರುವರಿ 27, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ಅಷ್ಟಮಿ ಗಂ. 26-22 ನಕ್ಷತ್ರ: ರೋಹಿಣಿ ಅಹೋರಾತ್ರ ಯೋಗ: ವೈಧೃತಿ ಗಂ. 16-11, ಕರಣ: ವಿಷ್ಟಿ ಗಂ. 13-36, ಕುಂಭ ಮಾಸದ 14 ನೇ ದಿನ.

ರಾಹುಕಾಲ : ಬೆಳಗ್ಗೆ 07-30 –09-00

ಸೂರ್ಯೋದಯ : 06-51 ಸೂರ್ಯಾಸ್ತ : 06-35

ಮುಸ್ಲಿಂ ದಿನಾಂಕ : 06 ಶಬನ್

ಅದೃಷ್ಟ ಸಂಖ್ಯೆ : 1, 8

ಮೇಷ: ಕೊಡುಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿವೆ. ಅನಿವಾರ್ಯವಾಗಿ ದೂರ ಪ್ರಯಾಣ ಕೈಗೊಳ್ಳಬೇಕಾಗುವುದು. ಕೃಷಿ ಕೆಲಸಗಳಿಗಾಗಿ ಪರಿಶ್ರಮ ವಹಿಸುವಿರಿ. ವಾಹನ ಚಲಾಯಿಸುವಾಗ ಹೆಚ್ಚಿನ ಎಚ್ಚರಿಕೆ ಅತ್ಯಗತ್ಯ.

ವೃಷಭ: ಕುಟುಂಬದ ಅಭಿವೃದ್ಧಿಯಲ್ಲಿ ನಿಮ್ಮ ಅವಿರತ ಪ್ರಯತ್ನ ಫಲಕಾರಿಯಾಗುವುದು. ಸಜ್ಜನರ ಸಹವಾಸದಿಂದ ಪ್ರಾಪಂಚಿಕ ಜ್ಞಾನ ವೃದ್ಧಿ. ಉನ್ನತ ಅಧಿಕಾರಿಗಳ ಮೇಲೆ ಇದ್ದ ತಪ್ಪು ತಿಳುವಳಿಕೆಗಳು ದೂರಾಗುವಂತಾಗುವುದು.

ಮಿಥುನ: ವೈವಾಹಿಕ ಜೀವನದಲ್ಲಿ ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ಕೃಷಿಗೆ ಸಂಬಂಧಿಸಿದಂತೆ ಪಡೆದ ಸಾಲವನ್ನು ಹಿಂದಿರುಗಿಸುವ ಶಕ್ತಿ ದೊರಕಲಿದೆ.

ಕರ್ಕಾಟಕ: ನಿಮ್ಮ ಬದುಕಿಗೊಂದು ಹೊಸ ಆಯಾಮ ಸಿಗಲಿದೆ. ಈ ತಿರುವಿನಲ್ಲಿ ನಿಮ್ಮ ಸ್ನೇಹಿತನ ಪಾತ್ರ ತುಂಬ ಪ್ರಮುಖವಾಗಿರುತ್ತದೆ. ಬಹುಕಾಲಗಳಿಂದ ಬಾಕಿ ಇರುವ ಸಾಲ ತೀರಿಸುವಿಕೆಯಂತಹ ಯೋಜನೆ ಇದ್ದರೆ ಒಳ್ಳೆಯದು.

ಸಿಂಹ: ತಲೆಶೂಲೆ, ಮಾನಸಿಕ ಅಸ್ವಸ್ಥತೆಯಂಥ ತೊಂದರೆಗಳುಂಟಾಗುವ ಸಂಭವ. ಅನಗತ್ಯ ವಿಚಾರಗಳ ಬಗ್ಗೆ ಚಿಂತೆ ಬೇಡ. ವ್ಯಾಪಾರ ಮಾಡುತ್ತಿರುವವರು ತಮ್ಮ ವ್ಯವಹಾರವನ್ನು ವಿದೇಶಕ್ಕೆ ಪಸರಿಸುವ ಯೋಚನೆ ಮಾಡಬಹುದು.

ಕನ್ಯಾ: ಅಧಿಕಾರಿ ವರ್ಗದವರಿಂದ ನಿಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಶಂಸೆ ಕೇಳುವಿರಿ. ಯಾವುದೇ ರೀತಿಯ ವಾಗ್ದಾನಗಳನ್ನು ಮಾಡುವಾಗ ಹಲವು ಬಾರಿ ಯೊಚಿಸಿ, ಉಳಿಸಿಕೊಳ್ಳಲು ಕಷ್ಟವಾಗುವಂಥ ಮಾತುಗಳನ್ನು ಕೊಡದಿರಿ.

ತುಲಾ: ಒತ್ತಾಯ ಪೂರ್ವಕವಾಗಿ ಮಾಡುತ್ತಿರುವ ಕೆಲಸ ಕಾರ್ಯಗಳನ್ನು ಬಿಡಬೇಕು ಎನ್ನುವ ಮನೋಭಾವದ ಸಾಧ್ಯತೆ. ಕೀಲು ನೋವು, ವಾತದಂಥ ಕಾಯಿಲೆಯಿಂದ ಬಳಲುತ್ತಿರುವವರು ಆರೋಗ್ಯದ ಮೇಲೆ ಕಾಳಜಿ ಇಡಿ.

ವೃಶ್ಚಿಕ: ಚಿತ್ರಕಾರರು, ಬರಹಗಾರರಂಥ ಕ್ರಿಯಾತ್ಮಕ ಕೆಲಸಗಳಲ್ಲಿ ಇರುವವರಿಗೆ ಉತ್ತಮ ಅವಕಾಶಗಳು ಬರಲಿವೆ. ಮಗಳು, ತತ್ಸಂಬಂಧಿ ಕುಟುಂಬದವರಿಗೆ ನಿಮ್ಮ ಹಾರೈಕೆಗಳ ಅಗತ್ಯವಿರುವುದರಿಂದ ಅದನ್ನು ನಡೆಸಿಕೊಡಿ.

ಧನು: ನಿವೇಶನ ಖರೀದಿ, ಕಟ್ಟಡ ನಿರ್ಮಾಣದಂತಹ ಕೆಲಸಗಳಿಗೆ ಪೂರಕ ವಾತಾವರಣ ದೊರೆಯಲಿದೆ. ದಾಂಪತ್ಯದಲ್ಲಿನ ಭಿನ್ನಾಭಿಪ್ರಾಯ ಸರಿಯಾದ ಮಾತುಕತೆಯಿಂದ ದೂರವಾಗಿ ಉತ್ತಮವಾದ ಸಂಬಂಧ ನಿಮ್ಮದಾಗಲಿದೆ.

ಮಕರ: ನಿಮ್ಮನ್ನು ನೀವು ರೂಪಿಸಿಕೊಳ್ಳಲು ಹೆಚ್ಚಿನ ಶ್ರಮ ಹಾಕಬೇಕೆನ್ನುವ ವಿಚಾರವು ನಿಮ್ಮಲ್ಲಿ ಕೋಪ, ಅಸಹನೆಯನ್ನು ಉಂಟು ಮಾಡಲಿದೆ. ಇತರರೊಂದಿಗೆ ವಿವಾದಾತ್ಮಕ ವಿಷಯಗಳ ಕುರಿತು ಚರ್ಚಿಸುವುದು ಉಚಿತವಲ್ಲ.

ಕುಂಭ: ವಿಜ್ಞಾನ, ಶಿಕ್ಷಣ ಹಾಗೂ ಸಂಶೋಧನೆ ಕ್ಷೇತ್ರದಲ್ಲಿನ ವೃತ್ತಿಪರರು ಅಭಿವೃದ್ಧಿ ಕಾಣುವ ಲಕ್ಷಣಗಳಿವೆ. ಕುಟುಂಬದಲ್ಲಿ ಸಣ್ಣಪುಟ್ಟ ಕಲಹಗಳಾಗುವ ಸಾಧ್ಯತೆ. ಮನೆಯ ಸಮೀಪದಲ್ಲಿಯೇ ಇರುವಂಥ ಶಿವಾಲಯಕ್ಕೆ ಭೇಟಿ ನೀಡಿ.

ಮೀನ: ಹಣ ಸಹಾಯ ಮಾಡುತ್ತೇವೆ ಎಂದ ಸ್ನೇಹಿತರು ನೀಡದೆ ಸತಾಯಿಸುವ ಸಾಧ್ಯತೆ. ನಿಮ್ಮದೇ ಸಂಪಾದನೆಯೂ ನೀರಿನಂತೆ ಖರ್ಚಾಗುತ್ತದೆ. ದಿನದ ಅಂತ್ಯದಲ್ಲಿ ಸಂಬಂಧಿಗಳಿಂದ ಮನಸ್ಸಿಗೆ ಮುದವಾಗುವ ವಾರ್ತೆ ಕೇಳುವಿರಿ.


ಪದಬಂಧ 5243 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜಟಕಾ ಬಂಡಿ ಎನಿಸಿದ ಜೀವನ (3)
3.ಆಲದ ಮರದ ಹತ್ತಿರವಿರುವ ಸೋಮಾರಿ (4)
5.ನಿಸ್ಸಾರವಾದುದು ಇದು (3)
6.ಭ್ರಮೆಯನ್ನು ಹೀಗೂ ಹೇಳುವರು (4)
7.ಕನ್ನಡಿಗ ನೀಡಿದ ಇನ್‌ಕಮ್ ಟ್ಯಾಕ್ಸ್! (7)
10.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
11.ಸತಿಯಿರುವ ವಾಸಸ್ಥಳ (3)
14.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
15.ಕಮ್ಮಾರನ ಒಲೆಯಿದು (3)

ಮೇಲಿಂದ ಕೆಳಕ್ಕೆ

1.ಸಾಲದ ಹಣದ ಮೇಲೆ ಕೊಡುವ ಹೆಚ್ಚಿನ ಹಣ (2)
2.ವರ ಪಡೆದುಕೊಂಡಿರುವ ಮಗ (3)
4.ವಿಷ್ಣುವಿನ ವಾಹನ (3)
5.ಈತ ದುಡ್ಡಿಲ್ಲದವನು (3)
6.ಹಣ ನೀಡಿ ತಂದಿರುವ ಸೊಡರು (3)
8.ಮಾವನಿಗೆದುರು ಬಂದಿರುವ ಸ್ತ್ರೀ (3)
10.ಅಂಗ ಹೀನ ವ್ಯಕ್ತಿ (3)
9.ಸ್ನೇಹಿತೆ ಇಲ್ಲಿದ್ದಾಳೆ (3)
12.ಸರದೊಡನೆ ತಂದಿರುವ ಸಾಮಾನು (3)
13.ಕನ್ನಡಿಗ ಮಾಡಿಸಿರುವ ಇನ್ಶ್ಯೂರೆನ್ಸ್ (2)



5242ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಸಿಂಹಾಸನ 3.ಬಾಕಿದಾರ
5.ಮಸುಕು 7.ರಜಾ
9.ತಾಣ 10.ಅಮರ್ಷ
11.ಕಂತೆ 12.ತ್ರಪು
14.ಕವನ 16.ಕಡುಜಾಣ
17.ತರಕಾರಿ

ಮೇಲಿಂದ ಕೆಳಕ್ಕೆ:

1.ಸಿಂಗಾರ 2.ನಮ
3.ಬಾಕು 4.ರಮಣ
6.ಸುವರ್ಣಮಹೋತ್ಸವ
8.ಜಾಗರೂಕತೆ 9.ತಾರಕಮಂತ್ರ
11.ಕಂದಕ 13.ಪುಢಾರಿ
14.ಕಣ 15.ನತ

ಸುಡೊಕು 5629

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5628 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಹಣಕಾಸು ನೀತಿ ಸಮಿತಿ ಸದಸ್ಯ ಜಯಂತ್ ಹೇಳಿಕೆ

ಆರ್ಥಿಕ ಬೆಳವಣಿಗೆ ದುರ್ಬಲವಾಗಿದೆ



ನವದೆಹಲಿ (ಪಿಟಿಐ): ದೇಶದ ಆರ್ಥಿಕ ಬೆಳವಣಿಗೆಯು ಸದ್ಯ ಬಹಳ ದುರ್ಬಲ ಆಗಿರುವಂತೆ ಕಾಣುತ್ತಿದ್ದು, ದುಡಿಯುವ ವರ್ಗದ ಅಗತ್ಯಗಳನ್ನು ಈಡೇರಿಸುವಲ್ಲಿ ದೇಶವು ಹಿಂದೆ ಬೀಳುವ ಸಾಧ್ಯತೆ ಇದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯ ಜಯಂತ್ ಆರ್. ವರ್ಮ ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆಯು ತೀರಾ ದುರ್ಬಲ ಆಗಿರುವಂತೆ ಕಾಣುತ್ತಿದೆ. ಹಣಕಾಸು ನೀತಿಯನ್ನು ಬಿಗಿಗೊಳಿಸುತ್ತಿರುವುದು ಬೇಡಿಕೆಯನ್ನು ಕುಗ್ಗಿಸುತ್ತಿದೆ ಎಂದಿದ್ದಾರೆ.

ಇಎಂಐ ಹೆಚ್ಚಾಗುತ್ತಿರುವುದರಿಂದ ಕುಟುಂಬಗಳ ಗಳಿಕೆ ಮತ್ತು ಖರ್ಚಿನ ಮೇಲೆ ಒತ್ತಡ ಉಂಟಾಗುತ್ತಿದೆ. ಹೀಗಾಗಿ ಜನರು ಖರ್ಚು ಮಾಡುವುದರಿಂದ ಹಿಂದೆ ಸರಿಯುವಂತೆ ಆಗುತ್ತಿದೆ. ಜಾಗತಿಕ ವಿದ್ಯಮಾನಗಳು ರಫ್ತು ವಹಿವಾಟಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ ಎಂದು ಅವರು ವಿವರಿಸಿದ್ದಾರೆ.

ಬಡ್ಡಿದರವು ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಖಾಸಗಿ ಬಂಡವಾಳ ಹೂಡಿಕೆ ಇನ್ನಷ್ಟು ಕಷ್ಟವಾಗಲಿದೆ. ಸರ್ಕಾರವು ವಿತ್ತೀಯ ಬಲವರ್ಧನೆಯತ್ತ ಗಮನ ಹರಿಸಿದೆ. ಆ ಮೂಲಕ ಆರ್ಥಿಕತೆಗೆ ಬೆಂಬಲ ನೀಡುವುದನ್ನು ಕಡಿಮೆ ಮಾಡಿದೆ. ಈ ಎಲ್ಲಾ ಅಂಶಗಳಿಂದಾಗಿ ಆರ್ಥಿಕ ಬೆಳವಣಿಗೆಯು ನಿರೀಕ್ಷಿತ ಮಟ್ಟಕ್ಕಿಂತಲೂ ಕಡಿಮೆ ಆಗುವ ಆತಂಕ ಎದುರಾಗಿದೆ ಎಂದು ವರ್ಮಾ ಹೇಳಿದ್ದಾರೆ.

ಭಾರತದಲ್ಲಿ 2022–23ರಲ್ಲಿ ಹಣದುಬ್ಬರವು ಗರಿಷ್ಠ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ. 2023–24ರಲ್ಲಿ ಗಮನಾರ್ಹ ಇಳಿಕೆ ಕಾಣಲಿದೆ ಎಂದು ತಿಳಿಸಿದ್ದಾರೆ.

ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹಾಗೂ 2022-23ರ ದ್ವಿತೀಯಾರ್ಧದಲ್ಲಿ ಹಣಕಾಸು ನೀತಿಯನ್ನು ಬಿಗಿಗೊಳಿಸಲು ವಿಳಂಬ ಮಾಡಿದ ಪರಿಣಾಮಗಳಿಂದಾಗಿ ಹಣದುಬ್ಬರವು ಗರಿಷ್ಠ ಮಟ್ಟಕ್ಕೆ ತಲುಪುವಂತಾಯಿತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈರುಳ್ಳಿ ರಫ್ತು ನಿಷೇಧಿಸಿಲ್ಲ: ಗೋಯಲ್



ನವದೆಹಲಿ (ಪಿಟಿಐ): ಈರುಳ್ಳಿ ರಫ್ತು ಮೇಲೆ ಯಾವುದೇ ನಿಷೇಧ ಇಲ್ಲ. 2022ರ ಏಪ್ರಿಲ್‌–ಡಿಸೆಂಬರ್ ಅವಧಿಯಲ್ಲಿ ₹ 4,347 ಕೋಟಿ ಮೌಲ್ಯದ ಈರುಳ್ಳಿ ರಫ್ತು ಮಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ಈರುಳ್ಳಿ ಬಿತ್ತನೆ ಬೀಜದ ಮೇಲೆ ಮಾತ್ರವೇ ನಿರ್ಬಂಧ ವಿಧಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

ಭಾರತದಿಂದ ಯಾವುದೇ ದೇಶಕ್ಕೂ ಈರುಳ್ಳಿ ರಫ್ತು ಮಾಡುವುದನ್ನು ನಿಷೇಧಿಸಿಲ್ಲ. ತಪ್ಪುದಾರಿಗೆ ಎಳೆಯುವಂತಹ ಹೇಳಿಕೆಗಳನ್ನು ನೀಡುತ್ತಿರುವುದು ದುರದೃಷ್ಟಕರ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಟ್ವೀಟ್ ಮಾಡಿದ್ದಾರೆ.

ದೇಶದಲ್ಲಿ ಈರುಳ್ಳಿ ದರ ಕುಸಿತ ಕಾಣುತ್ತಿದ್ದು, ಕೇಂದ್ರ ಸರ್ಕಾರವು ರಫ್ತು ನಿಷೇಧವನ್ನು ಹಿಂದಕ್ಕೆ ಪಡೆದು ಹೆಚ್ಚುವರಿ ಈರುಳ್ಳಿಯನ್ನು ರಫ್ತು ಮಾಡಬೇಕು. ಆ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಎನ್‌ಸಿಪಿ ನಾಯಕಿ ಸುಪ್ರಿಯಾ ಸುಳೆ ಅವರು ಶನಿವಾರ ಮಾಡಿದ್ದ ಟ್ವೀಟ್‌ಗೆ ಪ್ರತಿಯಾಗಿ ಗೋಯಲ್ ಈ ಹೇಳಿಕೆ ನೀಡಿದ್ದಾರೆ.

ಎಸ್‌ಐಪಿ: ₹10 ಕೋಟಿ ಹೂಡಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಎಸ್‌ಐಪಿ, ಅಂದ್ರೆ ವ್ಯವಸ್ಥಿತ ಹೂಡಿಕೆ ಯೋಜನೆ ಮೂಲಕ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ಹೂಡಿಕೆ ಮಾಡುತ್ತಾ ಹೋದರೆ ದೊಡ್ಡ ಮೊತ್ತದ ಸಂಪತ್ತು ಸೃಷ್ಟಿಸಲು ಸಾಧ್ಯವಾಗುತ್ತದೆ. ಹೂಡಿಕೆ ಮಾಡಿ ಸಂಪತ್ತು ಗಳಿಸಲು ದೊಡ್ಡ ಮೊತ್ತದ ಹಣ ಹೊಂದಿರಬೇಕೆಂಬ ತಪ್ಪು ಕಲ್ಪನೆಯಿದೆ. ಸರಿಯಾದ ಹೂಡಿಕೆ ಆಯ್ಕೆ ಮಾಡಿಕೊಂಡು ಸಣ್ಣ ಮೊತ್ತದ ಹೂಡಿಕೆ ಮಾಡುತ್ತಾ ಹೋದರೂ ದೊಡ್ಡ ಮೊತ್ತ ಪೇರಿಸಿಕೊಳ್ಳಬಹುದು.

ಬ್ಯಾಂಕ್ ಠೇವಣಿಗಳು, ಸಾಂಪ್ರದಾಯಿಕ ಇನ್ಶೂರೆನ್ಸ್ ಪಾಲಿಸಿಗಳಲ್ಲಿ ಹಣ ಹಾಕುವ ಬದಲು ಹೆಚ್ಚು ಲಾಭ ಕೊಡುವ, ದೀರ್ಘಾವಧಿಯಲ್ಲಿ ಸಂಪತ್ತು ಗಳಿಕೆಗೆ ನೆರವಾಗುವ ಮ್ಯೂಚುಯಲ್ ಫಂಡ್‌ನಂತಹ ಸಾಧನಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ ನಿರ್ಧಾರವಾಗುತ್ತದೆ. ಹೂಡಿಕೆಯನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅರಂಭಿಸುವುದು, ಶಿಸ್ತು ಮತ್ತು ಕ್ರಮಬದ್ಧವಾಗಿ ಹಣ ತೊಡಗಿಸುವುದು, ಹೂಡಿಕೆ ಮೊತ್ತವನ್ನು ಆದಾಯ ಹೆಚ್ಚಳಕ್ಕೆ ತಕ್ಕಂತೆ ಕಾಲ-ಕಾಲಕಾಲಕ್ಕೆ ಹೆಚ್ಚಿಸುತ್ತಾ ಹೋಗುವುದು ಸಂಪತ್ತು ಗಳಿಕೆಗೆ ರಹದಾರಿಯಾಗುತ್ತದೆ.

ಹೂಡಿಕೆ ಮೂಲಕ ₹10 ಕೋಟಿ ಗಳಿಸಲು ಎಷ್ಟು ಸಮಯ ಬೇಕು?: ಪಟ್ಟಿಯಲ್ಲಿರುವಂತೆ ಪ್ರತಿ ತಿಂಗಳು ನೀವು ₹ 25 ಸಾವಿರ ಹೂಡಿಕೆ ಮಾಡಿ ಶೇ 8 ಬಡ್ಡಿ ಲಾಭಾಂಶ ನಿರೀಕ್ಷೆ ಮಾಡಿದರೆ ₹ 10 ಕೋಟಿ ಮೊತ್ತ ಗಳಿಸಲು 42 ವರ್ಷಗಳ ಕಾಲ ಹೂಡಿಕೆ ಮಾಡಬೇಕಾಗುತ್ತದೆ. 42 ವರ್ಷಗಳ ಅವಧಿಯಲ್ಲಿ ಒಟ್ಟು ₹ 1.3 ಕೋಟಿ ಹೂಡಿಕೆ ಮಾಡುತ್ತೀರಿ. ಅದಕ್ಕೆ ಪ್ರತಿಯಾಗಿ ₹ 10.4 ಕೋಟಿ ಲಭಿಸಬಹುದು. ಪ್ರತಿ ತಿಂಗಳ ₹ 25 ಸಾವಿರ ಹೂಡಿಕೆಗೆ ಶೇ 10 ರ ಬಡ್ಡಿ ಲಾಭಾಂಶ ಸಿಕ್ಕರೆ ₹ 10 ಕೋಟಿ ಮೊತ್ತ ಪೇರಿಸಲು 36 ವರ್ಷಗಳ ಬೇಕಾಗುತ್ತವೆ. ₹ 1.08 ಕೋಟಿ ಹೂಡಿಕೆಗೆ ಪ್ರತಿಯಾಗಿ ₹ 10.6 ಕೋಟಿ ಸಿಗುತ್ತದೆ. ಒಂದೊಮ್ಮೆ ನಿಮ್ಮ ಹೂಡಿಕೆಗೆ ಶೇ 12 ಬಡ್ಡಿ ಲಾಭಾಂಶ ಸಿಕ್ಕರೆ ₹ 10 ಕೋಟಿಯ ಗುರಿ ಮುಟ್ಟಲು 31 ವರ್ಷಗಳ ಸಾಕಾಗುತ್ತವೆ.

ಆದಾಯ ಹೆಚ್ಚಾದಂತೆ ಹೂಡಿಕೆ ಹೆಚ್ಚಿಸಿದರೆ ಲಾಭ: ಹೂಡಿಕೆ ಮಾಡುವಾಗ ಆದಾಯ ಹೆಚ್ಚಳಕ್ಕೆ ತಕ್ಕಂತೆ ಹೂಡಿಕೆ ಮೊತ್ತ ಹೆಚ್ಚಳ ಮಾಡುತ್ತಾ ಸಾಗಿದರೆ ಲಾಭ ಜಾಸ್ತಿ. ಹೂಡಿಕೆ ಮೊತ್ತ ಹೆಚ್ಚಾಳವಾಗುತ್ತಾ ಸಾಗಿದಂತೆಲ್ಲಾ ಹೂಡಿಕೆಯ ಅವಧಿ ತಗ್ಗುತ್ತಾ ಹೋಗುತ್ತದೆ. ಹೀಗೆ ಮಾಡಿದಾಗ ₹ 10 ಕೋಟಿ ಗಳಿಸುವ ಗುರಿಯನ್ನು ಬೇಗ ತಲುಪಬಹುದಾಗಿದೆ. ಸ್ಟೆಪ್ ಅಪ್ ಎಸ್‌ಐಪಿ ಪಟ್ಟಿಯಲ್ಲಿರುವಂತೆ ಪ್ರತಿ ವರ್ಷ ಶೇ 10 ರಷ್ಟು ಹೂಡಿಕೆ ಮೊತ್ತ ಹೆಚ್ಚಿಸುತ್ತಾ ಸಾಗಿ ಶೇ 8 ಬಡ್ಡಿ ಲಾಭ ಸಿಕ್ಕರೆ ₹ 10 ಕೋಟಿಯ ಗುರಿಯನ್ನು 29 ವರ್ಷಗಳಲ್ಲೇ ಪೂರೈಸ ಬಹುದಾಗಿದೆ. ಅದೇ ರೀತಿ ಶೇ 10ರ ಬಡ್ಡಿ ಲಾಭ ಸಿಕ್ಕರೆ ₹ 10 ಕೋಟಿಯ ಮೊತ್ತವನ್ನು 27 ವರ್ಷಗಳಲ್ಲೇ ಪೇರಿಸಲು ಸಾಧ್ಯವಾಗುತ್ತದೆ. ಶೇ 12 ರ ಬಡ್ಡಿ ಲಾಭ ದೊರಕಿದರೆ ಕೇವಲ 25 ವರ್ಷಗಳಲ್ಲಿ ₹ 10 ಕೋಟಿ ಮೊತ್ತ ಪೇರಿಸಬಹುದಾಗಿದೆ. ಪಟ್ಟಿಯನ್ನು ಗಮನಿಸಿದಾಗ ಸ್ಟೆಪ್ ಅಪ್ ಎಸ್ ಐಪಿ ಮಾಡುವ ಮೂಲಕ ₹ 10 ಕೋಟಿ ಗುರಿತಲುಪಲು ಅವಶ್ಯ ಎನಿಸುವ ವರ್ಷಗಳ ಅವಧಿಯನ್ನು 6 ರಿಂದ 13 ವರ್ಷಗಳಷ್ಟು ತಗ್ಗಿಸಲು ಸಾಧ್ಯವಾಗುವುದು ಮನದಟ್ಟಾಗುತ್ತದೆ.

ಈ ವಿಚಾರ ತಿಳಿದಿರಲಿ:

- ಮ್ಯೂಚುಯಲ್ ಫಂಡ್ ಹೂಡಿಕೆಗೆ ದೊಡ್ಡ ಮೊತ್ತದ ಹಣದ ಅಗತ್ಯವಿಲ್ಲ
- ಹೂಡಿಕೆ ಮೊತ್ತವನ್ನು ಪ್ರತಿ ವರ್ಷ ಹೆಚ್ಚಿಸಿದರೆ ಬೇಗ ಹೂಡಿಕೆ ಗುರಿ ತಲುಪಬಹುದು
- ಬೇಗ ಹೂಡಿಕೆ ಮಾಡಿದಾಗ ದುಡ್ಡಿನ ಬೆಳವಣಿಗೆಗೆ ಕಾಲಾವಕಾಶ ಸಿಗುತ್ತದೆ
- ಹೆಚ್ಚು ರಿಸ್ಕ್ ಇಲ್ಲದ ಹೂಡಿಕೆ ಬೇಕು ಅಂದ್ರೆ ಹೂಡಿಕೆ ಗುರಿ ತಲುಪಲು ಹೆಚ್ಚು ಸಮಯ ಬೇಕು

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಹೂಡಿಕೆ ಮೂಲಕ ₹10 ಕೋಟಿ ಗಳಿಸುವುದು ಹೇಗೆ?

ಮಾಸಿಕ ಎಸ್‌ಐಪಿ ಹೂಡಿಕೆ	ನಿರೀಕ್ಷಿತ ವಾರ್ಷಿಕ ಲಾಭಾಂಶ	ಹೂಡಿಕೆ ವರ್ಷಗಳು	ಹೂಡಿಕೆ ಮೊತ್ತ	ಸಿಗುವ ಒಟ್ಟು ಮೊತ್ತ
₹25 ಸಾವಿರ	ಶೇ 8	42	₹1.2 ಕೋಟಿ	₹10.4 ಕೋಟಿ
₹25 ಸಾವಿರ	ಶೇ 10	36	₹1.08 ಕೋಟಿ	₹10.6 ಕೋಟಿ
₹25 ಸಾವಿರ	ಶೇ 12	31	₹93 ಲಕ್ಷ	₹9.97 ಕೋಟಿ

ಸ್ಟೆಪ್ ಅಪ್ ಎಸ್‌ಐಪಿ (ಎಸ್‌ಐಪಿ ಮೊತ್ತದಲ್ಲಿ ಹೆಚ್ಚಳ ಮಾಡುವುದು)

ಪ್ರತಿ ವರ್ಷ ಎಸ್‌ಐಪಿ ಮೊತ್ತದಲ್ಲಿ ಶೇ 10 ರಷ್ಟು ಹೆಚ್ಚಳ (ಶೇ 8 ರ ಬಡ್ಡಿ ದರ ನಿರೀಕ್ಷೆ)	29	₹4.45 ಕೋಟಿ	₹10.6 ಕೋಟಿ
ಪ್ರತಿ ವರ್ಷ ಎಸ್‌ಐಪಿ ಮೊತ್ತದಲ್ಲಿ ಶೇ 10 ರಷ್ಟು ಹೆಚ್ಚಳ (ಶೇ 12 ರ ಬಡ್ಡಿ ದರ ನಿರೀಕ್ಷೆ)	27	₹3.63 ಕೋಟಿ	₹10.8 ಕೋಟಿ
ಪ್ರತಿ ವರ್ಷ ಎಸ್‌ಐಪಿ ಮೊತ್ತದಲ್ಲಿ ಶೇ 10 ರಷ್ಟು ಹೆಚ್ಚಳ (ಶೇ 12 ರ ಬಡ್ಡಿ ದರ ನಿರೀಕ್ಷೆ)	25	₹2.95 ಕೋಟಿ	₹10.7 ಕೋಟಿ

(ಗಮನಿಸಿ – ಮೊದಲನೇ ವರ್ಷದಲ್ಲಿ ಸ್ಟೆಪ್ ಅಪ್ ಎಸ್‌ಐಪಿಯ ಆರಂಭಿಕ ಮೌಲ್ಯ ₹25,000)

ಮಾರಾಟದ ಒತ್ತಡಕ್ಕೆ ಕುಸಿದ ಸೂಚ್ಯಂಕಗಳು



ಫೆಬ್ರುವರಿ 24 ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಭಾರಿ ಕುಸಿತ ದಾಖಲಿಸಿವೆ. 59,463 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.55 ರಷ್ಟು ಕುಸಿತ ದಾಖಲಿಸಿದೆ. 17,465 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ, ವಾರದ ಅವಧಿಯಲ್ಲಿ ಶೇ 2.66 ರಷ್ಟು ಇಳಿಕೆ ಕಂಡಿದೆ. ಹಣದುಬ್ಬರ ಹೆಚ್ಚಳ ತಡೆಯಲು ಅಮೆರಿಕ ಫೆಡರಲ್ ಬ್ಯಾಂಕ್ ನಿಂದ ಬಡ್ಡಿ ದರ ಮತ್ತಷ್ಟು ಹೆಚ್ಚಳದ ಮುನ್ಸೂಚನೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರು ಮಾರಾಟದ ಒತ್ತಡ ಸೇರಿ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯನ್ನು ನೋಡುವುದಾದರೆ ಎಲ್ಲ ಕ್ಷೇತ್ರಗಳಲ್ಲೂ ಕುಸಿತ ಕಂಡುಬಂದಿದೆ. ನಿಫ್ಟಿ ಲೋಹ ಸೂಚ್ಯಂಕ ಶೇ 6.2, ರಿಯಲ್ ಎಸ್ಟೇಟ್, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಮತ್ತು ಮಾಧ್ಯಮ ಸೂಚ್ಯಂಕ ತಲಾ ಶೇ 5 ರಷ್ಟು ಮತ್ತು ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 3 ರಷ್ಟು ಕುಸಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ರೂ. 3,100.55 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ರೂ. 3,209.60 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಅದಾನಿ ಎಂಟರ್ ಪ್ರೈಸಸ್, ಅದಾನಿ ಟೋಟಲ್ ಗ್ಯಾಸ್, ಅದಾನಿ ಟ್ರಾನ್ಸ್ ಮಿಷನ್, ಅದಾನಿ ಗ್ರೀನ್ ಎನರ್ಜಿ, ಅದಾನಿ ವಿಲ್ಮರ್ ಶೇ 17 ರಿಂದ ಶೇ 23 ರಷ್ಟು ಕುಸಿತ ದಾಖಲಿಸಿವೆ. ಬಿಎಸ್ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 2 ರಷ್ಟು ಕುಸಿತ ಕಂಡಿದ್ದು ಅದಾನಿ ಪೋರ್ಟ್ಸ್ ಅಂಡ್ ಎಸ್ಇಜೆಡ್, ಜೀ ಎಂಟರ್‌ಟೇನ್ಮೆಂಟ್ ಎಂಟರ್ ಪ್ರೈಸಸ್, ರಾಜೇಶ್ ಎಕ್ಸ್ ಪೋರ್ಟ್ಸ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ಹಿಂದೂಸ್ತಾನ್ ಪೆಟ್ರೋಲಿಯಂ, ಗೋದ್ರೇಜ್ ಪ್ರಾಡಕ್ಟ್ಸ್ ಮತ್ತು ವೇದಾಂತ್ ಫ್ಯಾಶನ್ಸ್ ಕುಸಿದಿವೆ. ಪಿಬಿ ಫಿನ್ ಟೆಕ್, ಗ್ಲಾಕ್ಸೊ ಫಾರ್ಮಾ, ಟ್ಯೂಬ್ ಇನ್ವೆಸ್ಟ್ ಮೆಂಟ್ಸ್ ಆಫ್ ಇಂಡಿಯಾ ಮತ್ತು ವೋಲ್ಟಾಸ್ ಗಳಿಕೆ ಕಂಡಿವೆ.

ಮುನ್ನೋಟ: ಈ ವಾರ ಫೋಸ್ ಕೋ ಇಂಡಿಯಾ ಲಿ., ರೇನ್ ಇಂಡಸ್ಟ್ರೀಸ್ ಲಿ., ಸ್ಪೈಸ್ ಜೆಟ್ ಲಿ., ವೆಸುವಿಯಸ್ ಇಂಡಿಯಾ ಲಿ., ಕೆಬಿಸಿ ಗ್ಲೋಬಲ್ ಲಿ., ಸ್ಟೋವೆಕ್ ಇಂಡಸ್ಟ್ರೀಸ್ ಲಿ., ಯುನಿಟೆಕ್ ಲಿ., ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳು, ಬ್ಯಾಂಕ್ ಗಳ ಬಡ್ಡಿ ದರ ಹೆಚ್ಚಳ ಸೇರಿ ಪ್ರಮುಖ ಬೆಳವಣಿಗೆಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹335-680
ದ್ವಿತಳಿ (ಬಿ.ವಿ)	₹333-702

ಹೊಸ ರೂಪದಲ್ಲಿ ನೋಕಿಯಾ



ನೋಕಿಯಾ ಅಧ್ಯಕ್ಷ ಪೆಕ್ಕಾ ಲುಂಡ್ಮಾರ್ಕ್ ಅವರು ಕಂಪನಿಯ ಹೊಸ ಲೋಗೊ ಪರಿಚಯಿಸಿದರು —ಎಎಫ್‌ಪಿ ಚಿತ್ರ

ಬಾರ್ಸಿಲೋನಾ (ರಾಯಿಟರ್ಸ್): ದೂರಸಂಪರ್ಕ ಸಾಧನಗಳನ್ನು ತಯಾರಿಸುವ ನೋಕಿಯಾ ಕಂಪನಿಯು 60 ವರ್ಷಗಳಲ್ಲಿ ಮೊದಲ ಬಾರಿಗೆ ತನ್ನ ಬ್ರ್ಯಾಂಡ್‌ಗೆ ಹೊಸ ರೂಪ ನೀಡಿದೆ.

ಹೊಸ ಲೋಗೊ 'ನೋಕಿಯಾ'ದ ಐದು ಅಕ್ಷರಗಳನ್ನು ಭಿನ್ನ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಸದ್ಯ ನೀಲಿ ಬಣ್ಣದಲ್ಲಿ ಇರುವ ಲೋಗೊವನ್ನು ಕೈಬಿಡಲಾಗಿದ್ದು, ಬೇರೆ ಬೇರೆ ಉದ್ದೇಶಕ್ಕೆ ಬಳಸಲು ಅನುಕೂಲ ಆಗುವಂತೆ ಹಲವು ಬಣ್ಣಗಳನ್ನು ಬಳಸಲಾಗಿದೆ.

ವಹಿವಾಟಿನಲ್ಲಿ ತ್ವರಿತಗತಿಯ ಬೆಳವಣಿಗೆ ಸಾಧಿಸುವ ಉದ್ದೇಶದಿಂದ ಈ ಬದಲಾವಣೆಗಳನ್ನು ಮಾಡಿರುವುದಾಗಿ ಕಂಪನಿ ಹೇಳಿದೆ.

ಸೋಮವಾರದಿಂದ ಗುರುವಾರದವರೆಗೆ ಮೊಬೈಲ್ ವರ್ಲ್ಡ್ ಕಾಂಗ್ರೆಸ್ (ಎಂಡಬ್ಲ್ಯುಸಿ) ನಡೆಯಲಿದ್ದು, ಅದಕ್ಕೂ ಮೊದಲೇ ಕಂಪನಿಯು ತನ್ನ ಬ್ರ್ಯಾಂಡ್‌ನಲ್ಲಿ ಪ್ರಮುಖ ಬದಲಾವಣೆಗಳನ್ನು ತಂದಿದೆ. ಸೇವೆಗಳನ್ನು ಪೂರೈಸುವ ವಹಿವಾಟಿನತ್ತ ಕಂಪನಿ ಗಮನ ಮುಂದುವರಿಸಲಿದ್ದು, ದೂರಸಂಪರ್ಕ ಕಂಪನಿಗಳಿಗೆ ಅಗತ್ಯ ಸಾಧನಗಳನ್ನು ನೀಡುವುದು, ಅದರಲ್ಲಿಯೂ ಮುಖ್ಯವಾಗಿ ಬೇರೆ ಉದ್ದಿಮೆಗಳಿಗೆ ಟೆಲಿಕಾಂ ಗಿಯರ್ ಮಾರಾಟ ಮಾಡಲು ಹೆಚ್ಚು ಗಮನ ಹರಿಸಲು ನಿರ್ಧರಿಸಿದೆ.

ಕಂಪನಿಯು ತನ್ನ ಬೆಳವಣಿಗೆಯ ಹಾದಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲು ಮುಂದಾಗಿದೆ. ಷೇರು ವಿಕ್ರಯದಂತಹ ಪರ್ಯಾಯಗಳನ್ನು ಪರಿಶೀಲಿಸಲಿದೆ.

ತಗ್ಗಿದ ಎಫ್‌ಪಿಐ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಫೆಬ್ರುವರಿ 1 ರಿಂದ 24ರವರೆಗಿನ ಅವಧಿಯಲ್ಲಿ ₹2,313 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಬಂಡವಾಳ ಹಿಂತೆಗೆತದ ಪ್ರಮಾಣ ಕಡಿಮೆ ಆಗಿದೆ. ಜನವರಿಯಲ್ಲಿ ₹28,852 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು.

ಅಮೆರಿಕದಲ್ಲಿ ಬಡ್ಡಿದರ ಹೆಚ್ಚಾಗುತ್ತಿರುವುದರಿಂದ ಭಾರತವನ್ನೂ ಒಳಗೊಂಡು ಪ್ರವರ್ಧಮಾನಕ್ಕೆ ಬರುತ್ತಿರುವ ಆರ್ಥಿಕತೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೊರಹರಿವು ಆಗುವ ಸಾಧ್ಯತೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಸಾಲಪತ್ರ ಮಾರುಕಟ್ಟೆಯಲ್ಲಿ ಫೆ. 1–24ರವರೆಗಿನ ಅವಧಿಯಲ್ಲಿ ₹2,819 ಕೋಟಿ ಹೂಡಿಕೆ ಮಾಡಿದ್ದಾರೆ.

ಜರ್ಮನಿ: ಭಾರತದ ಐಟಿ ನೌಕರರಿಗೆ ವೀಸಾ ಸರಾಗ

ಬೆಂಗಳೂರು: 'ಜರ್ಮನಿಯಲ್ಲಿ ಕುಶಲತೆ ಹೊಂದಿದ ಕಾರ್ಮಿಕರ ಕೊರತೆಯಿದ್ದು, ಭಾರತದಿಂದ ಜರ್ಮನಿಗೆ ಬರುವ ಐ.ಟಿ. ತಂತ್ರಜ್ಞರಿಗೆ ಕೆಲಸದ ವೀಸಾಗಳನ್ನು ಪಡೆಯುವುದನ್ನು ನಮ್ಮ ಸರ್ಕಾರವು ಸುಲಭಗೊಳಿಸಲು ಬಯಸುತ್ತದೆ' ಎಂದು ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಭಾನುವಾರ ತಿಳಿಸಿದ್ದಾರೆ.

'ನಾವು ವೀಸಾಗಳನ್ನು ನೀಡುವುದನ್ನು ಸುಲಭಗೊಳಿಸಲು ಬಯಸುತ್ತೇವೆ' ಎಂದು ಓಲಾಫ್ ಅವರು ಬೆಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಸಾಫ್ಟ್‌ವೇರ್ ಡೆವಲಪರ್‌ಗಳಿಗೆ ಮತ್ತು ಐ.ಟಿ ಅಭಿವೃದ್ಧಿ ಕೌಶಲ ಹೊಂದಿರುವವರಿಗೆ ಜರ್ಮನಿಯು ಹೆಚ್ಚು ಆಕರ್ಷಕವಾಗಿದ್ದು, ಈ ನಿಟ್ಟಿನಲ್ಲಿ ಕಾನೂನು ಚೌಕಟ್ಟನ್ನು ಸುಧಾರಿಸುವುದು ನಮ್ಮ ಸರ್ಕಾರದ ಆದ್ಯತೆಯಾಗಿದೆ' ಎಂದೂ ಅವರು ಹೇಳಿದ್ದಾರೆ.

'ನೋಟಿನಲ್ಲಿ ಗಾಂಧಿ ಬದಲು ಸಾವರ್ಕರ್ ಚಿತ್ರ ಮುದ್ರಿಸಿ'

ಮೀರತ್(ಉತ್ತರ ಪ್ರದೇಶ): ನೋಟುಗಳಲ್ಲಿ ಮಹಾತ್ಮ ಗಾಂಧಿ ಅವರ ಚಿತ್ರದ ಬದಲಿಗೆ ವಿ.ಡಿ. ಸಾವರ್ಕರ್ ಮತ್ತು ಇತರ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಮುದ್ರಿಸಬೇಕೆಂದು ಅಖಿಲ ಭಾರತ ಹಿಂದೂ ಮಹಾಸಭಾ ಭಾನುವಾರ ಆಗ್ರಹಿಸಿದೆ.

ಪಾರ್ಲಿಮೆಂಟ್ ಹೌಸ್‌ಗೆ ತೆರಳುವ ರಸ್ತೆಗೆ ಸಾವರ್ಕರ್ ಹೆಸರಿಡಬೇಕು ಎಂದೂ ಕೇಂದ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಮಹಾಸಭಾದ ಮುಖಂಡರು ಒತ್ತಾಯಿಸಿದ್ದಾರೆ.

ಸಾವರ್ಕರ್ ಅವರ 58ನೇ ಪುಣ್ಯತಿಥಿ ಅಂಗವಾಗಿ ಮೀರತ್‌ನ ಶಾರದಾ ರಸ್ತೆಯಲ್ಲಿರುವ ಅಖಿಲ ಭಾರತ ಹಿಂದೂ ಮಹಾಸಭಾದ ಕಚೇರಿಯಲ್ಲಿ ಭಾನುವಾರ ಪೂಜೆ ನಡೆಯಿತು.

ಬಳಿಕ ನಡೆದ ಕಾರ್ಯಕ್ರಮದಲ್ಲಿ ಹಿಂದೂ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಪಂಡಿತ್ ಅಶೋಕ್ ಶರ್ಮಾ ಮಾತನಾಡಿದರು.

'ಪರಖ್'ನಿಂದ ದೇಶದ ಪರೀಕ್ಷಾ ಮಂಡಳಿಗಳಲ್ಲಿ ಏಕರೂಪತೆ: ಅಮಿತ್

ನವದೆಹಲಿ (ಪಿಟಿಐ): ವಿದ್ಯಾರ್ಥಿಗಳ ಮೌಲ್ಯಮಾಪನ, ಶಾಲೆಗಳ ಕಾರ್ಯಕ್ಷಮತೆ ಪರಿಶೀಲನೆಗಾಗಿ ಸ್ಥಾಪಿಸಲಾಗುವ ರಾಷ್ಟ್ರ ಮಟ್ಟದ ನಿಯಂತ್ರಣ ವ್ಯವಸ್ಥೆಯಾದ 'ಪರಖ್'ನಿಂದ (ಪಿಎಆರ್‌ಎಕೆಎಚ್) ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಏಕರೂಪತೆ ಸಾಧಿಸಲು ಸಾಧ್ಯ ಎಂದು ಎಜುಕೇಷನಲ್ ಟೆಸ್ಟಿಂಗ್ ಸರ್ವೀಸ್ (ಇಟಿಎಸ್) ಸಂಸ್ಥೆ ಸಿಇಒ ಅಮಿತ್ ಸೇವಕ್ ಹೇಳಿದ್ದಾರೆ.

'ಪರಖ್' ಎಂಬುದು 'ಪರ್ಫಾರ್ಮನ್ಸ್ ಅಸೆಸ್‌ಮೆಂಟ್, ರಿವ್ಯೂ ಅಂಡ್ ಅನಲಿಸಿಸ್ ಆಫ್ ನಾಲೆಡ್ಜ್ ಫಾರ್ ಹೋಲಿಸ್ಟಿಕ್ ಡೆವಲಪ್‌ಮೆಂಟ್' ಎಂಬುದರ ಸಂಕ್ಷಿಪ್ತರೂಪ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯಡಿ ಈ ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಲಾಗುತ್ತದೆ.

ಎನ್‌ಸಿಇಆರ್‌ಟಿ, 'ಪರಖ್'ಅನ್ನು ಸ್ಥಾಪಿಸುವ ಹೊಣೆಯನ್ನು ಇಟಿಎಸ್‌ಗೆ ವಹಿಸಿದೆ. ಈ ಸಂಸ್ಥೆಯು ಟಿಒಇಎಫ್‌ಎಲ್, ಜಿಆರ್‌ಇ ಅಂತಹ ಪರೀಕ್ಷೆಗಳನ್ನು ನಡೆಸುತ್ತದೆ.

'ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು, ನಿಯಮಗಳನ್ನು 'ಪರಖ್' ರೂಪಿಸುತ್ತದೆ' ಎಂದು ಅಮಿತ್ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

36 ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 62 ಪರೀಕ್ಷಾ ಮಂಡಳಿಗಳಿವೆ. ದೇಶದ ಭೌಗೋಳಿಕ ಹಾಗೂ ಅನೇಕ ಭಾಷೆಗಳ ಕಾರಣಗಳಿಂದಾಗಿ ಶಾಲಾ ಶಿಕ್ಷಣದಲ್ಲಿ ವಿವಿಧತೆ ಇದೆ. ಆದರೆ, ಪರಖ್ ರೂಪಿಸುವ ನಿಯಮಗಳು ದೇಶದಲ್ಲಿರುವ ಎಲ್ಲಾ ಪರೀಕ್ಷಾ ಮಂಡಳಿಗಳಿಗೆ ಅನ್ವಯವಾಗಲಿರುವ ಕಾರಣ, ಮೌಲ್ಯಮಾಪನ ವಿಷಯದಲ್ಲಿ ಏಕರೂಪತೆ ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೇಪಾಳ: ಬೆಂಬಲ ವಾಪಸ್‌ಗೆ ಆರ್‌ಪಿಪಿ ನಿರ್ಧಾರ

ಕಠ್ಮಂಡು (ಪಿಟಿಐ): ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ 'ಪ್ರಚಂಡ' ಅವರ ನೇತೃತ್ವದ ಮೈತ್ರಿಕೂಟ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆಯಲು ರಾಷ್ಟ್ರೀಯ ಪ್ರಜಾತಂತ್ರ ಪಕ್ಷ (ಆರ್‌ಪಿಪಿ) ನಿರ್ಧರಿಸಿದೆ.

ಪಕ್ಷದ ಮುಖ್ಯಸ್ಥ ರಾಜೇಂದ್ರ ಲಿಂಗ್ಡೆನ್ ಸೇರಿದಂತೆ ನಾಲ್ವರು ಸಚಿವರು ಶನಿವಾರ 'ಪ್ರಚಂಡ' ಅವರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದಾರೆ.

ಪಕ್ಷದ ಕೇಂದ್ರೀಯ ಕಾರ್ಯಕಾರಿ ಸಮಿತಿ ಮತ್ತು ಸಂಸದರು ನಡೆಸಿದ ಜಂಟಿ ಸಭೆಯಲ್ಲಿ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆಯಲು ನಿರ್ಧರಿಸಲಾಗಿದೆ ಎಂದು ಕಠ್ಮಂಡು ಪೋಸ್ಟ್ ವರದಿ ಮಾಡಿದೆ.

ಇಟಲಿ: ದೋಣಿ ಮುಳುಗಿ 60 ಮಂದಿ ಸಾವು

ರೋಮ್ (ಎಪಿ): ವಲಸಿಗರಿಂದ ತುಂಬಿದ್ದ ದೋಣಿಯೊಂದು ಪ್ರತಿಕೂಲ ಹವಾಮಾನದಿಂದಾಗಿ ಇಟಲಿಯ ದಕ್ಷಿಣ ಕರಾವಳಿ ಬಳಿ ಛಿದ್ರಗೊಂಡು ಸಮುದ್ರದಲ್ಲಿ ಮುಳುಗಿದ ಪರಿಣಾಮ ಮಗು ಸೇರಿದಂತೆ 60 ಜನರು ಮೃತಪಟ್ಟಿದ್ದಾರೆ. ವಲಸಿಗರು ಯಾವ ದೇಶಕ್ಕೆ ಸೇರಿದವರು ಎಂಬ ಮಾಹಿತಿ ಲಭ್ಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.'ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿ 43 ಮೃತದೇಹಗಳನ್ನು ಪತ್ತೆ ಮಾಡಿದ್ದು, 80 ಜನರನ್ನು ರಕ್ಷಿಸಿದ್ದಾರೆ' ಎಂದು ಕರಾವಳಿ ರಕ್ಷಣಾ ಪಡೆ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

' ದೋಣಿಯಲ್ಲಿ 120 ಮಂದಿ ಪ್ರಯಾಣಿಸುತ್ತಿದ್ದರು. ಸಮುದ್ರ ತೀರದ ಸಮೀಪದಲ್ಲಿ ಬಂಡೆಗಳಿಗೆ ಡಿಕ್ಕಿ ಹೊಡೆದ ಪರಿಣಾಮ ದೋಣಿ ಮುರಿದು, ಈ ಅವಘಡ ಸಂಭವಿಸಿತು' ಎಂದು ಪ್ರಕಟಣೆ ತಿಳಿಸಿದೆ.

ದ್ವೇಷಿಸುವ ದೇಶಗಳಿಗೆ ನೆರವು ಕಡಿತ: ಹ್ಯಾಲೆ

ವಾಷಿಂಗ್ಟನ್: 'ನಾನು ಅಧಿಕಾರಕ್ಕೆ ಬಂದರೆ ಅಮೆರಿಕವನ್ನು ದ್ವೇಷಿಸುವ ದೇಶಗಳಿಗೆ ನೀಡುವ ವಿದೇಶಿ ನೆರವನ್ನು ಕಡಿತಗೊಳಿಸುತ್ತೇನೆ' ಎಂದು ಅಮೆರಿಕದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ, ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ನಿಕ್ಕಿ ಹ್ಯಾಲೆ ಹೇಳಿದ್ದಾರೆ.

'ನಮ್ಮ ನಂಬಿಕೆಗೆ ಅರ್ಹರಾದ ನಾಯಕರು ಮಾತ್ರ ನಮ್ಮ ಶತ್ರುಗಳ ವಿರುದ್ಧ ನಿಲ್ಲುವರು ಮತ್ತು ನಮ್ಮ ಸ್ನೇಹಿತರ ಪರ ನಿಲ್ಲುವರು' ಎಂದು ನಿಕ್ಕಿ 'ನ್ಯೂಯಾರ್ಕ್ ಪೋಸ್ಟ್'ನಲ್ಲಿ ಬರೆದಿದ್ದಾರೆ. ಪಾಕಿಸ್ತಾನ, ಚೀನಾ, ಇರಾಕ್ ಮತ್ತು ಇತರ ದೇಶಗಳ ಹೆಸರುಗಳನ್ನು ಪ್ರಸ್ತಾಪಿಸಿರುವ ನಿಕ್ಕಿ, 'ಬಲಿಷ್ಠವಾಗಿರುವ ಅಮೆರಿಕವು ಕೆಟ್ಟ ಜನರಿಗೆ ಎಂದಿಗೂ ಹಣದ ನೆರವು ನೀಡದು' ಎಂದಿದ್ದಾರೆ.

ಐಇಡಿ ಸ್ಫೋಟ– 4 ಮಂದಿ ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದ ಮಾರುಕಟ್ಟೆಯೊಂದರಲ್ಲಿ ಭಾನುವಾರ ಬೈಕ್‌ನಲ್ಲಿ ಅಳವಡಿಸಿದ್ದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಗೊಂಡ ಪರಿಣಾಮ ಕನಿಷ್ಠ ನಾಲ್ವರು ಸಾವಿಗೀಡಾಗಿದ್ದು, 14 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

'ರಖ್ನಿ ಮಾರುಕಟ್ಟೆ ಪ್ರದೇಶದಲ್ಲಿ ಈ ಸ್ಫೋಟ ಸಂಭವಿಸಿದೆ' ಎಂದು ಬರ್ಖಾನ್‌ನ ಡೆಪ್ಯುಟಿ ಕಮಿಷನರ್ ಅಬ್ದುಲ್ಲಾ ಖೋಸೊ ಹೇಳಿಕೆಯನ್ನು ಉಲ್ಲೇಖಿಸಿ ಡಾನ್ ಪತ್ರಿಕೆ ವರದಿ ಮಾಡಿದೆ.

ಆಸ್ಟ್ರೇಲಿಯಾಕ್ಕೆ ಆರನೇ ವಿಶ್ವಕಪ್

ಮಹಿಳೆಯರ ಟಿ20 ಕ್ರಿಕೆಟ್: ದಕ್ಷಿಣ ಆಫ್ರಿಕಾದ ಕನಸು ನುಚ್ಚುನೂರು; ಬೆಥ್ ಮೂನಿ ಅರ್ಧಶತಕ



ಗೆಲುವಿನ ಸಂಭ್ರಮದಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡ –ಎಎಫ್‌ಪಿ ಚಿತ್ರ

ಕೇಪ್‌ಟೌನ್ (ಪಿಟಿಐ): ಆಸ್ಟ್ರೇಲಿಯಾ ವನಿತೆಯರ ಬಳಗವು ಆರನೇ ಬಾರಿ ಟಿ20 ವಿಶ್ವಕಪ್ ಗೆದ್ದುಕೊಂಡಿತು. ಇದೇ ಮೊದಲ ಬಾರಿಗೆ ಫೈನಲ್ ತಲುಪಿದ್ದ ಆತಿಥೇಯ ದಕ್ಷಿಣ ಆಫ್ರಿಕಾ ತಂಡದ ಪ್ರಶಸ್ತಿ ಕನಸು ಕಮರಿತು.

ಟೂರ್ನಿಯುದ್ದಕ್ಕೂ ಅಮೋಘ ಆಟವಾಡಿದ್ದ ದಕ್ಷಿಣ ಆಫ್ರಿಕಾ ತಂಡವು ಭಾನುವಾರ ನಡೆಸಿದ ಛಲದ ಹೋರಾಟಕ್ಕೆ ಗೆಲುವಿನ ಫಲ ಸಿಗಲಿಲ್ಲ. ಬಲಿಷ್ಠ ಆಸ್ಟ್ರೇಲಿಯಾ ತಂಡವು 19 ರನ್‌ಗಳಿಂದ ಜಯಿಸಿತು. ಹೋದ ವರ್ಷವೂ ಆಸ್ಟ್ರೇಲಿಯಾ ಚಾಂಪಿಯನ್ ಆಗಿತ್ತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಆರಂಭಿಕ ಬ್ಯಾಟರ್ ಬೆಥ್ ಮೂನಿ (ಔಟಾಗದೆ 74; 53ಎ, 4X9, 6X1) ಅವರ ಅಮೋಘ ಬ್ಯಾಟಿಂಗ್ ಬಲದಿಂದ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 156 ರನ್ ಗಳಿಸಿತು. ಆಸ್ಟ್ರೇಲಿಯಾದ ಉಳಿದ ಬ್ಯಾಟರ್‌ಗಳು ಹೆಚ್ಚು ಅಬ್ಬರಿಸದಂತೆ ಆತಿಥೇಯ ತಂಡದ ಬೌಲರ್‌ಗಳು ನೋಡಿಕೊಂಡರು.

ಮಧ್ಯಮವೇಗಿ ಶಬ್ನಿಮ್ ಇಸ್ಮಾಯಿಲ್ ಮತ್ತು ಮೆರಿಜಾನೆ ಕ್ಯಾಪ್ ತಲಾ ಎರಡು ವಿಕೆಟ್ ಗಳಿಸಿದರು. ಮಿಯಾಬಾ ಒಂದು ವಿಕೆಟ್ ಪಡೆದರು.

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಆಸ್ಟ್ರೇಲಿಯಾ ಬೌಲರ್‌ಗಳು ತಡೆಯೊಡ್ಡಿದರು. ಟೂರ್ನಿಯುದ್ದಕ್ಕೂ ಮಿಂಚಿದ್ದ ಆರಂಭಿಕ ಬ್ಯಾಟರ್ ಲಾರಾ (61; 48ಎ, 4X5, 6X3) ತಮ್ಮ ಮೇಲಿನ ಭರವಸೆ ಉಳಿಸಿಕೊಂಡರು. ಆದರೆ ಉಳಿದ ಬ್ಯಾಟರ್‌ಗಳಿಂದ ಉತ್ತಮ ಬೆಂಬಲ ದೊರೆಯದೇ ದೊಡ್ಡ ಜೊತೆಯಾಟಗಳು ದಾಖಲಾಗಲಿಲ್ಲ. ಇದ ರಿಂದಾಗಿ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 ರನ್ ಗಳಿಸಲಷ್ಟೇ ದಕ್ಷಿಣ ಆಫ್ರಿಕಾಕ್ಕೆ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 6ಕ್ಕೆ 156 (ಬೆಥ್ ಮೂನಿ ಔಟಾಗದೆ 74, ಆ್ಯಷ್ಲೆ ಗಾರ್ಡನರ್ 29, ಶಬ್ನಿಮ್ ಇಸ್ಮಾಯಿಲ್ 26ಕ್ಕೆ2, ಮರಿಜಾನೆ ಕ್ಯಾಪ್ 35ಕ್ಕೆ2) ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 (ಲಾರಾ ವೊಲ್ವಾರಡ್ಟ್ 61, ಕ್ಲೋ ಟ್ರಯಾನ್ 25, ಮೇಗನ್ ಶುಟ್ 23ಕ್ಕೆ1, ಆ್ಯಷ್ಲೆ ಗಾರ್ಡನರ್ 20ಕ್ಕೆ1) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 19 ರನ್‌ಗಳ ಜಯ

ಡ್ರ್ಯಾಗನ್ ಬೋಟ್ ರೇಸ್ ಚಾಂಪಿಯನ್‌ಶಿಪ್

ಕರ್ನಾಟಕ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಉಡುಪಿ: ಮೂರೂ ದಿನ ಪಾರಮ್ಯ ಮೆರೆದ ಆತಿಥೇಯ ಕರ್ನಾಟಕ, ಬ್ರಹ್ಮಾವರದ ಹೇರೂರಿನ ಸುವರ್ಣ ನದಿಯಲ್ಲಿ ನಡೆದ ರಾಷ್ಟ್ರೀಯ 11ನೇ ಡ್ರ್ಯಾಗನ್ ಬೋಟ್ ಚಾಂಪಿಯನ್‌ಶಿಪ್‌ನ ಸಮಗ್ರ ಪ್ರಶಸ್ತಿ ತನ್ನದಾಗಿಸಿಕೊಂಡಿತು. ಕರ್ನಾಟಕ ಇದೇ ಮೊದಲು ಈ ಸಾಧನೆ ಮಾಡಿದೆ.

ಭಾರತ ಕಯಾಕಿಂಗ್ ಮತ್ತು ಕೆನೊಯಿಂಗ್ ಸಂಸ್ಥೆಯ ಆಶ್ರಯದಲ್ಲಿ ಉಡುಪಿ ಜಿಲ್ಲಾಡಳಿತ ಆಯೋಜಿಸಿದ್ದ ಚಾಂಪಿಯನ್‌ಶಿಪ್‌ನ ಕೊನೆಯ ದಿನವಾದ ಭಾನುವಾರ ಕರ್ನಾಟಕ, ಪುರುಷರ ವಿಭಾಗದಲ್ಲಿ ಎರಡು ಚಿನ್ನ ಮತ್ತು ಮಿಶ್ರ ವಿಭಾಗದಲ್ಲಿ ಒಂದು ಕಂಚಿನ ಪದಕ ಗಳಿಸಿತು.

ಇದರೊಂದಿಗೆ ಒಟ್ಟು 59 ಪಾಯಿಂಟ್ ಕಲೆ ಹಾಕಿತು. 57 ಪಾಯಿಂಟ್ ಗಳಿಸಿದ ದೆಹಲಿ ರನ್ನರ್ ಅಪ್ ಆಯಿತು. ಜೂನಿಯರ್ ವಿಭಾಗದಲ್ಲಿ ಮಧ್ಯಪ್ರದೇಶ ಸಮಗ್ರ ಚಾಂಪಿಯನ್ ಆದರೆ ಹರಿಯಾಣ ರನ್ನರ್ ಅಪ್ ಆಯಿತು.

ಕಳೆದ ಬಾರಿ ಕರ್ನಾಟಕ, ಪುರುಷರ ವಿಭಾಗದಲ್ಲಿ ಮಾತ್ರ ಪಾಲ್ಗೊಂಡಿತ್ತು. ಆ ವಿಭಾಗದಲ್ಲಿ ಚಾಂಪಿಯನ್ ಕೂಡ ಆಗಿತ್ತು. ಈ ಬಾರಿ ಎಲ್ಲ ವಿಭಾಗದಲ್ಲಿ ಸ್ಪರ್ಧೆಗೆ ಇಳಿದಿತ್ತು.

ಪುರುಷರ ವಿಭಾಗದಲ್ಲಿ 4 ಚಿನ್ನ, ಮಿಶ್ರ ವಿಭಾಗದಲ್ಲಿ ಒಂದು ಚಿನ್ನ, ಒಂದು ಬೆಳ್ಳಿ, ಮೂರು ಕಂಚಿನ ಪದಕ ಗಳಿಸಿತು. ಜೂನಿಯರ್ ವಿಭಾಗಗಳಲ್ಲಿ ಕರ್ನಾಟಕ ತಂಡಕ್ಕೆ ಎರಡು ಕಂಚಿನ ಪದಕ ಲಭಿಸಿದವು.

ಕೊನೆಯ ದಿನದ ಫಲಿತಾಂಶಗಳು (ಎಲ್ಲ 200 ಮೀಟರ್ಸ್): ಪುರುಷರ ಡಿ–20: ಕರ್ನಾಟಕ–1, ಪಂಜಾಬ್–2, ಕೇರಳ–3; ಡಿ–10: ಕರ್ನಾಟಕ–1, ಪಂಜಾಬ್–2, ಹರಿಯಾಣ–3; ಮಹಿಳೆಯರ ಡಿ–20: ಹರಿಯಾಣ–1, ಪಂಜಾಬ್–2, ದೆಹಲಿ–3; ಡಿ–20: ಹರಿಯಾಣ–1, ಮಧ್ಯಪ್ರದೇಶ–2, ದೆಹಲಿ–3; ಮಿಶ್ರ ಡಿ–20: ಕೇರಳ–1, ಹರಿಯಾಣ–2, ಮಧ್ಯಪ್ರದೇಶ–3; ಡಿ–10: ದೆಹಲಿ–1, ಮಹಾರಾಷ್ಟ್ರ–2, ಕರ್ನಾಟಕ–3; ಜೂನಿಯರ್ ಬಾಲಕರು, ಡಿ–10: ದೆಹಲಿ–1, ಮಧ್ಯಪ್ರದೇಶ–2, ಹರಿಯಾಣ–3; ಜೂನಿಯರ್ ಬಾಲಕಿಯರು, ಡಿ–10: ಹರಿಯಾಣ–1, ದೆಹಲಿ–2, ಕರ್ನಾಟಕ–3; ಜೂನಿಯರ್ ಮಿಶ್ರ, ಡಿ–10: ಹರಿಯಾಣ–1, ಮಧ್ಯಪ್ರದೇಶ–2, ದೆಹಲಿ–3.

ಹಾಕಿ: ಸಿಆರ್‌ಪಿಎಫ್‌ಗೆ ಜಯ

ಬೆಂಗಳೂರು: ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ (ಆರ್‌ಎಸ್‌ಪಿಬಿ) ಮತ್ತು ಸೆಂಟ್ರಲ್ ರಿಸರ್ವ್ ಪೊಲೀಸ್ ಪಡೆ (ಸಿಆರ್‌ಪಿಎಫ್) ತಂಡಗಳು ಹಾಕಿ ಇಂಡಿಯಾ ಆಶ್ರಯದಲ್ಲಿ ನಡೆಯುತ್ತಿರುವ ಪುರುಷರ ರಾಷ್ಟ್ರೀಯ ಅಂತರ ಇಲಾಖಾ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಭಾನುವಾರ ಇಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಆರ್‌ಎಸ್‌ಪಿಬಿ 2–0ಯಿಂದ ಏರ್ ಇಂಡಿಯಾ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಗುರುಸಾಹಿಬ್‌ಜೀತ್ ಸಿಂಗ್ (1ನೇ ನಿಮಿಷ) ಮತ್ತು ಹರ್‌ಸಾಹಿಬ್ ಸಿಂಗ್ (30ನೇ ನಿ.) ಗೋಲು ಹೊಡೆದರು.

ಎ ಗುಂಪಿನಲ್ಲಿ ಸಿಆರ್‌ಪಿಎಫ್ 7–1ರಿಂದ ಸ್ಪೋರ್ಟ್ಸ್ ಅಥಾರಿಟಿ ಆಫ್ ಗುಜರಾತ್ ಅಕಾಡೆಮಿ ಎದುರು ಗೆದ್ದಿತು.

ಸಿಆರ್‌ಪಿಎಫ್ ತಂಡಕ್ಕಾಗಿ ರಾಹುಲ್ ಶರ್ಮಾ (17, 25ನೇ ನಿ.), ಕೌಶಲ್ ಯಾದವ್ (22, 39ನೇ ನಿ.), ಲವ್‌ಜೀತ್ ಸಿಂಗ್ (48, 49ನೇ ನಿ.) ಮಿಂಚಿದರು. ಸಂಶೇರ್ (11ನೇ ನಿ.) ಒಂದು ಗೋಲು ದಾಖಲಿಸಿದರು. ಎದುರಾಳಿ ತಂಡದ ಅನಿಲ್ ಪಟೇಲಿಯಾ (50) ಗೋಲು ಹೊಡೆದರು. ಇನ್ನುಳಿದ ಪಂದ್ಯಗಳಲ್ಲಿ ಪೆಟ್ರೊ ಲಿಯಂ ಸ್ಪೋರ್ಟ್ಸ್ ಪ್ರಮೋಷನ್ ಬೋರ್ಡ್ 6–2ರಿಂದ ಆಲ್ ಇಂಡಿಯಾ ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ ಎದುರು, ಸ್ಪೋರ್ಟ್ಸ್ ಅಥಾ ರಿಟಿ ಆಫ್ ಇಂಡಿಯಾ 4–2ರಿಂದ ತಮಿಳುನಾಡು ಪೊಲೀಸ್ ವಿರುದ್ಧ ಗೆದ್ದವು.

ವಾಲಿಬಾಲ್: ಮುಂಬೈ ತಂಡಕ್ಕೆ ಜಯ

ಕೊಚ್ಚಿ: ಮುಂಬೈ ಮಿಟಿಯೋರ್ಸ್ ತಂಡದವರು ಪ್ರೈಮ್ ವಾಲಿಬಾಲ್ ಲೀಗ್ ಪಂದ್ಯದಲ್ಲಿ ಭಾನುವಾರ 14-15, 15-9, 15-12, 15-11, 15-8ರಿಂದ ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ಎದುರು ಗೆಲುವು ಸಾಧಿಸಿದರು.

ಮತ್ತೊಂದು ಪಂದ್ಯದಲ್ಲಿ ಕೊಚ್ಚಿ ಬ್ಲ್ಯೂ ಸ್ಪೈಕರ್ಸ್ 5–15, 15–11, 15–9, 12–15, 14–15 ಅಹಮದಾಬಾದ್ ಡಿಫೆಂಡರ್ಸ್ ಎದುರು ಸೋತಿತು.

ಭಗತ್–ಕದಂ, ತರುಣ್‌ಗೆ ಚಿನ್ನ

ವಿಕ್ಟೋರಿಯಾ, ಸ್ಪೇನ್ (ಪಿಟಿಐ): ಭಾರತದ ಪ್ರಮೋದ್ ಭಗತ್ ಮತ್ತು ಸುಕಾಂತ್ ಕದಂ ಅವರು ಇಲ್ಲಿ ನಡೆಯುತ್ತಿರುವ ಸ್ಪ್ಯಾನಿಶ್ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಡಬಲ್ಸ್ ವಿಭಾಗದಲ್ಲಿ ಚಿನ್ನ ಗೆದ್ದರು. ತರುಣ್ ಅವರು ಸಿಂಗಲ್ಸ್ ವಿಭಾಗದಲ್ಲಿ ಕಿರೀಟ ಧರಿಸಿದರು.

ಎಸ್ ಎಲ್ 3 – ಎಸ್ ಎಲ್ 4 ವಿಭಾಗದಲ್ಲಿ ಸ್ಪರ್ಧಿಸಿದ್ದ ಪ್ರಮೋದ್ -ಸುಕಾಂತ್ ಫೈನಲ್‌ನಲ್ಲಿ 22-20, 12-21, 21-9ರಿಂದ ಭಾರತದವರೇ ಆದ ತರುಣ್ ಮತ್ತು ನಿತೇಶ್ ಅವರನ್ನು ಮಣಿಸಿದರು.

ಎಸ್‌ಎಲ್3 ವಿಭಾಗದಲ್ಲಿ ಪ್ರಮೋದ್ 18-21, 8-21ರಿಂದ ಇಂಗ್ಲೆಂಡ್‌ನ ಡೇನಿಯಲ್ ಬೆಥೆಲ್ ಎದುರು ಸೋತು ಬೆಳ್ಳಿ ಗಳಿಸಿದರು.

ಇನ್ನೊಂದು ಸಿಂಗಲ್ಸ್‌ನಲ್ಲಿ ತರುಣ್ 12-21, 21-8, 21-13ರಿಂದ ಕದಂ ಅವರನ್ನು ಮಣಿಸಿ ಚಿನ್ನ ಜಯಿಸಿದರು.

ನೆಟ್‌ಬಾಲ್: ನಿತಿನ್, ನಂದಿನಿಗೆ ಸಾರಥ್ಯ

ಬೆಂಗಳೂರು: ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕದ ತಂಡಗಳನ್ನು ಪ್ರಕಟಿಸಲಾಗಿದೆ. ನಿತಿನ್ ಮತ್ತು ನಂದಿನಿ ಎಲ್.ಜಿ. ಅವರು ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಂಡಗಳನ್ನು ಮುನ್ನಡೆಸ-ಲಿದ್ದಾರೆ.ಮಹಾರಾಷ್ಟ್ರದ ನಾಗಪುರದಲ್ಲಿ ಮಾರ್ಚ್ 1ರಿಂದ 4ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯಲಿದೆ.

ತಂಡಗಳು: ಪುರುಷರು: ನಿತಿನ್ (ನಾಯಕ), ಮನೋಜ್ (ಉಪ ನಾಯಕ), ಚಂದ್ರಶೇಖರ್, ಮಯೂರ್ ಡಿ. ಆರ್, ರೋಹಿತ್ ಪಿ. ಡಿ, ಸುಜನ್, ತುಷಾರ್, ಸಾಕ್ಷಾತ್ ಎಚ್ ಎಸ್, ಕುಮಾರ್, ಶಿವಮೂರ್ತಿ ಜಿ ಕೆ, ವಿಶ್ರುತ್ ಎಚ್. ಆರ್, ಲೋಕೇಶ್ ಪೂಜಾರಿ, ಕೋಚ್: ಗಿರೀಶ್, ಮ್ಯಾನೇಜರ್: ಅವಿನಾಶ್ ಕುಮಾರ್ **ಮಹಿಳೆಯರು:** ನಂದಿನಿ ಎಲ್. ಜಿ. (ನಾಯಕಿ), ಗಗನಾ ಕೆ ಎಸ್ (ಉಪ ನಾಯಕಿ), ಶಿವಲೀಲಾ ಎಸ್, ದೀಪಾ ಟಿ. ಆರ್, ಮಹೇಶ್ವರಿ ಎಸ್, ಸುರಭಿ ಬಿ. ಆರ್, ಮನಸ್ವಿ ಎಚ್, ಸ್ವಾತಿ ಜಿ, ಸೋನಾಲಿ ಎಲ್, ಡೆಲ್ಸಿಯಾ ಎ ಶೆರ್ಲಿ, ಲೇಖಾ ಎಸ್, ಜನನಿ. ಮ್ಯಾನೇಜರ್ : ಮಂಜುನಾಥ್ ಎಚ್. ಕೆ.

ಆರ್‌ಸಿಬಿ: ಜರ್ಮನಿ ಚಾನ್ಸಲರ್ ಸಂವಾದ



ಒಲಾಫ್ (ಮಧ್ಯೆ) ಅವರಿಗೆ ಆರ್‌ಸಿಬಿ ಆಟಗಾರರ ಸಹಿ ಇರುವ ಬ್ಯಾಟ್ ನೀಡಲಾಯಿತು– ಪ್ರಜಾವಾಣಿ ಚಿತ್ರ

ಬೆಂಗಳೂರು (ಪಿಟಿಐ): ಇಲ್ಲಿಯ ಎಂ. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಭಾನುವಾರ ಭೇಟಿ ನೀಡಿದ್ದ ಜರ್ಮನಿ ಚಾನ್ಸಲರ್ ಒಲಾಫ್ ಸ್ಕಾಲ್ಜ್ ಅವರು ಐಪಿಎಲ್‌ನಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಕ್ರಿಕೆಟ್ ತಂಡದ ಆಟಗಾರರು ಮತ್ತು ಆಟಗಾರ್ತಿಯರೊಂದಿಗೆ ಸಂವಾದ ನಡೆಸಿದರು.

ಒಲಾಫ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧಿಕಾರಿಗಳು, ಆರ್‌ಸಿಬಿ ತಂಡಗಳ ಸದಸ್ಯರೊಡನೆ 15 ನಿಮಿಷಗಳ ಕಾಲ ಮಾತುಕತೆ ನಡೆಸಿದರು.

‘ಭಾರತೀಯರು ಕ್ರಿಕೆಟ್ ನೊಂದಿಗೆ ಭಾವನಾತ್ಮಕ ಸಂಬಂಧ ಹೊಂದಿರುವುದನ್ನು ಚಾನ್ಸಲರ್ ಅರಿತುಕೊಂಡರು. ಜರ್ಮನಿಯಲ್ಲಿ ಕ್ರಿಕೆಟ್ ಜನಪ್ರಿಯವಾಗಿಲ್ಲ. ಅಲ್ಲಿರುವ 2 ಲಕ್ಷಕ್ಕಿಂತ ಹೆಚ್ಚು ಭಾರತೀಯರು ಈ ಕ್ರೀಡೆಯನ್ನು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಜರ್ಮನಿ ರಾಯಭಾರ ಕಚೇರಿಯ ಅಧಿಕಾರಿಗಳು ಹೇಳಿದ್ದಾರೆ.



ಉಗ್ರರ ಗುಂಡಿನ ದಾಳಿಯಿಂದ ಮೃತಪಟ್ಟ ಸಂಜಯ್ ಶರ್ಮಾ ಅವರ ಮೃತದೇಹದ ಎದುರು ಸಂಬಂಧಿಕರು ರೋದಿಸಿದರು –ಪಿಟಿಐ ಚಿತ್ರ

ಉಗ್ರರ ಗುಂಡಿಗೆ ಕಾಶ್ಮೀರಿ ಪಂಡಿತ ಬಲಿ

ಶ್ರೀನಗರ(ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಕಾಶ್ಮೀರಿ ಪಂಡಿತರೊಬ್ಬರನ್ನು ಉಗ್ರರು ಭಾನುವಾರ ಬೆಳಿಗ್ಗೆ ಗುಂಡಿಕ್ಕಿ ಕೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುಲ್ವಾಮಾದ ಅಚನ್ ಪ್ರದೇಶದಲ್ಲಿ ಎಟಿಎಂ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಸಂಜಯ್ ಶರ್ಮಾ (40) ಮೇಲೆ ಭಯೋತ್ಪಾದಕರು ಗುಂಡು ಹಾರಿಸಿದ್ದರು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ತೀವ್ರ ಗಾಯಗೊಂಡಿದ್ದ ಅವರು ಮೃತಪಟ್ಟರು ಎಂದು ತಿಳಿಸಿದ್ದಾರೆ.

ಇದು ಕಾಶ್ಮೀರಿ ಪಂಡಿತರ ಮೇಲೆ ಉಗ್ರರು ಈ ವರ್ಷ ನಡೆಸಿದ ಮೊದಲ ದಾಳಿಯಾಗಿದ್ದು, ಕಳೆದ ವರ್ಷ ಮೂವರು ಕಾಶ್ಮೀರಿ ಪಂಡಿತರನ್ನು ಹತ್ಯೆ ಮಾಡಿದ್ದರು.

‘ಸ್ಥಳೀಯ ಮಾರುಕಟ್ಟೆಗೆ ತೆರಳು-ತ್ತಿದ್ದಾಗ ಉಗ್ರರು ಸಂಜಯ್ ಶರ್ಮಾ ಮೇಲೆ ಗುಂಡು ಹಾರಿಸಿದರು. ಘಟನೆ ನಡೆದ ಕೂಡಲೇ ಪೊಲೀಸರು ಮತ್ತು ಭದ್ರತಾ ಪಡೆಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದವು’ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಟ್ವೀಟ್ ಮಾಡಿದ್ದಾರೆ. ‘ಇದೊಂದು ಯೋಜಿತ ದಾಳಿ’ ಎಂದು ದಕ್ಷಿಣ ಕಾಶ್ಮೀರದ ಉಪ ಪೊಲೀಸ್ ನಿರ್ದೇಶಕ (ಡಿಐಜಿ) ರಯೀಸ್ ಭಟ್ ತಿಳಿಸಿದ್ದಾರೆ.

‘ಗ್ರಾಮದಲ್ಲಿ ಭದ್ರತಾ ಪಡೆಯನ್ನು ನಿಯೋಜಿಸಲಾಗಿತ್ತು. ಆದಾಗ್ಯೂ ಉಗ್ರರು ದಾಳಿ ನಡೆಸಿದ್ದು ಹೇಗೆಂದು ತನಿಖೆ ನಡೆಸಲಾಗುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

ರಾಜಕೀಯ ಪಕ್ಷಗಳು ಉಗ್ರರ ದಾಳಿಯನ್ನು ಖಂಡಿಸಿವೆ. ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕ ಒಮರ್ ಅಬ್ದುಲ್ಲಾ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಸೇರಿ ಅನೇಕರು ಘಟನೆಯನ್ನು ಖಂಡಿಸಿ, ಮೃತರ ಕುಟುಂಬಸ್ಥರಿಗೆ ಸಂತಾಪ ಸೂಚಿಸಿದ್ದಾರೆ.

ದಾಳಿಯು ಕಣಿವೆಯ ಅಲ್ಪಸಂಖ್ಯಾತ ಸಮುದಾಯದವರಲ್ಲಿ ತೀವ್ರ ಆತಂಕ ಸೃಷ್ಟಿಸಿದೆ. 2021ರಿಂದ ಭಯೋತ್ಪಾದಕರು ಕಾಶ್ಮೀರದಲ್ಲಿ ಪಂಡಿತರು, ವಲಸೆ ಕಾರ್ಮಿಕರು ಮತ್ತು ಸ್ಥಳೀಯರಲ್ಲದವರ ಮೇಲೆ ದಾಳಿಯನ್ನು ಹೆಚ್ಚಿಸಿದ್ದಾರೆ.

‘ಮನ್ ಕಿ ಬಾತ್’ ಮಾಸಿಕ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ

‘ಇ–ಸಂಜೀವಿನಿ’ ಡಿಜಿಟಲ್ ಕ್ರಾಂತಿಯ ಪ್ರತಿಬಿಂಬ

ನವದೆಹಲಿ(ಪಿಟಿಐ): ‘ಆನ್‌ಲೈನ್‌ನಲ್ಲಿ ವೈದ್ಯಕೀಯ ಸಮಾಲೋಚನೆಗಳನ್ನು ಸುಗಮಗೊಳಿಸುವ ‘ಇ- ಸಂಜೀವಿನಿ’ ಆ್ಯಪ್ ಭಾರತದ ಡಿಜಿಟಲ್ ಕ್ರಾಂತಿಯನ್ನು ಪ್ರತಿಬಿಂಬಿಸುತ್ತಿದ್ದು, ಈ ಆ್ಯಪ್‌ನಿಂದ ಇದುವರೆಗೆ 10 ಕೋಟಿಗೂ ಹೆಚ್ಚು ಜನರು ಪ್ರಯೋಜನ ಪಡೆದಿದ್ದಾರೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

‘ಮನ್ ಕಿ ಬಾತ್’ ಮಾಸಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಈ ಆ್ಯಪ್ ಜನಸಾಮಾನ್ಯರು, ಮಧ್ಯಮ ವರ್ಗ ಅಥವಾ ದೂರದ ಪ್ರದೇಶಗಳಲ್ಲಿ ವಾಸಿಸುವವರಿಗೆ ಜೀವ ರಕ್ಷಣೆಯ ಆ್ಯಪ್ ಆಗುತ್ತಿದೆ. ಇದು ಭಾರತದ ಡಿಜಿಟಲ್ ಕ್ರಾಂತಿಯ ಶಕ್ತಿ’ ಎಂದರು.

ಭಾರತದ ‘ಯುಪಿಐ’ ಮತ್ತು ಸಿಂಗಪುರದ ‘ಪೇ ನೌ’ ನಡುವಿನ ಇತ್ತೀಚಿನ ಒಪ್ಪಂದವನ್ನು ಉಲ್ಲೇಖಿಸಿದ ಅವರು, ಈ ಒಪ್ಪಂದದಿಂದಾಗಿ ಎರಡು ದೇಶಗಳ ಜನರ ನಡುವೆ ಸುಲಭವಾದ ಹಣ ವರ್ಗಾವಣೆಗೆ ಅನುಮತಿಸ-ಲಾಗಿದೆ. ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯಿಂದ ದೇಶದಲ್ಲಿ ಜೀವನ ಸೌಕರ್ಯಕ್ಕೆ ಉತ್ತೇಜನ ದೊರೆತಂತಾಗಿದೆ’ ಎಂದರು.

‘ಇ- ಸಂಜೀವಿನಿ’ ಆ್ಯಪ್ ವೈದ್ಯಕೀಯ ಸಮಾಲೋಚನೆಗಳನ್ನು ಒದಗಿಸುವಲ್ಲಿ ಎಷ್ಟು ಸಹಾಯಕವಾಗಿದೆ ಎಂಬುದನ್ನು ತೋರಿಸುವ ಸಲುವಾಗಿ ಪ್ರಧಾನಿ ಅವರು ವೈದ್ಯರು ಮತ್ತು ರೋಗಿಯೊಂದಿಗೆ ಮಾತನಾಡಿದರು. ‘ಇದೊಂದು ದೊಡ್ಡ ಸಾಧನೆ. ಭಾರತದ ಜನರು ತಂತ್ರ-ಜ್ಞಾನವನ್ನು ಹೇಗೆ ತಮ್ಮ ಜೀವನದ ಭಾಗವಾಗಿಸಿಕೊಂಡಿದ್ದಾರೆ ಎಂಬುದಕ್ಕೆ ಇದು ಜೀವಂತ ಉದಾಹರಣೆಯಾಗಿದೆ. ಕರೋನಾ ಸಮಯದಲ್ಲಿ, ಇ-ಸಂಜೀವಿನಿ ಅಪ್ಲಿಕೇಷನ್ ಒಂದು ದೊಡ್ಡ ವರವಾಗಿ ಸಾಬೀತಾಗಿದೆ ಎಂದು ನಾವು ನೋಡಿದ್ದೇವೆ’ ಎಂದರು.

ಘರ್ಷಣೆ: ಸಿಧು ಹತ್ಯೆ ಪ್ರಕರಣದ ಇಬ್ಬರ ಸಾವು

ಅಮೃತಸರ (ಪಿಟಿಐ): ಪಂಜಾಬ್‌ನ ತರನ್ ತಾರನ್ ಜಿಲ್ಲೆಯ ಗೋಯಿಂದ್‌ವಾಲ್ ಸಾಹಿಬ್ ಕೇಂದ್ರೀಯ ಕಾರಾಗೃಹದಲ್ಲಿ ನಡೆದ ಘರ್ಷಣೆಯಲ್ಲಿ ಗಾಯಕ ಸಿಧು ಮೂಸೆವಾಲ ಹತ್ಯೆ ಪ್ರಕರಣದ ಇಬ್ಬರು ಗ್ಯಾಂಗ್‌ಸ್ಟರ್‌ಗಳು ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಮನ್‌ದೀಪ್ ಸಿಂಗ್, ಮನಮೋಹನ್ ಸಿಂಗ್ ಎಂದು ಗುರುತಿಸಲಾಗಿದೆ. ಘರ್ಷಣೆಯಲ್ಲಿ ಮತ್ತೊಬ್ಬ ಬಂಧಿತ ಗಂಭೀರವಾಗಿ ಗಾಯಗೊಂಡಿದ್ದು, ಆತನೂ ಇದೇ ಪ್ರಕರಣದಲ್ಲಿ ಬಂಧನಕ್ಕೀಡಾಗಿದ್ದ ಕೇಶವ್ ಎಂದು ಗುರುತಿಸಲಾಗಿದೆ. ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರೂ ಒಂದೇ ಗುಂಪಿನವರು ಎಂದು ಪೊಲೀಸರು ತಿಳಿಸಿದ್ದಾರೆ.

ಯಾವುದೋ ವಿಷಯವಾಗಿ ಬಂಧಿತರ ನಡುವೆ ಘರ್ಷಣೆ ಏರ್ಪಟ್ಟಿತು. ಕೆಲ ನಿಮಿಷದಲ್ಲೇ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಪಾತ್ರೆಗಳು ಮತ್ತು ಕಬ್ಬಿಣದ ಸರಳುಗಳನ್ನು ಬಳಸಿ ಹೊಡೆದಾಡಿಕೊಂಡರು ಎಂದು ಮೂಲಗಳು ತಿಳಿಸಿವೆ.

ಖ್ಯಾತ ಗಾಯಕ ಸಿಧು ಮೂಸೆವಾಲ ಅವರನ್ನು ಪಂಜಾಬ್‌ನ ಮಾನ್ಸ ಜಿಲ್ಲೆಯಲ್ಲಿ ಕಳೆದ ವರ್ಷ ಮೇ 29ರಂದು ಗುಂಡಿಕ್ಕಿ ಕೊಲ್ಲಲಾಗಿತ್ತು.

ಡಿನೋಟಿಫಿಕೇಷನ್ ಆದೇಶ: ರಾಜ್ಯ ಸರ್ಕಾರ, ನೈಸ್ ಸಂಸ್ಥೆಗೆ ಸುಪ್ರೀಂ ಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಯೋಜನೆಯಡಿ ಸ್ವಾಧೀನ-ಪಡಿಸಿಕೊಳ್ಳಲು ಉದ್ದೇಶಿಸಿದ್ದ 13 ಎಕರೆಗೂ ಅಧಿಕ ಜಮೀನಿನ ಡಿನೋಟಿಫಿಕೇಷನ್ ಆದೇಶ ಪ್ರಶ್ನಿಸಿ ಸಲ್ಲಿ-ಕೆಯಾಗಿದ್ದ ಅರ್ಜಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ನೈಸ್ ಸಂಸ್ಥೆಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಸುಜಾತ ವಿಜಯ್ ಹಾಗೂ ಮತ್ತೊಬ್ಬರ ಪರವಾಗಿ ಬಾಲಾಜಿ ಶ್ರೀನಿವಾಸನ್ ಎಂಬುವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗ-ಳಾದ ಸಂಜೀವ್ ಖನ್ನಾ ಹಾಗೂ ಎಂ.ಎಂ.ಸುಂದರೇಶ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ನೋಟಿಸ್ ಜಾರಿಗೊಳಿಸಿದ ದಿನದಿಂದ ಸರಿಯಾಗಿ ಆರು ವಾರಗಳೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರ ಹಾಗೂ ನೈಸ್ ಸಂಸ್ಥೆಗೆ ಸೂಚಿಸಿದೆ.

ಮುಂದಿನ ವಿಚಾರಣೆವರೆಗೂ ಜಮೀನಿನ ವಿಚಾರದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆಯೂ ಉಭಯ ಬಣದವರಿಗೆ ನಿರ್ದೇಶಿಸಿದೆ. ವಿಚಾರಣೆಯನ್ನು ಈ ವರ್ಷದ ಆಗಸ್ಟ್‌ಗೆ ನಿಗದಿಪಡಿಸಿದೆ.

ರಾಜ್ಯ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠವು ತಮ್ಮ ಅರ್ಜಿ ವಜಾಗೊಳಿಸಿದ್ದನ್ನು ಪ್ರಶ್ನಿಸಿ ಸುಜಾತ ಹಾಗೂ ಮತ್ತೊಬ್ಬರು ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಈ ವರ್ಷದ ಜನವರಿ 3ರಂದು ಅರ್ಜಿಯ ವಿಚಾರಣೆ ನಡೆಸಿದ್ದ ಪೀಠವು ಅರ್ಜಿದಾರರ ಮನವಿ ತಿರಸ್ಕರಿಸಿತ್ತು. ವಿಭಾಗೀಯ ಪೀಠದ ಆದೇಶದ ಸಿಂಧುತ್ವ ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

‘2020ರ ಮೇ 19ರಂದು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಪ್ಲಾನಿಂಗ್ ಅಥಾರಿಟಿಗೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ನೈಸ್ ಸಂಸ್ಥೆಯು ರಾಜ್ಯ ಸರ್ಕಾರದ ಪೂರ್ವಾನುಮತಿ ಇಲ್ಲದೆ, ಒಪ್ಪಂದ, ಯೋಜನಾ ವರದಿಯಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಉಲ್ಲಂಘಿಸಿ ಕಾಮಗಾರಿ ನಡೆಸಲು ಸಾಧ್ಯವಿಲ್ಲ ಎಂದು ಹೇಳಿತ್ತು. ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಹೈಕೋರ್ಟ್ ಉಲ್ಲಂಘಿಸಿದೆ’ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಯೋಜನೆ ಕೈಗೊಂಡಿರುವ ಸಂಸ್ಥೆಯು ಸಲ್ಲಿಸಿದ್ದ ಗೂಗಲ್ ಮ್ಯಾಪ್‌ನ ಆಧಾರದಲ್ಲಿ ಹೈಕೋರ್ಟ್ ತೀರ್ಪು ನೀಡಿದೆ. ಆ ಮೂಲಕ ಗಂಭೀರ ಲೋಪ ಎಸಗಿದೆ’ ಎಂದೂ ಅರ್ಜಿಯಲ್ಲಿ ದೂರಿದ್ದಾರೆ.

‘ಮೈತ್ರಿಕೂಟಕ್ಕೆ ಸೇರಲು ನಿತೀಶ್ ಬೇಡಿಕೊಂಡಿದ್ದರೇ?’

ಪಟ್ನಾ (ಪಿಟಿಐ): ‘ನಿತೀಶ್‌ಕುಮಾರ್ ಅವರಿಗೆ ಪಕ್ಷದ ಬಾಗಿಲು ಶಾಶ್ವತವಾಗಿ ಮುಚ್ಚಿದೆ’ ಎಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಜೆಡಿಯು ಮುಖಂಡ ರಾಜೀವ್ ರಂಜನ್ ಸಿಂಗ್ ಅವರು ಭಾನುವಾರ ತಿರುಗೇಟು ನೀಡಿದ್ದಾರೆ. ‘ಎನ್‌ಡಿಎ ಮೈತ್ರಿಕೂಟಕ್ಕೆ ಮತ್ತೊಮ್ಮೆ ಸೇರಿ-ಸಿಕೊಳ್ಳುವಂತೆ ನಿತೀಶ್ ಅವರು ಬೇಡಿಕೊಂಡಿದ್ದರೇ?’ ಎಂದಿದ್ದಾರೆ.

ಶನಿವಾರ ರಾಜ್ಯಕ್ಕೆ ಭೇಟಿ ನೀಡಿದ್ದ ಅಮಿತ್ ಶಾ ಅವರು, ‘ಪ್ರಧಾನಮಂತ್ರಿ ಆಗುವ ಮಹತ್ವಾಕಾಂಕ್ಷೆಯನ್ನು ಈಡೇ-ರಿಸಿಕೊಳ್ಳಲು ನಿತೀಶ್ ಅವರು ಬಿಜೆಪಿ ಮೈತ್ರಿಯನ್ನು ತೊರೆದು ಕಾಂಗ್ರೆಸ್ ಹಾಗೂ ಆರ್‌ಜೆಡಿ ಜೊತೆ ಕೈಜೋಡಿಸಿದ್ದಾರೆ. ಪಕ್ಷದ ಬಾಗಿಲು ಅವರಿಗೆ ಶಾಶ್ವತವಾಗಿ ಮುಚ್ಚಿದೆ’ ಎಂದಿದ್ದರು.

‘ಬಿಜೆಪಿಯೊಂದಿಗೆ ಕೈಜೋಡಿಸಲು ನಿತೀಶ್ ಅವರು ಬೇಡಿಕೊಂಡಿದ್ದರೇ? ಪ್ರಧಾನಿ ನರೇಂದ್ರ ಮೋದಿ ಅವರು 2017ರಲ್ಲಿ ಮನವೊಲಿಕೆ ಮಾಡಿದ್ದರಿಂದ ನಿತೀಶ್ ಅವರು ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿಕೊಂಡಿದ್ದರು. ಈ ಕುರಿತು ಅಮಿತ್ ಶಾ ಅವರು ನೆನಪಿಸಿಕೊಳ್ಳಬೇಕು’ ಎಂದರು.

‘ನಿತೀಶ್ ಹಾಗೂ ಜೆಡಿಯು ಪಕ್ಷವು ಮೈತ್ರಿಕೂಟದೊಂದಿಗೆ ಇಲ್ಲದಿರು-ವುದರ ಬಿಸಿ ಬಿಜೆಪಿಗೆ ತಟ್ಟಿದೆಯೇ’ ಎಂದು ಜೆಡಿಯುನ ಮತ್ತೊಬ್ಬ ಮುಖಂಡ ವಿಜಯ್ ಕುಮಾರ್ ಚೌಧರಿ ಕೇಳಿದ್ದಾರೆ. ‘ಪದೇ ಪದೇ ಅಮಿತ್ ಶಾ ಅವರು ಒಂದು ವಿಷಯವನ್ನೇ ಯಾಕೆ ಮಾತನಾಡುತ್ತಾರೆ’ ಎಂದೂ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಸ್ಕೂಟಿ 2 ಕಿ.ಮೀ ಎಳೆದೊಯ್ದ ಲಾರಿ

ಮಹೋಬ್ (ಉತ್ತರ ಪ್ರದೇಶ) (ಪಿಟಿಐ): ‘ಅಜ್ಜ ಹಾಗೂ ಮೊಮ್ಮಗ ಹೋಗುತ್ತಿದ್ದ ಸ್ಕೂಟಿಗೆ ಡಿಕ್ಕಿ ಹೊಡೆದ ಲಾರಿವೊಂದು, ಸ್ಕೂಟಿಯನ್ನು ಎರಡು ಕಿ.ಮೀ. ವರೆಗೆ ಎಳೆದೊಯ್ದಿದೆ. ಅಪಘಾತದಲ್ಲಿ ಇಬ್ಬರೂ ಮೃತಪಟ್ಟಿದ್ದಾರೆ’ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

‘ಶನಿವಾರ ಈ ಅಪಘಾತ ನಡೆದಿದೆ. ನಿವೃತ್ತ ಶಿಕ್ಷಕ, 66 ವರ್ಷದ ಉದಿತ್ ನಾರಾಯಣ್ ಚೌರಾಸಿಯಾ ಹಾಗೂ ಅವರ ಆರು ವರ್ಷದ ಮೊಮ್ಮಗ ಇಬ್ಬರೂ ಮಾರುಕಟ್ಟೆಗೆ ಹೋಗುತ್ತಿದ್ದರು. ಲಾರಿಯಡಿಗೆ ಸಿಲುಕಿಕೊಂಡಿದ್ದ ಅಜ್ಜ ಮತ್ತು ಮೊಮ್ಮಗ ಇಬ್ಬರನ್ನೂ ಲಾರಿಯು ಎರಡು ಕಿ.ಮೀ. ದೂರದವರೆಗೆ ಎಳೆದೊಯ್ದಿದೆ’ ಎಂದು ಮಾಹಿತಿ ನೀಡಿದರು.

‘ಅಜ್ಜ ಮತ್ತು ಮೊಮ್ಮಗ ಲಾರಿ ಅಡಿ ಸಿಲುಕಿಕೊಂಡಿದ್ದನ್ನು ಗಮನಿಸಿದ ಸ್ಥಳೀಯರು ಲಾರಿಯನ್ನು ನಿಲ್ಲಿಸಿದರು. ನಂತರ ಬಂದ ಪೊಲೀಸರು ಇಬ್ಬರ ಮೃತದೇಹಗಳನ್ನು ಹೊರತೆಗೆದು, ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು.ಲಾರಿ ಚಲಾಯಿಸುತ್ತಿದ್ದ ಎನ್ನಲಾದ ವ್ಯಕ್ತಿಯನ್ನು ಬಂಧಿಸಲಾಗಿದೆ. ಪ್ರಕರಣದ ತನಿಖೆ ನಡೆಸಲಾಗುತ್ತಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ನಿವೃತ್ತ ಸೈನಿಕರ ಅರ್ಜಿ: ಇಂದು ವಿಚಾರಣೆ

ನವದೆಹಲಿ (ಪಿಟಿಐ): ಒಂದು ಶ್ರೇಣಿ–ಒಂದು ಪಿಂಚಣಿ ಯೋಜನೆಯಡಿಯ ಅರ್ಹ ಪಿಂಚಣಿದಾರರಿಗೆ ನಾಲ್ಕು ಕಂತುಗಳ ಬದಲು ಒಂದೇ ಕಂತಿನಲ್ಲಿ ಬಾಕಿ ಮೊತ್ತ ಪಾವತಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ನಿವೃತ್ತ ಸೈನಿಕರು, ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಇಂಡಿಯನ್ ಎಕ್ಸ್–ಸರ್ವಿಸ್‌ಮನ್ ಮೂವ್‌ಮೆಂಟ್ (ಐಇಎಸ್‌ಎಂ) ಸಂಘಟನೆಯ ಪರವಾಗಿ ವಕೀಲ ಬಾಲಾಜಿ ಶ್ರೀನಿವಾಸನ್ ಅವರು ಅರ್ಜಿ ಸಲ್ಲಿಸಿದ್ದಾರೆ. ಇದನ್ನು ಇದೇ 27ರಂದು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ ತಿಳಿಸಿದೆ.

ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ಅಮೃತಸರ: ಗಡಿಯಾಚೆಯಿಂದ ಹಾರಿ ಬಂದ ಡ್ರೋನ್ ಅನ್ನು ಅಮೃತಸರ ವಲಯದ ಶಹಜಾದಾ ಗ್ರಾಮದ ಬಳಿ ಬಿಎಸ್‌ಎಫ್ ಯೋಧರು ಹೊಡೆದು-ರುಳಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಗಡಿ ಬಳಿ ನಿಯೋಜನೆಗೊಂಡಿದ್ದ ಬಿಎಸ್‌ಎಫ್ ಯೋಧರು ಡ್ರೋನ್ ಅನ್ನು ಗಮನಿಸಿದ್ದು, ಬಳಿಕ ಗುಂಡು ಹಾರಿಸಿ ಕೆಳಗುರುಳಿಸಿದ್ದಾರೆ ಎಂದೂ ಹೇಳಿದ್ದಾರೆ. ಈ ಡ್ರೋನ್ ಪಾಕಿಸ್ತಾನದಿಂದ ಹಾರಿ ಬಂದಿರುವುದಾಗಿ ಅಧಿಕಾರಿಗಳು ಶಂಕಿಸಿದ್ದಾರೆ.

ಡ್ರೋನ್‌ನ ಅವಶೇಷಗಳನ್ನು ಸಂಗ್ರಹಿಸಿದ್ದು, ಅದನ್ನು ಚೀನಾದಲ್ಲಿ ನಿರ್ಮಿಸಲಾಗಿತ್ತು ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ ಗಲಭೆ: 9 ಆರೋಪಿಗಳ ಖುಲಾಸೆ

ನವದೆಹಲಿ (ಪಿಟಿಐ): 2020ರಲ್ಲಿ ಈಶಾನ್ಯ ದೆಹಲಿಯಲ್ಲಿ ನಡೆದಿದ್ದ ಗಲಭೆ ವೇಳೆ ಔಷಧ ಅಂಗಡಿಯೊಂದಕ್ಕೆ ಗುಂಪೊಂದು ಬೆಂಕಿ ಹಚ್ಚಿದ್ದ ಪ್ರಕರಣದ ಒಂಬತ್ತು ಆರೋಪಿಗಳನ್ನು ಇಲ್ಲಿಯ ನ್ಯಾಯಾಲಯವೊಂದು ಖುಲಾಸೆಗೊಳಿಸಿದೆ. ಆರೋಪಿಗಳ ದೋಷ ಸಾಬೀತುಗೊಳಿಸಲು ಕೇವಲ ಒಬ್ಬ ಸಾಕ್ಷಿಯ ರುಜುವಾತು ಸಾಕಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

‘ಒಂಬತ್ತು ಆರೋಪಿಗಳೇ ತಪ್ಪಿತಸ್ಥರು ಎಂಬ ಅನುಮಾನದ ಹೊರತಾಗಿ ಆರೋಪ ಸಾಬೀತು ಮಾಡಲು ಬೇರೆ ಸಾಕ್ಷ್ಯಗಳನ್ನು ಒದಗಿಸಲಾಗಿಲ್ಲ. ಹೀಗಾಗಿ ಆರೋಪಿಗಳನ್ನು ಅವರ ವಿರುದ್ಧದ ಎಲ್ಲಾ ಆರೋಪಗಳಿಂದ ಖುಲಾಸೆ ಮಾಡಲಾಗಿದೆ’ ಎಂದು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಪುಲಸ್ತ್ಯ ಪ್ರಮಾಚಲ ಅವರು ಆದೇಶ ನೀಡಿದ್ದಾರೆ.

2020ರ ಫೆಬ್ರುವರಿ 25ರಂದು ದೆಹಲಿ ಗಲಭೆ ವೇಳೆ ಭಾಗೀರತಿ ವಿಹಾರ ಪ್ರದೇಶದ ಮೈನ್ ಬ್ರಿಜ್‌ಪುರಿ ರಸ್ತೆಯ ಔಷಧ ಅಂಗಡಿಯೊಂದಕ್ಕೆ ಉದ್ರಿಕ್ತ ಗುಂಪೊಂದು ಬೆಂಕಿ ಹಚ್ಚಿತ್ತು. ಒಂಬತ್ತು ಜನರ ಮೇಲೆ ಆರೋಪ ಹೊರಿಸಲಾಗಿತ್ತು.

ಬದಲಿ ಜಾಗದಲ್ಲಿ ಮಸೀದಿ ನಿರ್ಮಾಣ ಆರಂಭಕ್ಕೆ ದಿನಗಣನೆ

ಲಖನೌ (ಪಿಟಿಐ): ಉತ್ತರ ಪ್ರದೇಶದ ಅಯೋಧ್ಯೆ ಜಿಲ್ಲೆಯ ಧನ್ನಿಪುರ್ ಗ್ರಾಮದಲ್ಲಿ ಮಸೀದಿ ನಿರ್ಮಾಣಕ್ಕೆ ಇದ್ದ ಅಡ್ಡಿಗಳು ನಿವಾರಣೆಯಾಗಿ ಮಸೀದಿ ನಿರ್ಮಾಣ ಆರಂಭಕ್ಕೆ ದಿನಗಣನೆ ಶುರುವಾಗಿದೆ ಎನ್ನಲಾಗಿದೆ.

ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮಮಂದಿರ ನಿರ್ಮಿಸುವಂತೆ 2019ರಲ್ಲಿ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪು ನೀಡಿದ್ದ ವೇಳೆ, ಮಸೀದಿ ನಿರ್ಮಿಸಲು ಜಿಲ್ಲೆಯೊಳಗೆ ಐದು ಎಕರೆ ಬದಲಿ ಜಾಗವನ್ನು ಮಂಜೂರು ಮಾಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿತ್ತು.

ಬದಲಿ ಜಾಗ ನೀಡುವ ವಿಚಾರವು ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ (ಎಡಿಎ) ಬಳಿ ಇತ್ಯರ್ಥವಾಗದೇ ಬಾಕಿ ಉಳಿದಿದೆ. ಈ ಕುರಿತು ನಿರಕ್ಷೇಪಣಾ ಪತ್ರ (ಎನ್‌ಒಸಿಎಸ್) ದೊರೆತ ಕಾರಣ ಬದಲಿ ಭೂಮಿ ಮಂಜೂರು ಮಾಡುವ ಕುರಿತು ಈ ವಾರದ ಒಳಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಎಡಿಎ ಮುಖ್ಯಸ್ಥ ಮತ್ತು ಅಯೋಧ್ಯೆ ವಿಭಾಗೀಯ ಆಯುಕ್ತ ಗೌರವ್ ದಯಾಳ್ ಅವರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮೇಘಾಲಯ, ನಾಗಾಲ್ಯಾಂಡ್ ಚುನಾವಣೆ: ಇಂದು ಮತದಾನ

ಪ್ರಜಾವಾಣಿ ವಾರ್ತೆ



ಮೇಘಾಲಯದ ನಂಗ್‌ಪೋಹ್‌ನಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಇವಿಎಂಗಳನ್ನು ಪಡೆದುಕೊಂಡು ಮತಗಟ್ಟೆಗಳ ಬಳಿ ನಡೆದರು –ಪಿಟಿಐ ಚಿತ್ರ

ಗುವಾಹಟಿ: ಮೇಘಾಲಯ ಮತ್ತು ನಾಗಾಲ್ಯಾಂಡ್ ವಿಧಾನಸಭೆ ಚುನಾವಣೆಯ ಮತದಾನವು ಸೋಮವಾರ ನಡೆಯಲಿದೆ.

ಬೆಳಿಗ್ಗೆ 7 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದ್ದು, ಮತಗಟ್ಟೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

60 ಸಂಖ್ಯಾಬಲದ ಎರಡು ರಾಜ್ಯಗಳಲ್ಲೂ ತಲಾ 59 ಕ್ಷೇತ್ರಗಳಿಗೆ ಮಾತ್ರ ಮತದಾನ ನಡೆಯಲಿದೆ. ನಾಗಾಲ್ಯಾಂಡ್‌ನ ಕ್ಷೇತ್ರವೊಂದರಲ್ಲಿ ಪ್ರತಿಸ್ಪರ್ಧಿ ಅಭ್ಯರ್ಥಿಗಳು ನಾಮಪತ್ರ ಹಿಂಪಡೆದುಕೊಂಡ ಕಾರಣ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾ-ಗಿದ್ದಾರೆ.

ಮೇಘಾಲಯದ ಶಿಲ್ಲಾಂಗ್ ವಿಧಾನಸಭಾ ಕ್ಷೇತ್ರದ ಯುನೈಟೆಡ್ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಎಚ್.ಡಿ.ಆರ್. ಲಿಂಗ್ಡೊ ಅವರು ಮೃತಪಟ್ಟಿರುವುದರಿಂದ ಆ ಕ್ಷೇತ್ರದ ಮತದಾನವನ್ನು ಮುಂದೂಡಲಾಗಿದೆ.

ಎರಡೂ ರಾಜ್ಯಗಳಲ್ಲೂ ಉಗ್ರರ ದಾಳಿಯ ಭೀತಿ ಇರುವುದರಿಂದ ಬಿಗಿಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೇಘಾಲಯದಲ್ಲಿ ಬಾಂಗ್ಲಾದೇಶದೊಂದಿಗಿನ ಗಡಿಯನ್ನು ಮತ ಎಣಿಕೆಯಾಗುವವರೆಗೆ ಮುಚ್ಚಲಾಗಿದೆ. ಮಾ. 2ರಂದು ಮತಎಣಿಕೆ ನಡೆಯಲಿದೆ.

ಮಾದಕ ವಸ್ತು ವಶ: ಚುನಾವಣೆ ನಡೆಯಲಿರುವ ಮೇಘಾಲಯದಲ್ಲಿ ₹33.24 ಕೋಟಿ ಮೌಲ್ಯದ ಮಾದಕವಸ್ತು ಮತ್ತು ₹8.63 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಇತಿಹಾಸ ಬರೆಯುವತ್ತ ನಾಲ್ವರು ಮಹಿಳಾ ಅಭ್ಯರ್ಥಿಗಳು

ಕೊಹಿಮಾ (ಪಿಟಿಐ): ನಾಗಾಲ್ಯಾಂಡ್ ವಿಧಾನಸಭೆ ಚುನಾವಣಾ ಕಣದಲ್ಲಿ ಈ ಬಾರಿ 4 ಮಹಿಳಾ ಅಭ್ಯರ್ಥಿಗಳಿದ್ದಾರೆ. ಮಹಿಳೆಯರು ಶಾಸಕರಾದ ಉದಾಹರಣೆಯೇ ರಾಜ್ಯದಲ್ಲಿಲ್ಲ. ಹೀಗಾಗಿ, ಚುನಾವಣೆಯಲ್ಲಿ ಗೆದ್ದು ರಾಜ್ಯದ ಪ್ರಥಮ ಶಾಸಕಿಯಾಗಿ ಇತಿಹಾಸ ನಿರ್ಮಿಸುವ ಪ್ರಯತ್ನದಲ್ಲಿ ಈ ಅಭ್ಯರ್ಥಿಗಳಿದ್ದಾರೆ.

ದಿಮಾಪುರ್–3 ಕ್ಷೇತ್ರದ ಎನ್‌ಡಿಪಿಪಿ ಅಭ್ಯರ್ಥಿ ಹೇಖನಿ ಜಖಾಲು, ಟಡನಿಂಗ್‌ನ ಕಾಂಗ್ರೆಸ್ ಅಭ್ಯರ್ಥಿ ರೋಸಿ ಥಾಂಪ್‌ಸನ್, ಪಶ್ಚಿಮ ಅಂಗಾಮಿ ಕ್ಷೇತ್ರದ ಎನ್‌ಡಿಪಿಪಿ ಅಭ್ಯರ್ಥಿ ಸಲ್‌ಹೌತುವೊನುವೊ, ಅಟೋಯ್ಜು ಬಿಜೆಪಿ ಅಭ್ಯರ್ಥಿ ಕಹುಲಿ ಸೆಮ ಕಣದಲ್ಲಿರುವ ಮಹಿಳಾ ಅಭ್ಯರ್ಥಿಗಳು.

ಈ ವರೆಗೆ ನಾಗಾಲ್ಯಾಂಡ್‌ನಿಂದ ಇಬ್ಬರು ಸಂಸದೆಯರು ಲೋಕಸಭೆಗೆ ಆಯ್ಕೆ ಆಗಿದ್ದಾರೆ.



ಅನಾಮಿಕಾ– ಟ್ವಿಟರ್ ಚಿತ್ರ

ಬಾಕ್ಸಿಂಗ್: ಬೆಳ್ಳಿ ಗೆದ್ದ ಅನಾಮಿಕಾ, ಅನುಪಮಾ

ಸೋಫಿಯಾ, ಬಲ್ಗೇರಿಯಾ (ಪಿಟಿಐ): ಭಾರತದ ಅನಾಮಿಕಾ ಮತ್ತು ಅನುಪಮಾ ಅವರು ಅವರು ಇಲ್ಲಿ ನಡೆಯುತ್ತಿರುವ ಸ್ಟ್ರಾಂಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿಯಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ.

ಮಹಿಳೆಯರ 50 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಅನಾಮಿಕಾ 1–4ರಿಂದ ಚೀನಾದ ಹು ಮೆಯಿ ಎದುರು ಸೋತರು.

ಅನಾಮಿಕಾ, ಇಲ್ಲಿ ಉತ್ತಮ ಪೈಪೋಟಿ ನೀಡಿದರು. ಇಬ್ಬರೂ ಬಾಕ್ಸರ್‌ಗಳು ಬಿರುಸಿನ ಪಂಚ್‌ಗಳನ್ನು ಪ್ರಯೋಗಿಸಿದರು. 81 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಅನುಪಮಾ, ಫೈನಲ್‌ನಲ್ಲಿ 0–5ರಿಂದ ಆಸ್ಟ್ರೇಲಿಯಾದ ಎಮ್ಮಾ ಸುಯಿ ಗ್ರೀನ್‌ಟ್ರೀ ಎದುರು ಮಣಿದರು.

ಪುರುಷರ 48 ಕೆಜಿ ವಿಭಾಗದಲ್ಲಿ ಗೋವಿಂದ್ ಸಾಹ್ನಿ ಕೂಡ ಬೆಳ್ಳಿ ಗೆದ್ದರು. ಫೈನಲ್‌ನಲ್ಲಿ ಅವರು 1–4ರಿಂದ ಉಜ್ಬೆಕಿಸ್ತಾನದ ಶೊದಿಯೊರ್ಜೊನ್ ಮೆಲಿಕುಜೆವ್ ಎದುರು ಸೋತರು.

ಟೆನಿಸ್ ಟೂರ್ನಿ: ಫೈನಲ್‌ನಲ್ಲಿ ಎಡವಿದ ಜೇಮ್ಸ್ ಡಕ್ವರ್ಥ್

ಪರ್ಸೆಲ್‌ಗೆ ಬೆಂಗಳೂರು ಓಪನ್ ಗರಿ

• ಮಹಮ್ಮದ್ ನೂಮಾನ್

ಬೆಂಗಳೂರು: ವೇಗ, ಆಕ್ರಮಣ ಮತ್ತು ಚಾಕಚಕ್ಯತೆಯ ಆಟವಾಡಿ ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ರೋಮಾಂಚನ ಉಂಟುಮಾಡಿದ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಪರ್ಸೆಲ್ 3-6, 7-5, 7-6 (7-5) ರಲ್ಲಿ ತಮ್ಮದೇ ದೇಶದ ಜೇಮ್ಸ್ ಡಕ್ವರ್ಥ್ ಅವರನ್ನು ಮಣಿಸಿದರು.

ಮೊದಲ ಸೆಟ್‌ನಲ್ಲಿ ಸೋತು ಎರಡನೇ ಸೆಟ್‌ನಲ್ಲಿ 1-3 ರಲ್ಲಿ ಹಿನ್ನಡೆಯಲ್ಲಿದ್ದ 24 ವರ್ಷದ ಪರ್ಸೆಲ್, ಆ ಬಳಿಕ ಅಮೋಘವಾಗಿ ಮರುಹೋರಾಟ ನಡೆಸಿ ಟ್ರೋಫಿಗೆ ಮುತ್ತಿಕ್ಕಿದರು. ಈ ಜಿದ್ದಾಜಿದ್ದಿನ ಹೋರಾಟ ಎರಡು ಗಂಟೆ 49 ನಿಮಿಷ ನಡೆಯಿತು.

ಕಳೆದ ವಾರ ನಡೆದಿದ್ದ ಚೆನ್ನೈ ಓಪನ್ ಟೂರ್ನಿಯಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದ ಪರ್ಸೆಲ್, ತಮ್ಮ ಭಾರತ ಪ್ರವಾಸವನ್ನು ಸ್ಮರಣೀಯವನ್ನಾಗಿಸಿಕೊಂಡರು. ಚೆನ್ನೈನಲ್ಲೂ ಅವರು ಮೊದಲ ಸೆಟ್ ಸೋತು, ಆ ಬಳಿಕ ಪುಟಿದೆದ್ದು ನಿಂತಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 155ನೇ ಸ್ಥಾನದಲ್ಲಿರುವ ಪರ್ಸೆಲ್, ಫೈನಲ್‌ನಲ್ಲಿ ಲಯ ಕಂಡುಕೊಳ್ಳಲು ಅಲ್ಪ ಸಮಯ ತೆಗೆದುಕೊಂಡರು. ಇಲ್ಲಿ ಎರಡನೇ ಶ್ರೇಯಾಂಕ ಹೊಂದಿದ್ದ ಡಕ್ವರ್ಥ್ ಮೊದಲ ಸೆಟ್‌ನ ನಾಲ್ಕನೇ ಗೇಮ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 3-1 ರಲ್ಲಿ ಮೇಲುಗೈ ಸಾಧಿಸಿದರು. ಆ ಬಳಿಕ ತಮ್ಮ ಸರ್ವ್‌ಗಳಲ್ಲಿ ಪಾಯಿಂಟ್ ಗಳಿಸಿ ಸೆಟ್ ಗೆದ್ದರು.

ವಿಶ್ವದ 128ನೇ ರ‍್ಯಾಂಕ್‌ನ ಆಟಗಾರ ಡಕ್ವರ್ಥ್ ಎರಡನೇ ಸೆಟ್‌ನ ಮೊದಲ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ಆದರೆ ಆರನೇ ಗೇಮ್‌ನಲ್ಲಿ ಡಕ್ವರ್ಥ್ ಅವರ ಸರ್ವ್ ಬ್ರೇಕ್ ಮಾಡಿದ ಪರ್ಸೆಲ್, 3–3 ರಲ್ಲಿ ಸಮಬಲ ಸಾಧಿಸಿದರು. ಅಲ್ಲಿಂದ ಮುಂದೆ ಪರ್ಸೆಲ್ ಪಂದ್ಯದ ಮೇಲೆ ಹಿಡಿತ ಸಾಧಿಸಿದ ರೀತಿ ಸೊಗಸಾಗಿತ್ತು.

ಮೂರನೇ ಸೆಟ್‌ನಲ್ಲಿ ಇಬ್ಬರೂ ಪಟ್ಟು ಬಿಡದೆ ಹೋರಾಡಿದ್ದರಿಂದ 6-6ರಲ್ಲಿ ಸಮಬಲ ಕಂಡುಬಂತು. ಇದರಿಂದ ವಿಜೇತರನ್ನು ನಿರ್ಣಯಿಸಲು ಟೈ ಬ್ರೇಕರ್ ಮೊರೆಹೋಗಲಾಯಿತು.



ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದ ಮ್ಯಾಕ್ಸ್ ಪರ್ಸೆಲ್ ಟ್ರೋಫಿಗೆ ಮುತ್ತಿಕ್ಕಿ ಸಂಭ್ರಮಿಸಿದರು
–ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಮುಖ್ಯಾಂಶಗಳು

- 3-6, 7-5, 7-6 ಸೆಟ್‌ಗಳ ಗೆಲುವು
- ಚಾಂಪಿಯನ್‌ಗೆ ₹14.63 ಲಕ್ಷ ನಗದು ಬಹುಮಾನ
- ಚೆನ್ನೈ ಓಪನ್‌ನಲ್ಲಿ ಗೆದ್ದಿದ್ದ ಪರ್ಸೆಲ್

ಟೈ ಬ್ರೇಕರ್‌ನಲ್ಲಿ ಚುರುಕಿನ ಆಟವಾಡಿದ ಪರ್ಸೆಲ್ 4–1 ರಲ್ಲಿ ಮುನ್ನಡೆ ಪಡೆದು ಎದುರಾಳಿಯ ಮೇಲೆ ಒತ್ತಡ ಹೇರಿದರು. ಡಕ್ವರ್ಥ್ ತಿರುಗೇಟು ನೀಡಲು ಪ್ರಯತ್ನಿಸಿದರಾದರೂ, ಅದಕ್ಕೆ ಅವಕಾಶ ನೀಡದೆ ಪಂದ್ಯ ಗೆದ್ದು ಸಂಭ್ರಮಿಸಿದರು.

ಡಕ್ವರ್ಥ್ ಅವರು 15 ಏಸ್‌ಗಳನ್ನು ಸಿಡಿಸಿದರೂ, ಆರು ಸಲ ಡಬಲ್ ಫಾಲ್ಟ್ಸ್ ಮಾಡಿದ್ದು ಹಿನ್ನಡೆ ಉಂಟುಮಾಡಿತು. ಕೆಲವೊಂದು ಸ್ವಯಂಕೃತ ತಪ್ಪುಗಳನ್ನು ಮಾಡಿದರು. ಮತ್ತೊಂದೆಡೆ ಪರ್ಸೆಲ್ ಅವರು ರಿಟರ್ನ್‌ಗಳು ಮತ್ತು ನೆಟ್ ಬಳಿಯ ಆಟದಲ್ಲಿ ನಿಖರತೆ ತೋರಿದರು.

ಪರ್ಸೆಲ್‌ಗೆ ಬೆಂಬಲ: ಆಸ್ಟ್ರೇಲಿಯಾದ ಸಿಡ್ನಿಯ ಇಬ್ಬರು ಗೆಳೆಯರ ನಡುವಿನ ಹೋರಾಟವನ್ನು ಬೆಂಗಳೂರಿನ ನೂರಾರು ಟೆನಿಸ್ ಪ್ರೇಮಿಗಳು ಕಣ್ತುಂಬಿಕೊಂಡರು. ಫೈನಲ್ ಪಂದ್ಯದಲ್ಲಿ ಪ್ರೇಕ್ಷಕರ ಬೆಂಬಲವು, ಟೂರ್ನಿಯುದ್ದಕ್ಕೂ ಶಾಂತಚಿತ್ತ ಆಟದಿಂದ ಅಭಿಮಾನಿಗಳ ಮನಗೆದ್ದಿದ್ದ ಪರ್ಸೆಲ್ ಅವರ ಪರವಾಗಿತ್ತು. ಕೆಲವರು ಡಕ್ವರ್ಥ್ ಆಟಕ್ಕೂ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀನಿಧಿ ಡೆಕ್ಕನ್, ಡೆಲ್ಲಿ ಎಫ್‌ಸಿಗೆ ಜಯ

ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಿಧಿ ಡೆಕ್ಕನ್ ಮತ್ತು ಎಆರ್‌ಎ ಎಫ್‌ಸಿ ತಂಡಗಳು ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಭಾನುವಾರ ಶ್ರೀನಿಧಿ ಡೆಕ್ಕನ್ 2–0ಯಿಂದ ಕೆಂಕ್ರೆ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ಪೌಮಿಂಥಾಂಗ್ ಮುನ್ಸೊಂಗ್ (21ನೇ ನಿಮಿಷ) ಮತ್ತು ವಿನೀತ್ ಕುಮಾರ್ ವೇಲ್‌ಮುರುಗನ್ (62ನೇ ನಿ.) ಗೋಲು ಹೊಡೆದರು.

ಡಿ ಗುಂಪಿನ ಪಂದ್ಯದಲ್ಲಿ ಎಆರ್‌ಎ ಎಫ್‌ಸಿ 5–0ಯಿಂದ ಕೇರಳ ಯುನೈಟೆಡ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಎಆರ್‌ಎ ತಂಡಕ್ಕಾಗಿ ಶಾನಿದ್ ವಾಲನ್ (5ನೇ ನಿ.), ನರೋ ಹರಿ ಶ್ರೇಷ್ಠ (38ನೇ ನಿ.), ಯಾಮಿ ಲಾಂಗೊ (45 + 3ನೇ ನಿ.), ಫ್ರೆಡ್ಸನ್ ಮಾರ್ಷಲ್ (79ನೇ ನಿ.) ಮತ್ತು ಪ್ರತೀಕ್ ಸ್ವಾಮಿ (87ನೇ ನಿ.) ಗೋಲು ಹೊಡೆದರು.

ಡಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ 2–2ರಿಂದ ಚೆನ್ನೈಯಿನ್ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿತು. ಕಿಕ್‌ಸ್ಟಾರ್ಟ್ ತಂಡಕ್ಕಾಗಿ ಎಡ್ವಿನ್ ರೊಸಾರಿಯಾ (61ನೇ ನಿ.) ಗೋಲು ಗಳಿಸಿದರು. ಇನ್ನೊಂದು ಗೋಲು 'ಉಡುಗೊರೆ' ರೂಪದಲ್ಲಿ ಎದುರಾಳಿ ತಂಡದ ವಿಕಾಸ್ ಯುಮ್ನಮ್ (82ನೇ ನಿ.) ಅವರಿಂದ ಬಂತು. ಚೆನ್ನೈಯಿನ್ ತಂಡದ ಪರ ಸೆಂಥಮಿಲ್ ಎಸ್. (15ನೇ ನಿ.) ಮತ್ತು ಮೊಯಿರಂಗದೆಮ್ ಗಿವ್ಸನ್ ಸಿಂಗ್ (45 + 2ನೇ ನಿ.) ಗೋಲು ಗಳಿಸಿದ್ದರು.

ಸಿ ಗುಂಪಿನ ಮತ್ತೊಂದು ಪಂದ್ಯದಲ್ಲಿ ಡೆಲ್ಲಿ ಎಫ್‌ಸಿ 2–1ರಿಂದ ಬೆಂಗಳೂರು ಎಫ್‌ಸಿ ಎದುರು ಗೆದ್ದಿತು.



ಚೆನ್ನೈಯಿನ್ ಎಫ್‌ಸಿಯ ರಜತ್ ರಾಯ್ (ಎಡ) ಮತ್ತು ಕಿಕ್‌ಸ್ಟಾರ್ಟ್ ಎಫ್‌ಸಿಯ ಸಿಜು ಎಸ್. ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಇರಾನಿ ಕಪ್ ಕ್ರಿಕೆಟ್ ಪಂದ್ಯ: ಸರ್ಫರಾಜ್ ಅಲಭ್ಯ

ಮಯಂಕ್ ಅಗರವಾಲ್‌ಗೆ ನಾಯಕತ್ವ

ನವದೆಹಲಿ (ಪಿಟಿಐ): ಕರ್ನಾಟಕದ ಮಯಂಕ್ ಅಗರವಾಲ್ ಅವರು ಇರಾನಿ ಕಪ್ ಕ್ರಿಕೆಟ್ ಪಂದ್ಯದಲ್ಲಿ 'ರೆಸ್ಟ್ ಆಫ್ ಇಂಡಿಯಾ' ತಂಡದ ನಾಯಕತ್ವ ವಹಿಸಲಿದ್ದಾರೆ.

ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಮಾರ್ಚ್ 1ರಿಂದ ಇರಾನಿ ಕಪ್ ಪಂದ್ಯ ನಡೆಯಲಿದೆ. ರೆಸ್ಟ್ ಆಫ್ ಇಂಡಿಯಾ ಮತ್ತು ಹೋದ ಬಾರಿಯ ರಣಜಿ ಚಾಂಪಿಯನ್ ಮಧ್ಯಪ್ರದೇಶ ತಂಡಗಳು ಸೆಣಸಲಿವೆ.

ಇತ್ತೀಚೆಗೆ ಮುಗಿದ ರಣಜಿ ಕ್ರಿಕೆಟ್ ಟೂರ್ನಿಯಲ್ಲಿ ಮಯಂಕ್ ಗರಿಷ್ಠ ರನ್ ಗಳಿಸಿದ ಆಟಗಾರನಾಗಿದ್ದಾರೆ. ಭಾರತ ಟೆಸ್ಟ್ ತಂಡದಲ್ಲಿ ಮರಳಿ ಸ್ಥಾನ ಪಡೆಯುವ ಕಾತರದಲ್ಲಿರುವ ಅವರು, ಇರಾನಿ ಕಪ್ ಪಂದ್ಯದಲ್ಲಿ ಬಂಗಾಳದ ಅಭಿಮನ್ಯು ಈಶ್ವರನ್ ಜೊತೆಗೂಡಿ ಇನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ.

ಸರ್ಫರಾಜ್ ಅಲಭ್ಯ: ಮುಂಬೈ ಬ್ಯಾಟರ್ ಸರ್ಫರಾಜ್ ಖಾನ್ ಅವರು ಇರಾನಿ ಕಪ್ ಪಂದ್ಯದಿಂದ ಹೊರಗುಳಿದಿದ್ದಾರೆ.

ಐಪಿಎಲ್ ಫ್ರಾಂಚೈಸ್ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಶಿಬಿರದಲ್ಲಿ ಪಾಲ್ಗೊಂಡಿದ್ದ ಸರ್ಫರಾಜ್ ಅವರ ಎಡಗೈ ತೋರುಬೆರಳಿಗೆ ಗಾಯವಾಗಿದೆ. ಇರಾನಿ ಕಪ್ ಪಂದ್ಯದಲ್ಲಿ 'ರೆಸ್ಟ್ ಆಫ್ ಇಂಡಿಯಾ' ತಂಡವನ್ನು ಅವರು ಪ್ರತಿನಿಧಿಸಬೇಕಿತ್ತು.



ಮಯಂಕ್ ಅಗರವಾಲ್

ತಂಡಗಳು: ರೆಸ್ಟ್ ಆಫ್ ಇಂಡಿಯಾ: ಮಯಂಕ್ ಅಗರವಾಲ್ (ನಾಯಕ), ಸುದೀಪ್ ಕುಮಾರ್ ಘರಾಮಿ, ಯಶಸ್ವಿ ಜೈಸ್ವಾಲ್, ಅಭಿಮನ್ಯು ಈಶ್ವರನ್, ಹರ್ವಿಕ್ ದೇಸಾಯಿ, ಮುಕೇಶ್ ಕುಮಾರ್, ಅತಿತ್ ಶೇಠ್, ಚೇತನ್ ಸಕಾರಿಯಾ, ನವದೀಪ್ ಸೈನಿ, ಉಪೇಂದ್ರ ಯಾದವ್, ಮಯಂಕ್ ಮಾರ್ಕಂಡೆ, ಸೌರಭ್ ಕುಮಾರ್, ಆಕಾಶ್ ದೀಪ್, ಬಿ. ಇಂದ್ರಜಿತ್, ಪುಲಕೀತ್ ನಾರಂಗ್, ಯಶ್ ಧುಲ್.

ಮಧ್ಯಪ್ರದೇಶ: ಹಿಮಾಂಶು ಮಂತ್ರಿ (ನಾಯಕ), ರಜತ್ ಪಾಟಿದಾರ್, ಯಶ್ ದುಬೆ, ಹರ್ಷ ಗಾವ್ಲಿ, ಶುಭಂ ಶರ್ಮಾ, ವೆಂಕಟೇಶ್ ಅಯ್ಯರ್, ಅಕ್ಷತ್ ರಘುವಂಶಿ, ಅಮನ್ ಸೋಲಂಕಿ, ಕುಮಾರ್ ಕಾರ್ತಿಕೇಯ, ಸಾರಾಂಶ್ ಜೈನ್, ಅವೇಶ್ ಖಾನ್, ಅಂಕಿತ್ ಕುಶ್ವಾಹ್, ಗೌರವ್ ಯಾದವ್, ಅನುಭವ್ ಅಗರವಾಲ್, ಮಿಹಿರ್ ಹಿರ್ವಾನಿ.

ಸಂತೋಷ್ ಟ್ರೋಫಿ: ಕಾರ್ತಿಕ್ ನೇತೃತ್ವ

ಬೆಂಗಳೂರು: ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ನಾಕೌಟ್ ಹಂತದಲ್ಲಿ ಪಾಲ್ಗೊಳ್ಳುವ ಕರ್ನಾಟಕ ತಂಡವನ್ನು ಕಾರ್ತಿಕ್ ಗೋವಿಂದ ಸ್ವಾಮಿ ಅವರು ಮುನ್ನಡೆಸಲಿದ್ದಾರೆ.

ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಮಾರ್ಚ್ 1 ರಿಂದ 4ರ ವರೆಗೆ ನಡೆಯಲಿರುವ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಕ್ಕೆ 22 ಸದಸ್ಯರ ಕರ್ನಾಟಕ ತಂಡವನ್ನು ಭಾನುವಾರ ಪ್ರಕಟಿಸಲಾಯಿತು. ರಾಜ್ಯ ತಂಡ ಭಾನುವಾರ ರಿಯಾದ್‌ಗೆ ಪ್ರಯಾಣ ಬೆಳೆಸಿದೆ.

ಮಾರ್ಚ್ 1 ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡ, ಸರ್ವಿಸಸ್ ಸವಾಲು ಎದುರಿಸಲಿದೆ.

ತಂಡ: ಕಾರ್ತಿಕ್ ಗೋವಿಂದ ಸ್ವಾಮಿ (ನಾಯಕ), ಸತ್ಯಜಿತ್ ಬೊರ್ದೊಲೊಯ್, ಆರ್.ಶ್ರೀಜಿತ್, ಕೆವಿನ್ ಕೋಶಿ, ಎಂ.ಸುನಿಲ್ ಕುಮಾರ್, ರಾಬಿನ್ ಯಾದವ್, ಜಿ.ನಿಖಿಲ್, ಮನೋಜ್ ಸ್ವಾಮಿ ಕಣ್ಣನ್, ಎ.ಜಾನ್ಸನ್, ಪ್ರಶಾಂತ್ ಕಳಿಂಗ, ಪ್ರದಿಸನ್ ಮರಿಯದಾಸನ್, ಎಂ.ಆರ್.ಸತೀಶ್‌ಕುಮಾರ್, ಎಫ್. ಲಾಲ್‌ರೆಮ್ಟ್ಲುವಾಂಗ, ಬೆಕೆಯ್ ಓರಂ, ಪಿ.ಕಮಲೇಶ್, ಶಾಜನ್ ಫ್ರಾಂಕ್ಲಿನ್, ಅಪ್ಪು, ಪಿ.ಅಂಕಿತ್, ಅಭಿಷೇಕ್ ಶಂಕರ್ ಪವಾರ್, ಸುರೇಂದ್ರ ಪ್ರಸಾದ್, ಕೆ.ರಾಜಗಣಪತಿ, ಜೇಕಬ್ ಜಾನ್ ಕಾಟುಕಾರನ್.


ಮ್ಯಾನೇಜರ್: ಸರವಣ ಧರ್ಮನ್, ಕೋಚ್: ಆರ್. ರವಿಬಾಬು, ಸಹಾಯಕ ಕೋಚ್: ಜಾನ್ ಕೆನೆತ್ ಜಾರ್ಜ್, ಫಿಸಿಯೊ: ರೋಹಿತ್ ಕುಮಾರ್ ಹಲ್ದರ್

ಏಷ್ಯನ್ ಗೇಮ್ಸ್: ಬೆಳ್ಳಿಯಪ್ಪಗೆ ಅರ್ಹತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ಎ.ಬಿ. ಬೆಳ್ಳಿಯಪ್ಪ ಸೇರಿ ಭಾರತದ ಮೂವರು ಓಟಗಾರರು ನವದೆಹಲಿ ಮ್ಯಾರಥಾನ್‌ನಲ್ಲಿ ಪೋಡಿಯಂ ಫಿನಿಶ್ ಮಾಡಿ 2023ರ ಸೆಪ್ಟೆಂಬರ್‌ನಲ್ಲಿ ಚೀನಾದ ಹ್ಯಾಂಗ್‌ಜುನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸಿದರು.

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಭಾನುವಾರ ನಡೆದ ಮ್ಯಾರಥಾನ್‌ನಲ್ಲಿ ಬೆಳ್ಳಿಯಪ್ಪ, ಮಾನ್ ಸಿಂಗ್ ಹಾಗೂ ಕಾರ್ತಿಕ್ ಕುಮಾರ್ ಮೂವರೂ ಏಷ್ಯಾ ಅರ್ಹತಾ ಗುರಿಯಾದ 2 ಗಂಟೆ 15 ನಿಮಿಷಗಳೊಳಗೆ ಓಟ ಪೂರ್ಣಗೊಳಿಸಿದರು. ಮಾನ್ ಸಿಂಗ್(2 ಗಂಟೆ 14.13 ನಿ.) ಚಿನ್ನ, ಬೆಳ್ಳಿಯಪ್ಪ (2 ಗಂಟೆ 14.15 ನಿ.) ಬೆಳ್ಳಿ ಮತ್ತು ಕಾರ್ತಿಕ್ ಕುಮಾರ್ (2 ಗಂಟೆ 14.19 ನಿ.) ಕಂಚಿನ ಪದಕ ಗೆದ್ದರು.



ಬೆಳ್ಳಿಯಪ್ಪ

ಟೆಸ್ಟ್: ಸೋಲು ತಪ್ಪಿಸಲು ಕಿವೀಸ್ ಹೋರಾಟ

ವೆಲಿಂಗ್ಟನ್ (ಎಪಿ): ನ್ಯೂಜಿಲೆಂಡ್ ತಂಡದವರು ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಸೋಲು ತಪ್ಪಿಸಲು ಹೋರಾಟ ನಡೆಸುತ್ತಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ 226 ರನ್‌ಗಳ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್, ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿದೆ. ಇನ್ನೂ ಎರಡು ದಿನಗಳ ಆಟ ಬಾಕಿಯಿದ್ದು, ಆತಿಥೇಯ ತಂಡ 24 ರನ್‌ಗಳ ಹಿನ್ನಡೆಯಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ ಮೊದಲ ಇನಿಂಗ್ಸ್ 8 ವಿಕೆಟ್‌ಗಳಿಗೆ 435 ಡಿಕ್ಲೇರ್ಡ್. ನ್ಯೂಜಿಲೆಂಡ್: ಮೊದಲ ಇನಿಂಗ್ಸ್ 209 ಮತ್ತು ಎರಡನೇ ಇನಿಂಗ್ಸ್ 83 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 203 (ಟಾಮ್ ಲಥಾಮ್ 83, ಡೆವೊನ್ ಕಾನ್ವೆ 61, ಕೇನ್ ವಿಲಿಯಮ್ಸನ್ ಬ್ಯಾಟಿಂಗ್ 25, ಹೆನ್ರಿ ನಿಕೊಲ್ಸ್ ಬ್ಯಾಟಿಂಗ್18)